CC-O. In Public Domain. Digitized by eGangotri

ಶಂಕರ ಚಂದ್ರಮೌಳೀಶ್ವರ ಶೃಂಗೇರಿ

(ಸಂಶೋಧನ ಪ್ರಬಂಧ)

ಲ. ನ. ಶಾಸ್ತ್ರೀ

ವಿದ್ಯಾಶಂಕರ ಪ್ರಕಾಶನ
ಮೈಸೂರು-೪.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಕರ ಚಂದ್ರಮೌಳೀಶ್ವರ ಶೃಂಗೇರಿ

(ಸಂಶೋಧನ ಪ್ರಬಂಧ)

ಲ. ನ. ಶಾಸ್ತ್ರೀ

ವಿದ್ಯಾಶಂಕರ ಪ್ರಕಾಶನ
ಮೈಸೂರು–೪.

Sri Vidyabharathi Book Centre, Sringeri

CC-O. In Public Domain. Digitized by eGangotri

SHRI SHANKARA, CHANDRAMOULISHWARA SRINGERI Research essay in Kannada by Sri L. N. Sastry

Published by :

M/s VIDYASHANKARA PRAKASHANA
30, Devirammanni Agrahara, Mysore - 570004

First Edition :

4 - 6 - 1982

Copy Right :

Smt. Lakshminarasu

Price :

Rs. 6/-

Printed by :

M/s. Shree Sharada Mudrana Prakashanalaya,
Shankar Mutt, MYSORE-570 004

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿನ್ನಹ

ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಶೃಂಗೇರಿ ಮಠದಲ್ಲಿ ಬಹಳ ಪ್ರಾಚೀನಕಾಲದಿಂದಲೂ ಶ್ರೀ ಚಂದ್ರಮೌಳೀಶ್ವರ ಲಿಂಗಕ್ಕೆ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಧ್ಯಾಕಾಲಗಳಲ್ಲಿ ಅಭಿಷೇಕ ಪೂಜಾದಿಗಳು ನಡೆಯುತ್ತಿವೆ. ಬೆಳಗಿನ ಮತ್ತು ಸಂಧ್ಯಾಕಾಲದ ಪೂಜಾಭಿಷೇಕಗಳು ಭಕ್ತರ ಸಮ್ಮುಖದಲ್ಲಿ ನಡೆಯುತ್ತವೆ. ಮಧ್ಯಾಹ್ನ ಕಾಲದಲ್ಲಿ ಶ್ರೀ ಸ್ವಾಮಿಗಳವರಿಂದ ಖಾಸಾ ಪೂಜೆಯು ನಡೆಯುತ್ತದೆ. ಈ ಲಿಂಗದೊಡನೆ ಶ್ರೀ ನರಸಿಂಹ ಸಾಲಿಗ್ರಾಮವೂ ಇದ್ದು, ಅದಕ್ಕೂ ಏಕಕಾಲದಲ್ಲಿ ಪೂಜಾಭಿಷೇಕಗಳು ನಡೆಯುತ್ತವೆ.

ಶ್ರೀ ಚಂದ್ರಮೌಳೀಶ್ವರ ಲಿಂಗವು ಸ್ಫಟಿಕದ್ದಾಗಿದ್ದು, ಅದರ ಶಿಖರವು ಚಂದ್ರನಂತೆ ಪ್ರಕಾಶವುಳ್ಳದ್ದಾಗಿದೆ. ಇಲ್ಲಿ ಚಂದ್ರನು ಜ್ಞಾನ ಮತ್ತು ಆನಂದಗಳ ಪ್ರತೀಕ. ಸ್ಫಟಿಕ ಲಿಂಗವು ನಿರಾಕಾರ ಮತ್ತು ಗುಣಾತೀತವಾದ ಬ್ರಹ್ಮವಸ್ತುವಿನ ಸಂಕೇತವಾಗಿದ್ದು, ಅದರ ಅರ್ಚನೆ ಪೂಜೆಗಳು ಆತ್ಮ ಸಾಧನೆಯ ಸಂಕೇತವೇ ಆಗಿವೆ. ಹಾಗೆಯೇ ಶ್ರೀ ನೃಸಿಂಹನ ಅರ್ಚನೆಯೂ ಸಹ. ಶ್ರೀ ನೃಸಿಂಹನ ಸಿಂಹ ಮುಖವು ಪರಮಾತ್ಮನನ್ನೂ, ನರ ಶರೀರವು ಜೀವಾತ್ಮನನ್ನೂ ಸಂಕೇತಿಸಿ, ನೃಸಿಂಹೋಪಾಸನೆಯು ಜೀವ ಪರಮಾತ್ಮರ ಐಕ್ಯತೆಯನ್ನೇ ಸಾರುತ್ತದೆ.

ಶ್ರೀ ಶಂಕರಾಚಾರ್ಯರಿಗೆ ಈ ಚಂದ್ರಮೌಳೀಶ್ವರ ಲಿಂಗವು, ಶೃಂಗೇರಿಯ ಸಮೀಪದಲ್ಲಿ ಇರುವ ಬಾಳೆಹಳ್ಳಿ ಶೈವಮಠದ (ಈಗ ಬಾಳೇಹೊನ್ನೂರು ಎಂದು ಅದರ ಹೆಸರು) ಸ್ಥಾಪಕರಾಗಿದ್ದ ಶ್ರೀ ರೇಣುಕಾಚಾರ್ಯ ಅಥವಾ ರೇವಣಸಿದ್ಧರಿಂದ ಕೊಡಲ್ಪಟ್ಟಿತು; ಎಂಬ ಪ್ರಚಾರವು ಆಗಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಪತ್ರಿಕಾ ಲೇಖನಗಳ ಮೂಲಕವೂ, ಪುಸ್ತಕಗಳ ಮೂಲಕವೂ ನಡೆಯುತ್ತಿದೆ. ಶಂಕರರು ಕೈಯೊಡ್ಡಿ ಕುಳಿತಿರುವ ರೇಣುಕರು ಲಿಂಗವನ್ನು ಕೊಡುತ್ತಿರುವ ಚಿತ್ರ ಪಟವೂ ಬರೆಸಲ್ಪಟ್ಟು ಅಚ್ಚಾಗಿ ಪ್ರಚಾರದಲ್ಲಿದೆ. ಅಷ್ಟೇ ಅಲ್ಲದೆ ಒಂದು ಶಿಲ್ಪಕೃತಿಯೂ ಕಡೆಸಲ್ಪಟ್ಟು ಬಾಳೆಹಳ್ಳಿಯ ಮಠದಲ್ಲಿ ಸ್ಥಾಪಿಸಲ್ಪಟ್ಟಿದೆ.

ಈ ವಿಷಯವಾಗಿ ಜಿಜ್ಞಾಸೆಗಳು ಆಗಾಗ ಜರುಗುತ್ತಿದ್ದು, ಶ್ರೀ ಶಂಕರವಿಜಯ ಕಾವ್ಯವನ್ನು ಕನ್ನಡದಲ್ಲಿ ರಚಿಸಿ ಖ್ಯಾತರಾದ ಕುಮಾರ ಮಾಧವ ಶ್ರೀ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳು 1935 ರಲ್ಲಿಯೇ ಈ ವಿಷಯವಾಗಿ ಪುಟ್ಟ ಪುಸ್ತಕವನ್ನು ಬರೆದು, ಶ್ರೀ ಶಂಕರರಿಗೂ ಶ್ರೀ ರೇವಣರಿಗೂ ಯಾವ ವಿಧವಾದ ಸಂಬಂಧವೂ ಇಲ್ಲವೆಂಬುದನ್ನು ಸಾಧಾರ ಪೂರ್ವಕವಾಗಿ ಸ್ಥಾಪಿಸಿದ್ದರು. ಆದರೂ ಈ ವಿಷಯವನ್ನು ಕೂಲಂಕಷವಾಗಿ ಎಲ್ಲ ದೃಷ್ಟಿಕೋನಗಳಲ್ಲೂ ವಿಚಾರ ಮಾಡುವುದು ಆವಶ್ಯಕವಾಗಿತ್ತು. ಅಂತಹ ಪ್ರಯತ್ನವೊಂದನ್ನು ನಾನು ಈ ಕೃತಿಯಲ್ಲಿ ಮಾಡಿರುತ್ತೇನೆ.

ಈ ಪುಸ್ತಕ ರಚನೆಗೆ ಹಲವಾರು ಗ್ರಂಥಗಳ ನೆರವನ್ನು ಪಡೆದಿದ್ದೇನೆ. ಎಪಿಗ್ರಾಫಿಯಾ ಕರ್ನಾಟಕ ಸಂಪುಟಗಳು, ಮೈಸೂರು ಶಾಸನದ ಇಲಾಖೆಯ ವರದಿಗಳು, ಪತ್ರಿಕಾಲೇಖನಗಳು ಮುಂತಾದುವನ್ನು ಬಳಸಿಕೊಂಡಿರುತ್ತೇನೆ. ನನಗೆ ಅಗತ್ಯವಾಗಿದ್ದ ಆಕರ ಗ್ರಂಥಗಳನ್ನು ಒದಗಿಸಿದವರು ಶಾಸನದ ಇಲಾಖೆಯ ಶ್ರೀ ಡಿ. ವಿ. ದೇವರಾಜ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಹೊಸಮನೆ ನಾಗರಾಜರಾವ್. ಹಸ್ತಪ್ರತಿಯನ್ನು ಅಚ್ಚಿಗಾಗಿ ಸಿದ್ಧಪಡಿಸಿಕೊಟ್ಟವರು ಶ್ರೀ ಎಸ್. ಎ. ಶಾಮರಾವ್, ಮುದ್ರಣ ಮಾಡಿಕೊಟ್ಟವರು ಶ್ರೀ ಶಾರದಾ ಮುದ್ರಣ ಪ್ರಕಾಶನಾಲಯದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪಿ. ಆರ್. ಹರಿಹರನ್. ಕರಡನ್ನು ತಿದ್ದುವುದರಲ್ಲಿ ನೆರವಾದವರು ಶ್ರೀ ಸುಬ್ರಹ್ಮಣ್ಯ ಶೆಟ್ಟಿ ಮತ್ತು ಶ್ರೀ ಹೆಚ್. ವಿ. ಸುಬ್ಬರಾಮಯ್ಯ. ಈ ಲೇಖನವು ಶ್ರೀ ಶಂಕರಕೃಪಾ ಪತ್ರಿಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ 9 ನೇ ಸಂಪುಟದಲ್ಲಿ ಅಚ್ಚಾಗಿ ಪ್ರಕಟವಾಗಿತ್ತು. ಈಗ ಪುಸ್ತಕ ರೂಪದಲ್ಲಿ, ಅಗತ್ಯವಾದ ಅನುಬಂಧಗಳೊಡನೆ ಪ್ರಕಟವಾಗುತ್ತಿದೆ.

ಈ ಕೃತಿಯ ರಚನೆಗೆ ಪ್ರೇರಕರಾದ ಮಹನೀಯರಿಗೂ, ಇದರ ಪ್ರಕಟಣೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾದ ಮಿತ್ರರೆಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು ಸಲ್ಲುತ್ತವೆ.

ಜ್ಯೇಷ್ಠ ಶುದ್ಧ ತ್ರಯೋದಶಿ
ಶ್ರೀ ವಿದ್ಯಾರಣ್ಯ ಜಯಂತಿ
4-6-1982
ಮೈಸೂರು–570004

ಇತಿ ಲೇಖಕ
ಹುರಗಲವಾಡಿ
ಲಕ್ಷ್ಮೀನರಸಿಂಹ ಶಾಸ್ತ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಕರ ಅರಿಕೆ

ಶ್ರೀ ಚಂದ್ರಮೌಳೀಶ್ವರ ಲಿಂಗದಬಗೆಗೆ ಸಮಗ್ರವಾದ, ವೈಚಾರಿಕವಾದ ಕೃತಿಯೊಂದನ್ನು ಹೊರತರುವ ಅಪೇಕ್ಷೆ ನಮಗೆ ಬಹುಕಾಲದಿಂದ ಇದ್ದು, ಇಂದು ಆ ಅಪೇಕ್ಷೆ ಈಡೇರಿದೆ. ನಮ್ಮ ಎಲ್ಲ ಪುಸ್ತಕಗಳನ್ನೂ ಆದರದಿಂದ ಸ್ವಾಗತಿಸಿದ ಸಹೃದಯರು, ಈ ಪುಸ್ತಕವನ್ನೂ ಸ್ವಾಗತಿಸುವರೆಂದು ನಂಬಿದ್ದೇವೆ.

ಜ್ಯೇಷ್ಠ ಶುದ್ಧ ತ್ರಯೋದಶಿ
ಶುಕ್ರವಾರ, 4-6-82
ಮೈಸೂರು - 570 004

ಪ್ರಕಾಶಕರು

Sri Vidyabharathi Book Centre, Sringeri

CC-O. In Public Domain. Digitized by eGangotri

ಇತಿಹಾಸದ ಅಧ್ಯಯನ, ಸಂಶೋಧನೆಯಲ್ಲಿ ಆಸಕ್ತಿ ಮೂಡಿಸಿದ

ಖ್ಯಾತ ವಿದ್ವಾಂಸರಾದ

ಡಾ|| ಎಸ್. ಶ್ರೀಕಂಠಶಾಸ್ತ್ರೀ

ಮತ್ತು

ಶ್ರೀ ಕೆ. ಆರ್. ವೆಂಕಟರಾಮನ್

ಈ ಹಿರಿಯರಿಗೆ

ಈ ಕೃತಿ

ಸಮರ್ಪಿತ

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವೋ ಬ್ರಹ್ಮೈವ ನಾನ್ಯೋ ಜಗದಿದಮಖಿಲಂ ನಶ್ವರಂ ಬ್ರಹ್ಮ ಸತ್ಯಂ
ಇತ್ಥಂ ವೇದಾನ್ತತತ್ತ್ವಂ ಮೃದುಮಧುರಪದ್ಯೈಸ್ಸನ್ತತಂ ಬೋಧಯನ್ತಃ ।

ಸದ್ಧರ್ಮಸ್ಥಾಪಕಾ ಯೇ ಭುವನಗುರುವರಾಃ ಶೃಂಗಗಿರ್ಯಾಶ್ರಮಸ್ಥಾಃ
ತೇಷಾಮವ್ಯಾಹತಾಲಿರ್ಜಯತು ಭುವಿ ಸದಾ ಲೋಕಕಲ್ಯಾಣಕರ್ತ್ರೀ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರ, ಚಂದ್ರಮೌಳೀಶ್ವರ, ಶೃಂಗೇರಿ

೧. ಪ್ರಸ್ತಾವನೆ

ಶ್ರೀಮದಾದಿಶಂಕರ ಭಗವತ್ಪಾದಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶೃಂಗೇರಿ ಪೀಠದಲ್ಲಿಯೂ, ಇತರ ಮೂರು ಆಮ್ನಾಯ ಪೀಠಗಳಲ್ಲಿಯೂ (ಬದರಿ, ದ್ವಾರಕಾ, ಮತ್ತು ಪುರಿ) ಶ್ರೀ ಚಂದ್ರಮೌಳೀಶ್ವರ ಲಿಂಗವು ಪ್ರಧಾನ ಪೂಜಾಪ್ರತೀಕವಾಗಿದೆ. ಅಂತೆಯೇ ಬಹು ಪ್ರಾಚೀನ ಕಾಲದಿಂದಲೂ ಇತರ ಹಲವುಉ ಮಠಗಳಲ್ಲಿಯೂ ಚಂದ್ರಮೌಳೀಶ್ವ ಸಾಮಾಕವಾದ ಲಿಂಗಗಳಿವೆ. ಎಲ್ಲೆಡೆಗಳಲ್ಲಿಯೂ ಈ ಲಿಂಗಗಳಿಗೆ ವಿಶೇಷವಾದ ಪೂಜಾಭಿಷೇಕಗಳು ನೆರವೇರುತ್ತಿವೆ. ಶೃಂಗೇರಿ ಪೀಠದಲ್ಲಿರುವ ಸ್ಫಟಿಕಲಿಂಗವು ಭಕ್ತರ ಕಣ್ಮನಗಳನ್ನು ಸೂರೆಗೊಳ್ಳುತ್ತ ತನ್ನ ಆರಾಧಕ ಗುರುವರೇಣ್ಯರು ಯಾತ್ರೆ ಕೈಗೊಂಡ ಸ್ಥಳಗಳಲ್ಲೆಲ್ಲಾ ಸುವೃಷ್ಟಿಯನ್ನು ಕರೆದು ತಣ್ಪನ್ನುಂಟುಮಾಡುತ್ತಿದೆ. ಈ ಲಿಂಗವು ಶ್ರೀ ಶಂಕರ ಭಗವತ್ಪಾದರಿಂದಲೇ ಅರ್ಚಿಸಲ್ಪಟ್ಟು, ಅನಂತರ ಶೃಂಗೇರಿ ಪೀಠವನ್ನಲಂಕರಿಸಿದ ಅವರ ಶಿಷ್ಯಪರಂಪರೆಯಿಂದ ಅವಿಚ್ಛಿನ್ನವಾಗಿ ಇಂದಿಗೂ ಪೂಜೆಗೊಳ್ಳುತ್ತಿರುವುದು ಎಲ್ಲರೂ ಅರಿತ ಸಂಗತಿಯಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಲಿಂಗವು ಶ್ರೀ ಶಂಕರಾಚಾರ್ಯರಿಗೆ ಹೇಗೆ ಲಭಿಸಿತು ? ಶೃಂಗೇರೀ ಪೀಠದಲ್ಲಿ ಈ ಹೆಸರಿನ ಲಿಂಗವು ಇದೊಂದೆಯೇ ? ಅಥವಾ ಇನ್ನೂ ಹಲವಾರು ಲಿಂಗಗಳು ಇವೆಯೇ ? ಹಾಗೆ ಹಲವಾರು ಇದ್ದಲ್ಲಿ ಅವುಗಳು ಯಾವಾಗ ಹೇಗೆ ಬಂದವು ? ಇತ್ಯಾದಿ ವಿಮರ್ಶೆಯೇ ಈ ಪ್ರಬಂಧದ ಪ್ರಧಾನವಾದ ಉದ್ದೇಶ. ಮೊದಲು ಶ್ರೀ ಶಂಕರರ ಜೀವನ ಚರಿತ್ರೆಯಲ್ಲಿ ಇದಕ್ಕೆ ಇರುವ ಆಧಾರಗಳನ್ನು ನೋಡೋಣ.

ಶ್ರೀ ಶಂಕರರ ಜೀವನ ಚರಿತ್ರೆಯು ಸ್ಕಾಂದ ಪುರಾಣಾಂತರ್ಗತವಾದ ಆರ್ಷೇಯ ಪುರಾಣಗಳಲ್ಲೊಂದಾದ ಶಿವರಹಸ್ಯದಲ್ಲಿ ೧ ಸ್ವಲ್ಪಮಟ್ಟಿಗೆ ವಿವರಿಸಲ್ಪಟ್ಟಿದೆ. ಅಲ್ಲಿನ ಚರಿತ್ರೆಯ ಪ್ರಕಾರವಾಗಿ ಪರಶಿವನೇ ಸಾಕ್ಷಾತ್ತಾಗಿ ಪಂಚಲಿಂಗಗಳನ್ನು ಶ್ರೀ ಶಂಕರಾಚಾರ್ಯರಿಗೆ ಅನುಗ್ರಹಿಸಿದನೆಂದು ಹೇಳಿದೆ. ೨. ಆಚಾರ್ಯರಿಂದಲೇ ಅವುಗಳು ಶೃಂಗೇರಿ, ಬದರಿ, ದ್ವಾರಕಾ, ಪುರಿ ಪೀಠಗಳಲ್ಲಿದ್ದ ಶಿಷ್ಯರಿಗೆ ಅನುಗ್ರಹಪೂರ್ವಕವಾಗಿ ಕೊಡಲ್ಪಟ್ಟು ಉಳಿದೊಂದು ಲಿಂಗವನ್ನು ಆಚಾರ್ಯರು ಚಿದಂಬರ ಕ್ಷೇತ್ರದಲ್ಲಿ ಸ್ವಯಂಪ್ರತಿಷ್ಠೆ ಮಾಡಿದರೆಂದು ಸಂಪ್ರದಾಯದಲ್ಲಿ ಶ್ರದ್ಧೆಯುಳ್ಳ ಬಹುಜನ ನಂಬುತ್ತಾರೆ. ೩ ಶೃಂಗೇರೀ ಪೀಠದಲ್ಲಿಯೂ ಇತರ ಪೀಠಗಳಲ್ಲಿಯೂ ಚಂದ್ರಮೌಳೀಶ್ವರ ಲಿಂಗದ ವಿಷಯವಾಗಿ ನಮಗೆ ದೊರಕಿರುವ ವಿವರಣೆಗಳೂ ಇದಕ್ಕೆ ಅನುಗುಣವಾಗಿಯೇ ಇರುವುದರಿಂದ ಈ ನಂಬಿಕೆಗೆ ಆಧಾರ ದೊರೆತಂತೆ ಆಗುತ್ತದೆ.

---

೧ ಈ ಪುರಾಣದ ಕಾಲವು ಕ್ರಿ. ಶ. ಆರನೆಯ ಶತಮಾನವೆಂದು ಡಾ|| ಎಸ್. ಶ್ರೀಕಂಠಶಾಸ್ತ್ರಿಗಳವರು ಅಭಿಪ್ರಾಯ ಪಟ್ಟಿದ್ದಾರೆ. [ಭಾರತೀಯ ಸಂಸ್ಕೃತಿ – ಪುಟ ೮೯] ಈ ಪುರಾಣವು ಕಾಲ್ಪನಿಕ ಕಥನಕಾರರ ಕೈಗೆ ಸಿಕ್ಕಿ ಕಾಲಕಾಲಕ್ಕೆ ವಿಗೂಪಹೊಂದಿ ಈಗ ಬೃಹತ್ತಾಗಿ ಬೆಳದಿದೆಯೆಂದೂ ಹಲವು ವಿದ್ವಾಂಸರ ಅಭಿಪ್ರಾಯ.

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀ ಚಿದ್ವಿಲಾಸಯತಿಯು ರಚಿಸಿರುವ 'ಶಂಕರವಿಜಯ' ಕಾವ್ಯದಲ್ಲಿಯೂ ಚಂದ್ರಮೌಳೀಶ್ವರ ಲಿಂಗವು ಶಿವನಿಂದ ಕ್ರಮವಾಗಿ ಶಂಕರರಿಗೆ ಬಂದಿತೆಂದು ಹೇಳಿದೆ. ೪ ಶಿವರಹಸ್ಯದಲ್ಲಿರುವ ವಿಷಯವೇ ಚಿದ್ವಿಲಾಸರ

---

೨ ಭಿನ್ನೇವೇದ್ಯೈಕ ಸಂಸಿದ್ಧೇ ಅದ್ವೈತೇ ದ್ವೈತವಾಕ್ಯತಃ
ತದ್ಭೇದಗಿರಿವಜ್ರಸ್ತ್ವಂ ಸಂಜಾತೋಽಸಿಮುದಂಶತಃ ||
ದ್ವಾತ್ರಿಂಶತ್ ಪರಮಾಯುಸ್ತೇ ಶೀಘ್ರಂ ಕೈಲಾಸಮಾವಸ
ಏತತ್ ಪ್ರತಿಗ್ರಹಾಣತ್ವಂ ಪಂಚಲಿಂಗಂ ಸುಪೂಜಯ ||
ಭಸ್ಮರುದ್ರಾಕ್ಷ ಸಂಪನ್ನಃ ಪಂಚಾಕ್ಷರ ಪರಾಯಣಃ
ಶತರುದ್ರಾವರ್ತನೈಶ್ಚ ತಾರೇಣ ಭಷಿತೇನ ಚ ||
ಬಿಲ್ವಪತ್ರೈಶ್ಚಕುಸುಮೈಃ ನೇವೇದ್ಯೈರ್ವಿವಿಧೈರಪಿ
ತ್ರಿವಾರಂ ಸಾವಧಾನೇನ ಗಚ್ಛ ಸರ್ವಜಯಾಯ ಚ ||
ತ್ವದರ್ಥೇ ಕೈಲಾಸಾಚಲ ವರಸುಪಾಲಿಗತ ಮಹಾ-
ಸಮುದ್ಯಚ್ಚಂದ್ರಾಭಂ ಸ್ಫಟಿಕ ಧವಲಂ ಲಿಂಗಕುಲಕಮ್ ||
ಸಮಾನೀತಂ ಸೋಽವೋದ್ಯತ ವಿಮಲ ಮೌಲ್ಯರ್ಚನ ಪರಂ
ಕಲೌಲಿಂಗಾರ್ಚಾಯಾಂ ಭವತಿ ಹಿ ವಿಮುಕ್ತಿ : ಪರತರಾ||

(ಶ್ಲೋ|| ೨೧ ರಿಂದ ೪೫ ಶಿವರಹಸ್ಯ ನವಮಾಂಶೇ ಷೋಡಶೋಽಧ್ಯಾಯಃ)

ಈ ಚಂದ್ರಮೌಳೀಶ್ವರ ಲಿಂಗಕ್ಕೆ ಈಗಲೂ, ಪ್ರತಿದಿನವೂ ತ್ರಿಕಾಲಗಳಲ್ಲಿ ಅಭಿಷೇಕ, ಪೂಜಾದಿಗಳು ನಡೆಯುತ್ತವೆ.

೩ ಶಂಕರರು ಕೈಲಾಸದಿಂದ ತಂದ ಐದು ಸ್ಫಟಿಕ ಲಿಂಗಗಳನ್ನು ನಾಲ್ಕು ಪ್ರಸಿದ್ಧವಾದ ಕ್ಷೇತ್ರಗಳಲ್ಲಿ ಸ್ಥಾಪಿಸಿದರೆಂದೂ; ಶೃಂಗೇರಿಯಲ್ಲಿ ಭೋಗಲಿಂಗವನ್ನೂ, ಚಿದಂಬರದಲ್ಲಿ ಮೋಕ್ಷಲಿಂಗವನ್ನೂ, ಬದರಿಯಲ್ಲಿ ಮುಕ್ತಿಲಿಂಗವನ್ನೂ, ನೇಪಾಲದ ಪಶುಪತಿನಾಥದಲ್ಲಿ ವೀರಲಿಂಗವನ್ನೂ ಪ್ರತಿಷ್ಠಿಸಿ, ಐದನೆಯ ಯೋಗಲಿಂಗವನ್ನು ತಮ್ಮ ಬಳಿಯೇ ಇಟ್ಟುಕೊಂಡು ಅರ್ಚನೆ ಮಾಡುತ್ತಿದ್ದರೆಂಬ ಇನ್ನೊಂದು ಅಭಿಪ್ರಾಯವುಂಟು. ಚಿದಂಬರ ಕ್ಷೇತ್ರದಲ್ಲಿ ಶ್ರೀ ನಟರಾಜನ ಸನ್ನಿಧಿಯಲ್ಲಿ ಇರುವ ಶ್ರೀ ಚಂದ್ರಮೌಳೀಶ್ವರ ಲಿಂಗವು ಎಲ್ಲ ರೀತಿಯಲ್ಲಿಯೂ ಶೃಂಗೇರಿಯ ಪೀಠದಲ್ಲಿರುವ ಲಿಂಗವನ್ನೇ ಹೋಲುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲಕ್ಕೆ ಪೂರಕ ವಿಷಯಗಳೊಡಗೂಡಿ ಈ ರೀತಿಯಾಗಿ ಮೂಡಿ ಬಂದಿತೆಂದು ಹೇಳಬಹುದು. ಚಂದ್ರಮೌಳೀಶ್ವರ ಲಿಂಗದೊಡನೆ ರತ್ನಗರ್ಭ ಗಣಪತಿಯೂ ಕೊಡಲ್ಪಟ್ಟಿತ್ತೆಂದು ಚಿದ್ವಿಲಾಸರು ಹೇಳಿರುವುದು ಶಿವ ರಹಸ್ಯದಲ್ಲಿಲ್ಲ.

ಶೃಂಗೇರಿಯ ಪೀಠದಲ್ಲಿ ೨೭ ನೆಯ ಜಗದ್ಗುರುಗಳಾಗಿದ್ದ ದ್ವಿತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರ ೫ ಆಸ್ಥಾನ ಪಂಡಿತರಾಗಿದ್ದ ಕಾಶೀ ಲಕ್ಷ್ಮಣಶಾಸ್ತ್ರೀ ಎಂಬುವರು ಬರೆದಿರುವ 'ಗುರುವಂಶಕಾವ್ಯ' ಎಂಬ ಶೃಂಗೇರಿ ಪೀಠದ ಆಚಾರ್ಯರುಗಳ ಚಾರಿತ್ರಿಕ ಕಥನ ಕಾವ್ಯದಲ್ಲಿಯೂ ಚಂದ್ರಮೌಳೀಶ್ವರ ಲಿಂಗವನ್ನು ಕುರಿತು ಬೇರೆಯೇ ಆದ ವಿವರಣೆಯು ಬಂದಿರುತ್ತದೆ.

ಶ್ರೀ ಶಂಕರರು ಸುರೇಶ್ವರಾಚಾರ್ಯರಿಗೆ ಶೃಂಗೇರಿ ವ್ಯಾಖ್ಯಾನ ಪೀಠದಲ್ಲಿ ಪಟ್ಟಾಭಿಷೇಕವನ್ನು ಮಾಡಿದ ಅನಂತರ ಸಿದ್ಧರು ಕೊಟ್ಟಿದ್ದ ಚಂದ್ರಮೌಳೀ–ಶ್ವರ ಲಿಂಗವನ್ನೂ ರತ್ನಗರ್ಭ ಗಣಪತಿಯನ್ನೂ ವಿಶ್ವರೂಪ ಪರನಾಮರಾದ ಶ್ರೀ ಸುರೇಶ್ವರರಿಗೆ ಕೊಟ್ಟು, ಇದನ್ನು ಸದಾ ಪೂಜಿಸುತ್ತಿರಬೇಕೆಂದು ಹೇಳಿದರು. ೬ ಎಂದು ಗುರುವಂಶ ಕಾವ್ಯದಲ್ಲಿ ಹೇಳಿದೆ. ಈ ವಿವರಣೆಯು ಬರುವ ಶ್ಲೋಕದಲ್ಲಿ 'ಸುಸಿದ್ಧದತ್ತಂ' ಎಂಬುದಕ್ಕೆ 'ರೇವಣಸಿದ್ಧಯೋಗಿನಾದತ್ತಂ' ಎಂದು ಕಾಶೀ ಲಕ್ಷ್ಮಣಶಾಸ್ತ್ರಿಗಳೇ ಬರೆದದ್ದೆಂದು ಹೇಳಲ್ಪಡುವ ಒಂದು ವ್ಯಾಖ್ಯಾನವೂ ಇದೆ. ಈ ರೇವಣಸಿದ್ಧಯೋಗಿಯು ಶೃಂಗೇರಿಯ ಸಮೀಪದಲ್ಲಿ ಇರುವ ಪಂಚಾಚಾರ್ಯ ವೀರಶೈವ ಪೀಠಗಳಲ್ಲಿ

---

೪ ಇತ್ಯುಕ್ತ್ವಾತ್ರ ಚಂದ್ರಮೌಲೀಶಂ ರತ್ನ ಗರ್ಭ ಗಣಾಧಿಪಂ ಶಿವಶ್ಚ ಕ್ರಮಾದಿಹಾಯಾತಂದದೌ ತಸ್ಮೈ ಸದೇಶಿಕಃ ।

ಇಲ್ಲಿ ಕ್ರಮವಾಗಿ ಎಂದರೆ ಪರಶಿವನಿಂದ ಆರಂಭವಾಗಿ, ವಿಷ್ಣು, ಬ್ರಹ್ಮ, ವಶಿಷ್ಠ, ಶಕ್ತಿ, ಪರಾಶರ, ವೇದವ್ಯಾಸ, ಶುಕ, ಗೌಡಪಾದರಿಂದ ಶ್ರೀ ಗೋವಿಂದ ಭಗವತ್ಪಾದರಿಗೂ. ಅವರಿಂದ ಶಂಕರಾಚಾರ್ಯರಿಗೂ ಶ್ರೀ ಚಂದ್ರಮೌಳೀಶ್ವರ ಲಿಂಗವು ಬಂದಿತೆಂದು ಧ್ವನಿತವಾಗುತ್ತದೆ.

೫ ಈ ಸ್ವಾಮಿಗಳವರ ಕಾಲ ೧೭೦೫ ರಿಂದ ೧೭೪೧ (Mysore Gazetter P. 1176)

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದಾದ ಭದ್ರಾನದಿಯ ತೀರದಲ್ಲಿರುವ ಬಾಳೆಯಹಳ್ಳಿ (ರಂಭಾಪುರೀ) ಮಠವನ್ನು ಸ್ಥಾಪಿಸಿದವರೆನ್ನಲಾದ ಶ್ರೀ ರೇಣುಕಾಚಾರ್ಯರೇ ಇರಬೇಕೆಂದು ಇತ್ತೀಚಿನ ಹಲವರು ವೀರಶೈವ ಲೇಖಕರು ಊಹಿಸಿರುತ್ತಾರೆ. ಈ ರೇಣುಕಾಚಾರ್ಯರೇ ರೇವಣಸಿದ್ಧರೆಂದೂ ಹಲವು ವೀರಶೈವ ಗ್ರಂಥಗಳಲ್ಲಿವೆ. ೭ ಇವರೇ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರೆಂಬ 'ಗುರುವಂಶ ಕಾವ್ಯ' ದ ಮೇಲ್ಕಂಡ ಶ್ಲೋಕದ ಆಧಾರದಿಂದ,- ಶ್ರೀ ಶಂಕರಾಚಾರ್ಯರೂ ಅವರ ಮಠದ ಪರಂಪರೆಯಲ್ಲಿ ಬಂದಿರುವ ಶೃಂಗೇರೀ ಪೀಠಾಧಿಪತಿಗಳೂ ರೇವಣಸಿದ್ಧ ಸಂಪ್ರದಾಯದವರೆಂದೂ ಹಲವರು ಆಗಾಗ್ಗೆ ಲೇಖನ ಭಾಷಣಗಳ ಮೂಲಕ ಪ್ರಸಾರ ಮಾಡುತ್ತಿದ್ದಾರೆ. ಇದು ವಿಚಾರಾರ್ಹ ಮತ್ತು ಗಹನವಾದ ವಿಷಯವಾದ್ದರಿಂದ ಇದನ್ನೂ ಕೂಲಂಕಷವಾಗಿ ವಿವೇಚಿಸಲೇಬೇಕಾಗಿದೆ.

೨. ಶ್ರೀ ರೇಣುಕ, ರೇವಣಸಿದ್ಧ.

ಮೊದಲು ರೇಣುಕ ಅಥವಾ ರೇವಣಸಿದ್ಧರನ್ನು ಕುರಿತಾದ ಗ್ರಂಥಗಳಾವುವು, ಎಂದು ನೋಡೋಣ.

---

೬ ಶ್ರೀ ಚಂದ್ರಮೌಳೀಶ್ವರ ಲಿಂಗಮಸ್ಮೈ
ಸದ್ರತ್ನಗರ್ಭಂ ಗಣನಾಯಕಂಚ
ಸ ವಿಶ್ವರೂಪಾಯ ಸುಸಿದ್ಧ ದತ್ತಂ
ದತ್ತ್ವಾನ್ಯಗಾದೀಟ್ಚ್ಛಿರ ಮರ್ಚಯೇತಿ ||
(ಗುರುವಂಶ ಕಾವ್ಯ ಸರ್ಗ ಶ್ಲೋ 33)

೭ ಕರ್ನಾಟಕದಿಂದ ಕೊಲ್ಲಾಪುರಕ್ಕೆ ಹೋಗುವ ಮಾರ್ಗದಲ್ಲಿ ರೇಣಾವಿ ಎಂದೊಂದು ಸ್ಥಳವಿದೆ. ಹಲವಾರು ದೇವಾಲಯಗಳಿರುವ ಆ ಸ್ಥಳದಲ್ಲಿ ರೇವಣ ಸಿದ್ಧರ ಜನನವಾಯಿತೆಂದೂ ಕೊಲ್ಲಾಪುರದ ಸಮೀಪದಲ್ಲಿರುವ ಸಿದ್ಧಗಿರಿಯಲ್ಲಿ ಅವರು ಬಹುಕಾಲ ತಪಸ್ಸು ಮಾಡುತ್ತಿದ್ದರೆಂದೂ, ಅದರ ಸಮೀಪದಲ್ಲಿಯೇ ಮುಕ್ತಿಹೊಂದಿದರೆಂದೂ ಡಾ|| ಆರ್. ಡಿ. ರಾನಡೆಯವರು ರೇವಣರ ಬಗ್ಗೆ ವಿಚಾರವನ್ನು ಸಂಗ್ರಹಿಸಿದ್ದಾರೆ.
(Path way to God in kannada literature Pages 14-15)

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಂತರ ಈ ರೇಣುಕ ಅಥವಾ ರೇವಣಸಿದ್ಧರು ಯಾರು ಎಂಬುದನ್ನು ಸ್ವಲ್ಪಮಟ್ಟಿಗೆ ವಿಮರ್ಶಿಸೋಣ, ರೇವಣರ ವಿಷಯವನ್ನು ಹಲವು ಸಂಸ್ಕೃತ ಹಾಗೂ ಕನ್ನಡ ಗ್ರಂಥಗಳು ತಿಳಿಸುತ್ತವೆ. ಆ ಗ್ರಂಥಗಳಲ್ಲಿ ಮೊದಲು ಸಂಸ್ಕೃತ ಭಾಷೆಯನ್ನು ನೋಡೋಣ.

ಸಂಸ್ಕೃತದಲ್ಲಿ ಸಿದ್ಧನಾಥ ಶಿವಾಚಾರ್ಯರವರಿಂದ ರಚಿಸಲ್ಪಟ್ಟಿತೆಂದು ಹೇಳಲ್ಪಡುವ ರೇಣುಕ ವಿಷಯವಾದ ಕಾವ್ಯವೊಂದಿದೆ. ಲ "ಈ ಸಿದ್ಧನಾಥ ಶಿವಾಚಾರ್ಯನೆಂಬಾತನು ಪ್ರಾಚೀನ ಸಂಸ್ಕೃತ ಕವಿಗಳ ಪರಂಪರೆಯಲ್ಲಿ ಕಾಣಬರುವುದಿಲ್ಲವೆಂದೂ, ಆತನು ಅತ್ಯಾಧುನಿಕನೆಂದೂ, ಈ ಶತಮಾನದ ಪ್ರಾರಂಭದಲ್ಲಿ ಆ ಕಾವ್ಯವು ಯಳಂದೂರು ಶ್ರೀಕಂಠಶಾಸ್ತ್ರಿಗಳೆಂಬ ಬ್ರಾಹ್ಮಣ ಕವಿಯಿಂದ ರಚಿಸಲ್ಪಟ್ಟು, ಪರಹಸ್ತಗತವಾಗಿ, ಅಲ್ಲೊಂದು ಇಲ್ಲೊಂದು ಅಲ್ಪ ಸ್ವಲ್ಪ ಬದಲಾವಣೆಯೊಡನೆ ಸಿದ್ಧನಾಥ ಶಿವಯೋಗಿಯೆಂಬಾತನ ಹೆಸರಿನಲ್ಲಿ, ಮೂಲಲೇಖಕರಾದ ಯಳಂದೂರು ಶ್ರೀಕಂಠ ಶಾಸ್ತ್ರಿಗಳ ಮರಣಾನಂತರ, ಮುದ್ರಿತವಾಗಿ ಪ್ರಕಟವಾಯಿತೆಂದೂ ಅದನ್ನು ಪ್ರಾಚೀನ ಕಾವ್ಯವೆಂದು ಸಾಧಿಸಲು ಓಲೆಗರಿಯಲ್ಲಿ ಕೈಬರಹದ ಪ್ರತಿಯೊಂದನ್ನು ಬರೆಸುವ ಸನ್ನಾಹವು ನಡೆದಿತ್ತೆಂದೂ," ಕುಮಾರ ಮಾಧವ ಸಾಲಿಗ್ರಾಮದ ಶ್ರೀ ಶ್ರೀಕಂಠಶಾಸ್ತ್ರಿಗಳು ಕೂಲಂಕಷವಾಗಿ ವಿಮರ್ಶೆ ಮಾಡಿದ್ದಾರೆ. ಅವರ ಸಿದ್ಧಾಂತದಂತೆ ಸಂಸ್ಕೃತ ರೇಣುಕ

ಲ ಅದರಲ್ಲಿ ಶಿವನನ್ನು ಕುರಿತು ಶ್ರೀಶೈಲದಲ್ಲಿ ತಪಸ್ಸು ಮಾಡುತ್ತಿದ್ದ ಶ್ರೀ ಶಂಕರಾಚಾರ್ಯರೆಂಬುವರು, (ಶಿವನ ಅಪ್ಪಣೆಯಂತೆ ಚಂದ್ರಮೌಳೀಶ್ವರಲಿಂಗವನ್ನು ರೇಣುಕರಿಂದ ಪಡೆಯುವುದಕ್ಕಾಗಿ) ಇಡೀ ಭಾರತ ಖಂಡದಲ್ಲೆಲ್ಲಾ ಹುಡುಕಾಡಿ ಕಡೆಗೆ ಭದ್ರಾ ತೀರದಲ್ಲಿದ್ದ ಶ್ರೀ ರೇಣುಕಾಚಾರ್ಯರಿಂದ ಚಂದ್ರಮೌಳೀಶ್ವರ ಲಿಂಗವನ್ನು ಪಡೆದರೆಂದು ಕವಿ ಕಲ್ಪನೆಯಿದೆ. 'ಕತೆಗೆ ಕಾಲಿಲ್ಲ' ಎಂಬ ನಾಣ್ಣುಡಿ ಹುಟ್ಟಿರುವುದು ಇಂತಹ ಕಲ್ಪನೆಗಳಿಂದಲೇ ! ಚಂದ್ರಮೌಳೀಶ್ವರ ಲಿಂಗದ ವಿವರಣೆ ಕೊಟ್ಟು, ಪರಮೇಶ್ವರನು ಸ್ಥಾನನಿರ್ದೇಶ ಕೊಡಲಿಲ್ಲ ಎಂಬುದು ಗಮನಾರ್ಹ. ಇಂತಹ ಕಡೆಯೇ ಅದು ಸಿಕ್ಕುತ್ತದೆಯೆಂದು ಶಿವನು ತಿಳಿಸಬಹುದಾಗಿತ್ತು ! ಶ್ರೀ ಶಂಕರಾಚಾರ್ಯರಾಗಿ ತಾನೇ, ಪರಶಿವನೇ ಅವತರಿಸಿದ್ದೇ [illegible] ತ್ತು!

Sri Vidyabharathi Book Centre, Sringeri

CC-0. In Public Domain. Digitized by eGangotri

ವಿಜಯವು ಅತ್ಯಾಧುನಿಕವಾಗಿದೆ. ಅದನ್ನು ಅವರು ಪ್ರಮಾಣಪೂರ್ವಕವಾಗಿ ಸ್ಥಾಪಿಸಿರುವರು. ೯ ಆದ್ದರಿಂದ ಆಧುನಿಕವಾದ ಆ ಕಾವ್ಯವನ್ನು ಪ್ರಾಚೀನವಾದ ವಿಷಯಕ್ಕೆ ಆಧಾರವಾಗಿ ಪರಿಗಣಿಸುವುದು ಅಸಾಧುವಾಗುತ್ತದೆ.

ಇದಲ್ಲದೆ ರೇಣುಕರ ವಿಷಯವನ್ನು ಪ್ರಸ್ತಾಪಿಸಿದ ಇನ್ನೊಂದು ಗ್ರಂಥ ರೇಣುಕರ ಮತ್ತು ಅಗಸ್ತ್ಯರೆಂಬೊಬ್ಬರ ಸಂಭಾಷಣೆ ಎನ್ನಲಾದ ಶಿವಯೋಗಿ ಶಿವಾಚಾರ್ಯನೆಂಬಾತನಿಂದ ರಚಿಸಲ್ಪಟ್ಟ "ಸಿದ್ಧಾಂತ ಶಿಖಾಮಣಿ" ಎಂಬ ಸಂಸ್ಕೃತ ಕೃತಿ. ಅದು ರೇಣುಕರು ಮಾಡಿದ ಕಾರ್ಯ, ಮತ್ತು ಉಪದೇಶಗಳನ್ನು ಒಳಗೊಂಡ ಗ್ರಂಥ, ಅದು ವೀರಶೈವ ಮತೀಯರಿಗೆ ಧರ್ಮಗ್ರಂಥವೆಂದು ಅತ್ಯಂತ ಪೂಜ್ಯವಾಗಿದೆ. ಅದರಲ್ಲಿಯೂ ರೇಣುಕರ ಜೀವನ ಚಿತ್ರ ಸ್ವಲ್ಪಮಟ್ಟಿಗೆ ಮೂಡಿಬರುತ್ತದೆ. ಅದು ಮೇಲೆ ತಿಳಿಸಿದ ಗ್ರಂಥಕ್ಕಿಂತ ಪ್ರಾಮಾಣಿಕವೂ, ಪ್ರಾಚೀನವೂ ಆದುದು. ೧೦ ಅದರಲ್ಲಿ ಶ್ರೀ ಚಂದ್ರಮೌಳೀಶ್ವರ ಲಿಂಗದ ಪ್ರಸ್ತಾಪವು ಎಲ್ಲೂ ಬರುವುದಿಲ್ಲ. ಅದರಲ್ಲಿ ತುಂಬಿರುವುದು ಹೆಚ್ಚಾಗಿ ಸಿದ್ಧಾಂತಕ್ಕೆ ಸಂಬಂಧಪಟ್ಟ ವಿಷಯ.

ಇನ್ನು ಕನ್ನಡ ಗ್ರಂಥಗಳತ್ತ ಬರೋಣ. ಹರಿಹರದೇವನ "ರೇವಣಸಿದ್ಧೇಶ್ವರ ರಗಳೆ" ಯೇ ನಮಗೆ ದೊರಕುವ ಅತ್ಯಂತ ಪ್ರಾಚೀನವಾದ ರೇವಣಸಿದ್ಧ ವಿಷಯಕವಾದ ಕಾವ್ಯ ಮತ್ತು ಚರಿತ್ರೆ. ಹರಿಹರನು ರೇವಣಸಿದ್ಧರು ಆಗಿಹೋದನಂತರ ಶೈವಮತದ ಪುನರುಜ್ಜೀವನ ಕಾಲದಲ್ಲಿ

---

೯ ಶ್ರೀ ಚಂದ್ರಮೌಳೀಶ್ವರ ವಿಷಯ-ಪುಟ-೩-೧೨ (೧೯೩೫) ಯಳಂದೂರು ಶ್ರೀಕಂಠಶಾಸ್ತ್ರಿಗಳ ಪತ್ನಿ ಕೋನಮ್ಮನವರು ಈ ವಿಷಯವಾಗಿ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯವನ್ನು ಹೂಡಿದ್ದರೆಂದೂ ಅದು ಕಾಲಾತೀತವಾಗಿದ್ದು ಆಕೆಗೆ ಅದರಿಂದ ಪ್ರಯೋಜನವಾಗಲಿಲ್ಲವೆಂದೂ, ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳು ವಿವರವಾಗಿ ಬರೆದಿದ್ದಾರೆ.

೧೦ ಇದರ ರಚನಾ ಕಾಲವು ೧೧೮೭ ರಿಂದ ೧೨೧೭ ರಲ್ಲಿರಬಹುದೆಂದು ಶ್ರೀ ಕಟಪಾಡಿ ಕೃಷ್ಣರಾಯರು ಅಭಿಪ್ರಾಯಪಡುತ್ತಾರೆ. (ಕ. ಸಾ. ಪ. ಪತ್ರಿಕೆ – ಸಂಪುಟ ೨೯ ಸಂ ೧-೨ ಪುಟ ೩೮.)

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದವನು, ಅನೇಕ ಜನ ಶಿವಶರಣರ ಗಾಥೆಗಳನ್ನೂ, ತಮಿಳಿನ ಪೆರಿಯ ಪುರಾಣದಸ್ಫೂರ್ತಿಯಿಂದ ಅರವತ್ತುಮೂರು ಜನ ಪುರಾತನರ ಕಥೆಗಳಲ್ಲಿ ಕೆಲವನ್ನೂ ಕಾವ್ಯರೂಪದಲ್ಲಿ ರಚಿಸಿದ್ದಾನೆ. ಈತನ ಕಾಲವನ್ನು ಕವಿ ಚರಿತ್ರಕಾರರು ೧೧೬೫ ಎಂದೂ, ಡಾ|| ಡಿ. ಎಲ್. ನರಸಿಂಹಾಚಾರ್ಯರು ೧೨೦೩ ರ ಈಚೆಗೆ ಇರಬಹುದೆಂದೂ, ರೆ|| ಕಿಟೆಲ್ ಮತ್ತು ಡಾ|| ಎ. ವೆಂಕಟಸುಬ್ಬಯ್ಯನವರು ೧೨೫೦ ಎಂದೂ ನಿರ್ಧರಿಸಿರುತ್ತಾರೆ. ಕವಿಯ ಜೀವಿತ ಕಾಲವನ್ನು ಹನ್ನೊಂದನೆಯ ಶತಮಾನಕ್ಕೆ ಒಯ್ಯುವ ಕವಿ ಚರಿತ್ರೆಕಾರರ ಅಭಿಪ್ರಾಯವನ್ನೇ ಅಂಗೀಕರಿಸಿದರೂ, ಹರಿಹರಕವಿಯು ರೇಣುಕರನ್ನು ಕುರಿತಾದ "ರೇವಣಸಿದ್ಧೇಶ್ವರ ರಗಳೆ" ಯನ್ನು ೧೧೬೫ ರ ಹಿಂಚುಮುಂಚಿನಲ್ಲಿ ರಚಿಸಿರಬೇಕೆಂದು ನಾವು ದೃಢವಾಗಿ ಹೇಳಬಹುದು. ಈ ರೇವಣ ಸಿದ್ಧೇಶ್ವರ ರಗಳೆಗೆ ಸಂಸ್ಕೃತದಲ್ಲಿ ಈಶಾನಶಿವಗುರುವು ರಚಿಸಿದ ರೇವಣಸಿದ್ಧೇಶ್ವರನ ಕತೆಯೇ ಆಧಾರವಾಗಿದೆಯೆಂದು, ಚತುರ್ಮುಖ ಬೊಮ್ಮರಸನು ಹೇಳುತ್ತಾನೆ: "ಈಶಾನ್ಯಶಿವಗುರುಗಳಾದಿಯೊಳು ಗೀರ್ವಾಣ ಭಾಷೆಯಿಂ ಕೃತಿವೇಳ್ದ ರೇವಣಾಸಿದ್ಧೇಂದ್ರದೇಶಿಕನ ಪರಮಲೀಲಾ ಕಥಾಕಥನಮಂ ಸೂಕ್ಷ್ಮವಾಗಿ, ರಘಟಾಕಾರದಿಂ, ಒಡರ್ಚಿದಂ ಹಂಪೆಯ ಹರೀಶನ್" ೧೧ ಆದರೆ ಈ ಸಂಸ್ಕೃತ ಗ್ರಂಥವು ಈವರೆಗೆ ಉಪಲಬ್ಧವಾಗಿಲ್ಲ.

ರೇವಣಸಿದ್ಧೇಶ್ವರ ರಗಳೆಯ ಕಥಾಸಾರಾಂಶವನ್ನು ಹೀಗೆ ಸಂಗ್ರಹಿಸಬಹುದು :

ಕೈಲಾಸದಲ್ಲಿ ಶಿವನ ಸಭೆ ನಡೆದಿತ್ತು. (ಬಾಯ ತಂಬುಲವನೀಯಲ್ಕೆಂದು) ಶಿವನು ತನ್ನ ಗಣಗಳಲ್ಲಿ ಒಬ್ಬನಾದ ರೇಣುಕನನ್ನು ಕರೆದನು. ಸಂಭ್ರಮದಲ್ಲಿದ್ದ ರೇಣುಕನು ದಾರುಕನೆಂಬ ೧೨ ಇನ್ನೊಬ್ಬ ಗಣಶ್ರೇಷ್ಠನನ್ನು ದಾಟಿಬಿಟ್ಟ. ಈ ಅಪಚಾರಕ್ಕಾಗಿ ಪರಶಿವನು ರೇಣುಕ

---

೧೧ ರೇವಣ ಸಿದ್ಧೇಶ್ವರ ಪುರಾಣ

೧೨ ಅರವತ್ತು ಮೂರು ಜನ ಪುರಾತನರ ಮಾಲೆಯಲ್ಲಿ ದಾರುಕರ ಹೆಸರಿದೆ. ಆದರೆ ರೇಣುಕ ಅಥವಾ ರೇವಣ ಎಂಬ ಹೆಸರಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂಲೋಕದಲ್ಲಿ ಹುಟ್ಟಬೇಕೆಂದು ಶಪಿಸಿದನು. ಶಾಪಕ್ಕೆ ಕಂಗೆಟ್ಟು ಪರಿಹಾರವನ್ನು ಪ್ರಾರ್ಥಿಸಿ, ಪಡೆದುಕೊಂಡ ರೇಣುಕನು ಶಿವನ ಅನುಗ್ರಹದಿಂದ ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಿಂದ ಹುಟ್ಟಿ ಬಂದನು. (೧೨) ಅಲ್ಲಿಂದ ದಕ್ಷಿಣ ದಿಕ್ಕಿಗೆ ಹೋಗಿ ಆಗಸ್ತ್ಯರೆಂಬುವರೊಡನೆ ಶಿವಗೋಷ್ಠಿಯಲ್ಲಿದ್ದು(೧೩) ರಾಮೇಶ್ವರಕ್ಕೆ ಹೋಗಿ ಅಲ್ಲಿ ರಾಮನಾಥಸ್ವಾಮಿಯದರ್ಶನ ಮಾಡಿಕೊಂಡು ಕಾಂಚೀಪುರಕ್ಕೆ ಬಂದು ಅಲುಗಾಡುತ್ತಿದ್ದ ವಿಷ್ಣು ಪ್ರತಿಮೆಯನ್ನು (ವರದರಾಜ) ಸ್ಥಿರವಾಗಿ ನಿಲ್ಲಿಸಿ, ಅಲ್ಲಿಂದ ಜಯಂತಿಗೆ(ಬನವಾಸಿ) ಹೋಗಿ ವಿಕ್ರಮಾದಿತ್ಯನನ್ನು ಅನುಗ್ರಹಿಸಿ(ಜಯಂತಿಯ ವಿಕ್ರಮಾದಿತ್ಯನಕಾಲ ೧೦೫೬–೧೦೭೪) ಕಲ್ಯಾಣದಲ್ಲಿ ಕಲ್ಲಿಸೆಟ್ಟಿಯನ್ನು ಅನುಗ್ರಹಿಸಿದನಂತರ ಮಂಗಳವಾಡಕ್ಕೆ ಬಂದು ಮಾಯೆಯೆಂಬಾಕೆಯ ಮನೆಯಲ್ಲಿದ್ದನು. ಅಲ್ಲಿಗೆ ವಿಭೀಷಣನೆಂಬ [೧೪] ಲಂಕೆಯ ದೊರೆಯೊಬ್ಬನು ಬಂದು ತಾನು ಆರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿರುವುದಾಗಿಯೂ ಉಳಿದ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಲು ಸಹಾಯವಾಡಬೇಕೆಂದೂ ಕೇಳಿಕೊಳ್ಳಲು ರೇವಣನು ತನ್ನ ಪವಾಡ ಶಕ್ತಿಯಿಂದ ವಿಭೀಷಣನನ್ನು ಕರೆದುಕೊಂಡು ಲಂಕೆಗೆ ಹೋಗಿ ಅಲ್ಲಿ ಏಕಕಾಲದಲ್ಲಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದನು. ಮಂಗಳವಾಡದಲ್ಲಿದ್ದ ದೊರೆ ಬಿಜ್ಜಳನ (ಮೊದಲನೆ ಬಿಜ್ಜಳನ ಕಾಲ ಸು. ೧೧೬೦) ಅಹಂಕಾರವನ್ನು ಮುರಿದು ಅಲ್ಲಿಂದ ಕೊಲ್ಲಾಪುರಕ್ಕೆ ಹೋಗಿ ಅಲ್ಲಿದ್ದ ಗೋರಖನಾಥನ ಎದುರಿನಲ್ಲಿ

---

೧೨ ಕೊಲ್ಲಿಪಾಕಿಯು ಆಂಧ್ರ ದೇಶದಲ್ಲಿರುವ ಶ್ರೀಶೈಲದ ಹತ್ತಿರದಲ್ಲಿದೆ.

೧೩ ರೇಣುಕರ ಅವತಾರ ಕಾಲಕ್ಕೆ ಮುಂಚೆಯಿಂದಲೂ ದ್ರಾವಿಡ ದೇಶದಲ್ಲಿ - ತಮಿಳುನಾಡಿನಲ್ಲಿ – ಶೈವಸಿದ್ಧಾಂತವು ಪ್ರಚಾರದಲ್ಲಿತ್ತು. ಅದಕ್ಕೆ ರಾಜಮನ್ನಣೆಯೂ ಇತ್ತು. ತಮಿಳು ಶೈವರು ಲಿಂಗಧಾರಿಗಳಲ್ಲ, ಆಗಸ್ತ್ಯರೆನ್ನುವವರು ಶೈವ ಸಿದ್ಧಾಂತದ ಆಚಾರ್ಯರಲ್ಲಿ ಒಬ್ಬರಿರಬಹುದು-ದೇ ವಿನಃ ಪುರಾಣ ಪ್ರಸಿದ್ಧರಾದ ಅಗಸ್ತ್ಯರಲ್ಲ.

೧೪ ಈ ವಿಭೀಷಣನು ವಿರೂಪಾಕ್ಷ ಸಿದ್ಧನೆಂಬೊಬ್ಬ ಭಕ್ತನಿರಬಹುದೆಂದು ಶ್ರೀ ಕಪಟರಾಳ ಕೃಷ್ಣರಾಯರು ಊಹಿಸಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ಮಹಿಮೆಯನ್ನು ಪ್ರಕಟಿಸಿ, ವಾರಣಾಸಿಗೆ ಹೋದನು. ಅಲ್ಲಿಂದ ಮಂಗಳವಾಡಕ್ಕೆ ಬಂದು ಕಷ್ಟಕ್ಕೆ ಸಿಲುಕಿದ್ದ ಮಾಯಿದೇವಿಯ ಮಗಳನ್ನು (ಕಷ್ಟದಿಂದ) ಮುಕ್ತಳನ್ನಾಗಿ ಮಾಡಿ, ಬಿಜ್ಜಳನ ಮಗಳನ್ನು ಮದುವೆಯಾದನು. ಅನಂತರ ಚೋಳ ದೇಶಕ್ಕೆ ಹೋಗಿ ರಾಜೇಂದ್ರ ಚೋಳನ ಮಗಳನ್ನೂ ಮದುವೆಯಾದನು. (ರಾಜೇಂದ್ರ ಚೋಳನ ಕಾಲ ೧೦೫೨–೧೦೬೨, ವೀರರಾಜೇಂದ್ರ ಚೋಳ ೧೦೬೨–೧೦೭೦) ೧೫. ಅಲ್ಲಿಂದ ಕ್ರಮೇಣ ಚೇರ, ಕೇರಳ, ಗೌಡ, ಗುರ್ಜರ, ನೇಪಾಳ ಮುಂತಾದ ದೇಶಗಳಿಗೆಲ್ಲಾ ಹೋಗಿ ನಾನಾ ವಿಧವಾದ ಪವಾಡಗಳನ್ನು ತೋರಿಸಿ, ಆ ರಾಜಪುತ್ರಿಯರನ್ನೆಲ್ಲಾ ವಿವಾಹ ಮಾಡಿಕೊಂಡನು. ತನ್ನ ಮುನ್ನೂರು ಜನ ಪತ್ನಿಯರೊಂದಿಗೆ ಮಂಗಳವಾಡಕ್ಕೆ ಬಂದನು. ಚೋಳರಾಜ ಪುತ್ರಿಯಲ್ಲಿ ಒಬ್ಬ ಕುಮಾರನ ಜನನವಾಗಲು ಆಕೆಯನ್ನು ದಕ್ಷಿಣದೇಶಕ್ಕೆ ಕಳುಹಿ ಇನ್ನೊಬ್ಬ ಪತ್ನಿಗೆ ಮಗುವನ್ನು ಪೋಷಿಸುವ ಹೊಣೆಯನ್ನು ಕೊಟ್ಟನು. ಆ ಮಗುವಿಗೆ 'ರುದ್ರಮುನಿ' ಯೆಂದು ನಾಮಕರಣ ಮಾಡಿ, ಎಂಟನೆಯ ಮಯಸ್ಸಿನಲ್ಲಿ ಶೈವಧರ್ಮೋಪದೇಶವನ್ನು ಮಾಡಿದನು. ಅನಂತರ ದೇಶ ಸಂಚಾರಮಾಡಿ ಹಾವಿನ ಹಾಳದ ಮೂಲಕ, ಸೊಲ್ಲಾಪುರಕ್ಕೆ ಹೋಗಿ ಮುದ್ದುಗೌಡ ಮತ್ತು ಅವರ ಪತ್ನಿ ಸುಗ್ಗವ್ವೆ ಎಂಬುವರನ್ನು ಅನುಗ್ರಹಿಸಿದನು. ೧೬ ಆ ಬಳಿಕ ತನ್ನ ಜನ್ಮ ಸ್ಥಾನವಾದ ಕೊಲ್ಲಿಪಾಕಿಗೆ ಹೋಗಿ ಹುಟ್ಟಿ ಬಂದ ರೀತಿಯಲ್ಲಿಯೇ ಶಿವಲಿಂಗದಲ್ಲಿ ಐಕ್ಯನಾದನು.

---

೧೫ ಪರಮಶೈವರಾದ ಚೋಳ ದೊರೆಗಳಲ್ಲಿ ವೀರರಾಜೇಂದ್ರ ಚೋಳನು ಅತ್ಯಂತ ಮತಾಂಧನಾಗಿದ್ದನೆಂದೂ, ಅವನ ಕಾಲದಲ್ಲಿ ಶ್ರೀವೈಷ್ಣವಮತ ಪ್ರಸಾರ ಮಾಡುತ್ತಿದ್ದ ಆಚಾರ್ಯ ಶ್ರೀರಾಮಾನುಜರಿಗೆ (೧೦೧೭–೧೧೩೭) ಶೈವರ ಕಿರುಕುಳವು ಸಹಿಸಲು ಅಸಾಧ್ಯವಾಗಿ, ಅವರು ಮೈಸೂರು ದೇಶಕ್ಕೆ ತಪ್ಪಿಸಿಕೊಂಡು ಬಂದರೆಂದೂ, ವೈಷ್ಣವ ಗ್ರಂಥಗಳಿಂದ ತಿಳಿದುಬರುತ್ತದೆ.

೧೬ ಸಿದ್ಧರಾಮನ ಜನನವಾಗುವುದು ರೇಣುಕರ ಆಶೀರ್ವಾದದಿಂದಲೇ. ಈ ಮುದ್ದುಗೌಡ ಸುಗ್ಗವ್ವೆಯರು ಸಿದ್ಧರಾಮನ ತಾಯಿತಂದೆಯರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಈ ಕಾವ್ಯವನ್ನು ಸ್ವಲ್ಪ ಮಟ್ಟಿಗೆ ವಿಮರ್ಶಿಸೋಣ.

ರೇವಣ ಸಿದ್ಧರನ್ನು ಕುರಿತು ಬರೆದ ಈ ಕಾವ್ಯವು ಹರಿಹರನಿಂದ ರಚಿತವಾದ ಕಾಲದಲ್ಲಿ ದೊಡ್ಡ ದೊಡ್ಡ ಪವಾಡಗಳನ್ನು ನಡೆಸುವವರು ಮಹಾಮಹಿಮರೆಂಬ ನಂಬುಗೆಯಿತ್ತು. ಅವರು ದೈವಾಂಶಪುರುಷರಾಗದೇ ಅಂತಹ ಪವಾಡಗಳಲ್ಲಿ ಮೆರೆಯುವುದು ಅಸಾಧ್ಯವೆಂಬ ಭಾವನೆಯೂ ಇತ್ತು. ಸಾಮಾನ್ಯ ಜನರ ಒಲವನ್ನೂ ಭಕ್ತಿ ಶ್ರದ್ಧೆಯನ್ನೂ ಆಕರ್ಷಿಸುವ ಇಂತಹ ಪವಾಡಗಳನ್ನು ಸಿದ್ಧ ಪುರುಷರು ಆಗಾಗ ನಡೆಸುತ್ತಿದ್ದು, ಜನರು ತಮ್ಮ ಮತಧರ್ಮದಲ್ಲಿ ಶ್ರದ್ಧೆಯಿಡಲು ಆಗ್ರಹದಿಂದ ಎಚ್ಚರಿಸುತ್ತಿದ್ದರು. ಅವೈದಿಕರಾದ ತಾಂತ್ರಿಕರಿಂದ ಅಂದು ಭರತಖಂಡವು–ವಿಶೇಷವಾಗಿ ಕರ್ನಾಟಕ, ಆಂಧ್ರ, ದ್ರಾವಿಡ ದೇಶಗಳು–ತುಂಬಿಹೋಗಿತ್ತು. ಅವರ ಪವಾಡಗಳಿಂದ ಮುಗ್ಧರಾಗಿದ್ದ ಜನ, ಅವರ ದುರ್ಮಾರ್ಗವನ್ನೇ ಅನುಸರಿಸಿ ಪತನದೆಡೆಗೆ ಸಾಗುತ್ತಿದ್ದಾಗ, ರೇವಣರು ಜನರನ್ನು ವೈದಿಕವಾದ ಶೈವಧರ್ಮದೆಡೆಗೆ ಕೊಂಡೊಯ್ಯಲು ಮಹತ್ಪ್ರಯತ್ನಮಾಡಿದರು. ಯಂತ್ರ, ಮಂತ್ರ, ತಂತ್ರ ಕಲಾಸಿದ್ಧಿಯುಳ್ಳ ಮಾಂತ್ರಿಕ ತಾಂತ್ರಿಕರಿಗಿಂತಲೂ ಅದ್ಭುತತರವಾದ ಪವಾಡಗಳನ್ನು ತೋರಿಸಿ, ಜನರ ದೃಷ್ಟಿಯನ್ನು ಧರ್ಮದತ್ತ ತಿರುಗಿಸಿದರು. ಇದು ಅವರು ಮಾಡಿರುವ ಮಹದುಪಕಾರ. ಹರಿಹರನು ಹೇಳುವಂತೆ ಆವರು ತಮ್ಮ ಸಂಚಾರ ಕಾಲದಲ್ಲಿ ಅಲ್ಲಲ್ಲಿ ಸತ್ರಗಳನ್ನೂ ತಟಾಕಗಳನ್ನೂ ನಿರ್ಮಿಸಿದುದುಸಹ ಜನೋಪಕಾರಿಯಾದ ಕೃತಿಗಳೇ ಆಗಿರುವುವು. ಹರಿಹರನನ್ನು ಅನುಸರಿಸಿಯೇ ಆತನನಂತರದ ಹಲವಾರು ಜನ ವೀರಶೈವ ಕವಿಗಳು ರೇವಣ ವಿಷಯಕವಾದ ಕಾವ್ಯಗಳನ್ನು ರಚಿಸಿದರು. ಇವುಗಳಲ್ಲಿ ಹರಿಹರನು ಹೇಳಿರುವ ಕತೆಯೇ ಅಲ್ಪ ಸ್ವಲ್ಪ ಬದಲಾವಣೆಯೊಡನೆ ಮೂಡಿ ಬಂದಿದೆ. (೧೭) ಇವಾವುದರಲ್ಲಿಯೂ ಶ್ರೀ ಚಂದ್ರಮೌಳೀಶ್ವರ ಲಿಂಗದ ಪ್ರಸ್ತಾಪವಿಲ್ಲ.

---

೧೭ ಬೊಮ್ಮರಸನ ರೇವಣಸಿದ್ಧೇಶ್ವರ ಪುರಾಣ, ಮಲ್ಲಣನ 'ರೇವಣಸಿದ್ಧೇಶ್ವರ ಕಾವ್ಯ, ಚೆನ್ನಬಸವನ ರೇವಣಸಾಂಗತ್ಯ' ಇತ್ಯಾದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಕಾವ್ಯ ಬೊಮ್ಮರಸನ ಹೇಳಿಕೆಯಂತೆ, ಈಶಾನ ಶಿವಗುರುವಿನ ಸಂಸ್ಕೃತ ಕಾವ್ಯದ ಆಧಾರದ ಮೇಲೆ ರಚಿತವಾಗಿದ್ದುದರಿಂದ, ಸಂಸ್ಕೃತ ಮೂಲಗ್ರಂಥದಲ್ಲಿಯೂ ಚಂದ್ರಮೌಳೀಶ್ವರ ಲಿಂಗದ ಪ್ರಸ್ತಾಪವಿಲ್ಲವೆಂದೇ ಹೇಳಬೇಕಾಗಿದೆ.

ಹರಿಹರನು ರೇವಣಸಿದ್ಧರನ್ನು 'ಲಾಕುಳದ ಲಾಕ್ಷಣಿಕ' 'ಲಾಕುಳದ ಲೋಕೈಕ ಬಂಧು' ಎಂದು ಪದೇ ಪದೇ ಕರೆದಿರುವುದರಿಂದ ಈ ರೇಣುಕರು ಲಾಕುಳ ಶೈವರಾಗಿದ್ದಿರಬಹುದು.

ಸಂಸ್ಕೃತ ಬಾಷೆಯಲ್ಲಿ ರಚಿತವಾದ ಸಿದ್ಧಾಂತಶಿಖಾಮಣಿಯೆಂಬ ವೀರಶೈವಗ್ರಂಥದಲ್ಲಿಯೂ ರೇಣುಕರ ಚರಿತ್ರೆಯು ಸ್ವಲ್ಪಮಟ್ಟಿಗೆ ಬರುತ್ತದೆಯೆಂದು ಹೇಳಿದೆವಷ್ಟೆ. ಅದರಂತೆ ರೇವಣನು ನಿತ್ಯಸಿದ್ಧನು, ಅಷ್ಟಸಿದ್ಧಿಗಳನ್ನು ಒಲಿಸಿಕೊಂಡಿದ್ದನು. ಯಮ ನಿಯಮಾದಿ ಅಷ್ಟಾಂಗ ಯೋಗಗಳಲ್ಲಿ ಪ್ರವೀಣನು, ಸರ್ವಸಿದ್ಧರ ಸಮೂಹಕ್ಕೆ ಶಿಖಾಮಣಿಯು, ವೇದವೇದಾಂತ ಸಮ್ಮತವಾದ ಶಿವಾದ್ವೈತ ಶಾಸ್ತ್ರವನ್ನು ಭೂಮಿಯಲ್ಲಿ ಪ್ರಸಾರಮಾಡಲು ಪರಶಿವನ ಅನುಗ್ರಹದಿಂದ ಹುಟ್ಟಿದವನು. ಈ ರೇಣುಕನನ್ನು ಸಂಧಿಸಿ ಶ್ರುತಿಸಮ್ಮತವಾದ ಸಿದ್ಧಾಂತವನ್ನು ಬೋಧಿಸಬೇಕು ಎಂದು ಅಗಸ್ತ್ಯನೆಂಬಾತನು ಕೇಳಲು ಆತನಿಗೆ ಶಿವಧರ್ಮೋಪದೇಶವನ್ನು ಇತ್ತನು.

ಸಂಗ್ರಹವಾಗಿ ಆ ಉಪದೇಶಸಾರ ಹೀಗಿದೆ :— ರುಚಿಭೇದದಂತೆ ಬೇರೆ ಬೇರೆ ಆಚಾರಗಳನ್ನೂ ಬೇರೆ ಬೇರೆ ಅರ್ಥವನ್ನೂ ಪ್ರತಿಪಾದಿಸುವ ಸಾಂಖ್ಯ, ಯೋಗ, ಪಾಂಚರಾತ್ರ, ಪಾಶುಪತ ಸಿದ್ಧಾಂತಗಳು ಇರುವುವು. ಇವುಗಳು ವೇದಾನುಸಾರಿಯಾಗಿದ್ದರೂ, ವೇದದ ಒಂದೊಂದು ಭಾಗವನ್ನು ಮಾತ್ರ ಅನುಸರಿಸಿರುವುವು. ಶೈವಸಿದ್ಧಾಂತದಲ್ಲಿ ಸೋಮ ಲಾಕುಳ ಎಂಬ ಪ್ರಭೇದಗಳು ಇರುವುವು, ಅವುಗಳಲ್ಲಿ ಮತ್ತೆ ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತ ಎಂಬ ಪ್ರಭೇದಗಳೂ ಇರುವುವು.

ಅವುಗಳಲ್ಲಿ ಸಿದ್ಧಾಂತವೆನ್ನುವುದು ಸರ್ವವೇದಾರ್ಥ ರೂಪವಾಗಿದ್ದು, ವೇದದಂತೆಯೇ ಪ್ರಮಾಣವಾಗಿದೆ. ವೇದ ಧರ್ಮದ ಪ್ರತಿಪಾದನೆಮಾಡುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧಾಂತವೆಂಬ ಹೆಸರುಳ್ಳ ಈ ಆಗಮವು, ವೇದ ಬಾಹ್ಯ ಧರ್ಮಗಳನ್ನು ವಿರೋಧಿಸುವುದರಿಂದಲೂ ವೇದ ಸಮ್ಮತವೇ ಆಗಿದೆ. ಈ ಲೋಕದಲ್ಲಿ ಶೈವಸಿದ್ಧಾಂತಪಾಲಕರಾದ ರೇಣುಕರು ಜೈನ, ಚಾರ್ವಾಕ, ಬೌದ್ಧ ಮುಂತಾದ ಪಾಷಂಡಿಗಳನ್ನು ಖಂಡಿಸಿ, ಯಂತ್ರ ತಂತ್ರ ಕಲಾಸಿದ್ಧಿಯುಳ್ಳ ಅನ್ಯಮತೀಯರನ್ನು ಗೆದ್ದು ಶೈವ ಧರ್ಮದ ವೈಶಿಷ್ಟ್ಯವನ್ನೂ ಆಗ್ಗಳಿಕೆಯನ್ನೂ ಸ್ಥಾಪಿಸಿದರು.

ಶ್ರೀ ರೇಣುಕರನ್ನು ಕುರಿತು ರಚಿತವಾದ ಪ್ರಾಮಾಣಿಕವಾದ ಪ್ರಾಚೀನ ಕನ್ನಡ ಕೃತಿಯಲ್ಲಾಗಲೀ ['ರೇವಣ ಸಿದ್ಧೇಶ್ವರ ರಗಳೆ' - ೧೧೬೫.] ಸಂಸ್ಕೃತ ಕೃತಿಯಲ್ಲಾಗಲೀ [ಸಿದ್ಧಾಂತಶಿಖಾಮಣಿ–೧೧೫೬.] ಶ್ರೀ ಶಂಕರರ ಮತ್ತು ಚಂದ್ರಮೌಳೀಶ್ವರ ಲಿಂಗದ ವಿಚಾರವೇ ಇಲ್ಲ ಎನ್ನುವುದು ಆ ಕೃತಿಗಳನ್ನು ಪರಾಮರ್ಶೆ ಮಾಡಿದಾಗ ಸ್ಪಷ್ಟವಾಗುತ್ತದೆ.

ಶ್ರೀ ರೇಣುಕರ ಜೀವನದ ಪ್ರಮುಖ ಘಟನೆಗಳನ್ನು ವಿವರಿಸಿದ ಮೇಲಿನ ಸಂಸ್ಕೃತ ಮತ್ತು ಕನ್ನಡದ ಯಾವತ್ತು ಗ್ರಂಥಗಳಲ್ಲಿ ಶ್ರೀಚಂದ್ರಮೌಳೀಶ್ವರನ ಸಂಗತಿಯೇ ಪ್ರಸ್ತಾಪಿತವಾಗಿಲ್ಲ. ಶ್ರೀ ಶಂಕರ ಭಗವತ್ಪಾದರಿಗೂ ರೇಣುಕರಿಗೂ ಈ ದಿವ್ಯ ವಿಗ್ರಹದ ಸಂದರ್ಭದಲ್ಲಿ ಬಾಂಧವ್ಯ ಉಂಟಾಗಿದ್ದಲ್ಲಿ ಆ ಕಾವ್ಯಗಳಲ್ಲಿ ಈ ಪ್ರಧಾನ ವಿಷಯವನ್ನು ಹೇಳದೇಬಿಡುತ್ತಿರಲಿಲ್ಲ. ಸಿದ್ಧಾಂತ ಶಿಖಾಮಣಿಯಲ್ಲಾಗಲೀ, ರೇವಣಸಿದ್ಧೇಶ್ವರ ರಗಳೆ ಯಲ್ಲಾಗಲೀ ಈ ಪ್ರಮುಖ ವಿಚಾರದ ಪ್ರಸ್ತಾಪವು ಸ್ವಲ್ಪವಾದರೂ ಇರುತ್ತಿತ್ತು. ಆದುದರಿಂದ ಈ ಒಂದು ಬಾಂಧವ್ಯಕಲ್ಪನೆ ನಿರಾಧಾರ ವೆಂದು ಹೇಳಬೇಕಾಗುತ್ತದೆ.

2 ಶ್ರೀ ಶಂಕರಾಚಾರ್ಯ

ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆಗಳಲ್ಲಿ ಎಲ್ಲಿಯಾದರೂ ಈ ವೃತ್ತಾಂತವು ರೇಣುಕಾಚಾರ್ಯರು ಚಂದ್ರಮೌಳೀಶ್ವರರನ್ನು ಕೊಟ್ಟರೇ ಎಂಬ ವಿಷಯವು [illegible] ವಿಚಾರ ಮಾಡಬೇಕು.

Srividyabharathi Book Centre, Sringeri

 CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯರ ಜೀವನದ ಪ್ರಸಿದ್ಧವಾದ ಚರಿತ್ರೆಯು ಮಾಧವೀಯ ಸಂಕ್ಷೇಪ ಶಂಕರ ವಿಜಯವು, ವ್ಯಾಸಾಚಲೀಯ ಶಂಕರ ವಿಜಯ, ಚಿದ್ವಿಲಾಸೀಯ ಶಂಕರ ವಿಜಯ ವಿಲಾಸ ಮತ್ತು ಅನಂತಾನಂದ ಗಿರೀಯ, ಮುಂತಾದ ಪ್ರಾಚೀನ ಅರ್ವಾಚೀನ ಸಂಸ್ಕೃತ ಕಾವ್ಯಗಳಲ್ಲಿ ದೀರ್ಘವಾಗಿಯೂ ಸ್ಕಾಂದ ಪುರಾಣಾಂತರ್ಗತವಾದ ಶಿವರಹಸ್ಯ, ಮಾರ್ಕಂಡೇಯ ಸಂಹಿತೆಗಳಲ್ಲಿ ಸಂಗ್ರಹವಾಗಿಯೂ; ಲಿಂಗಪುರಾಣ, ಕೂರ್ಮಪುರಾಣ, ವಾಯುಪುರಾಣ, ಸೌರಪುರಾಣ, ಭವಿಷ್ಯೋತ್ತರ ಪುರಾಣಗಳಲ್ಲಿ ಸೂಚ್ಯವಾಗಿಯೂ ಪ್ರಸ್ತಾಪಿತವಾಗಿದೆ.

ಬಹು ಜನ ವಿದ್ವಾಂಸರೂ ಇತಿಹಾಸಜ್ಞರೂ ಎಲ್ಲ ಶಂಕರ ವಿಜಯಗಳಿಗಿಂತಲೂ ಮಾಧವೀಯವೇ ಹೆಚ್ಚು ಪ್ರಾಮಾಣಿಕವೆಂದು ಅಭಿಪ್ರಾಯಪಟ್ಟಿರುವುದರಿಂದ ಅದನ್ನೇ ಅನುಸರಿಸಿ ಶಂಕರಭಗವತ್ಪಾದರ ಜೀವನ ಚರಿತ್ರೆಯನ್ನು ಅವರ ಲೋಕೋಪಕಾರಕಾರ್ಯವನ್ನೂ ಸಂಗ್ರಹ ರೂಪದಲ್ಲಿ ನೋಡೋಣ.

ಪೂಜ್ಯಪಾದರ ಜನನಕ್ಕೆ ಮುನ್ನ ಭರತಖಂಡದಲ್ಲಿ ಅವೈದಿಕ ಮತಗಳಾದ ಬೌದ್ಧ, ಜೈನ ಮತ್ತು ಚಾರ್ವಾಕಮತಗಳು ಹೆಚ್ಚು ಪ್ರಚಲಿತವಾಗಿದ್ದವು ಮತ್ತು ವೈದಿಕ ದರ್ಶನಗಳಾಗಿದ್ದ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ ಮತ್ತು ವೇದಾಂತ ಇವು ಕೇವಲ ಪಂಡಿತರ ಮತ್ತು ಉಚ್ಚ ವರ್ಗದವರಲ್ಲಿ ಮಾತ್ರ ಪ್ರಚಲಿತವಾಗಿದ್ದವು. ಇವಲ್ಲದೆ ಶೈವರ ಮಹಾವ್ರತಗಳೂ, ಶಾಕ್ತರ ವಾಮಾಚಾರಗಳೂ ಹಿಂದೂಸಮಾಜದಲ್ಲಿ ತುಂಬಿಕೊಂಡಿದ್ದವು. ಆ ಕಾಲದಲ್ಲಿದ್ದ ಶೈವರು ತಪ್ತಮುದ್ರಾಂಕನ ಮಾಡಿಕೊಳ್ಳುತ್ತಿದ್ದರು. ಪ್ರಾಣಬಲಿಯನ್ನು ಪೂಜಾಂಗವಾಗಿ ನೆರವೇರಿಸುತ್ತಿದ್ದರು.

ಪಾಂಚರಾತ್ರರೂ—ವೈಷ್ಣವ-ತಪ್ತಮುದ್ರಾಂಕನ ಮಾಡಿಕೊಳ್ಳುತ್ತಿದ್ದರೂ ಸೌಮ್ಯಪೂಜಾದಿಗಳನ್ನು ಮಾಡುತ್ತಿದ್ದರು. ಶೈವಕಾಪಾಲಿಕರು, ಮೂಳೆಗಳ ಹಾರವನ್ನು ಧರಿಸಿಕೊಂಡು, ನರಕಪಾಲದಲ್ಲಿ ಭೋಜನ ಮಾಡುತ್ತಿ [illegible] ತ್ತಿ. ಶಾಕ್ತರು ಮದ್ಯ, ಮಾಂಸ,

Sri Vidyabharathi Book Centre, Sringeri

CC-0. In Public Domain. Digitized by eGangotri

ಮೀನು, ಮೈಥುನ, ಮುದ್ರಾ ಎಂಬ ಐದು ವಿಧವಾದ ಅಂಗಗಳಿಂದ ಪೂಜೆ ಮಾಡುತ್ತಿದ್ದರು. ಆ ಕಾಲದಲ್ಲಿ ಭಾರತೀಯ ಧಾರ್ಮಿಕ ಸ್ಥಿತಿ ಅತ್ಯಂತ ದಾರುಣವಾಗಿತ್ತು. ನೈತಿಕ ಜೀವನ ತೀರಾ ಕೆಳವರ್ಗದಲ್ಲಿತ್ತು. ಬುದ್ಧನು ಅಹಿಂಸಾತತ್ವವನ್ನೇ ತಳಹದಿಯಾಗಿಟ್ಟುಕೊಂಡು ಉಪನಿಷತ್ತುಗಳಲ್ಲಿ ಹೇಳಿದ ತತ್ವಗಳನ್ನೇ ಜನಗಳಿಗೂ ಬೋಧಿಸಿದ್ದರೂ ಆತನ ನಂತರದವರು ಶೂನ್ಯವಾದಿಗಳಾಗಿದ್ದರು. ಜೈನಮತವು ಹಿಂದೂಧರ್ಮದಲ್ಲಿದ್ದ ಅನೇಕ ಅಂಶಗಳನ್ನು ತಾನು ಅಂಗೀಕರಿಸಿದ್ದರೂ ಜಗತ್ತಿನ ಮೂಲ ಕಾರಣದವಿಷಯದಲ್ಲಿ ಏನನ್ನೂ ಹೇಳದೆ ಮೌನವಾಗಿತ್ತು. ಚಾರ್ವಾಕ ಮತವಂತೂ ಯಾವುದೇ ನೀತಿ ನಿಯಮಗಳನ್ನೂ ಒಪ್ಪಿಕೊಂಡಿರಲಿಲ್ಲ. ಇತರ ಅವೈದಿಕ ಮತಗಳು ವೇದವಿರೋಧಿಗಳಾಗಿದ್ದರೂಸಹ ನೈತಿಕ ನಡೆನುಡಿಗಳಿಗೆ ಪ್ರಾಮುಖ್ಯತೆ ಕೊಟ್ಟಿದ್ದವು. ರಾಜಕೀಯವಾಗಿಯೂ ದೇಶ ಹಲವಾರು ಭಾಗಗಳಾಗಿ ಹಂಚಿಹೋಗಿತ್ತು. ಐಕಮತ್ಯವು ತಪ್ಪಿ ಹೋಗಿತ್ತು.

ಜೈನ ಬೌದ್ಧಮತಗಳ ಅನವರತ ಧಾಳಿಯಿಂದಲೂ, ಶೈವಶಾಕ್ತಾಚಾರಗಳ ವಿಕಟಾಟ್ಟಹಾಸದಿಂದಲೂ ಮತ್ತು ಚಾರ್ವಾಕಮತವು ನೀಡುತ್ತಿದ್ದ ಪ್ರಲೋಭನೆಗಳಿಂದಲೂ ದಿಕ್ಕು ಕಾಣದೆ ದಾರಿತಪ್ಪಿ ಅಂಧಕಾರದಲ್ಲಿ ಮುಳುಗುತ್ತಿದ್ದ ಭಾರತವನ್ನು ಉದ್ಧರಿಸುವಸಲುವಾಗಿ ಏಳನೆಯ ಶತಮಾನದಲ್ಲಿ ಶ್ರೀಶಂಕರಾಚಾರ್ಯರ ಅವತಾರವಾಯಿತು. ಕೇವಲ ಲೌಕಿಕ ಹರ್ಷ ಸಂತೋಷಗಳಿಂದ, ವಿಷಯಭೋಗಗಳಿಂದ ಉಂಟಾಗುತ್ತಿದ್ದ ಸುಖಾನುಭವಗಳೇ ಸರ್ವಸ್ವವೆಂದು ನಂಬಿ ಅವನತಿ ಹೊಂದುತ್ತಿದ್ದ ಜನತೆಯನ್ನು ಉದ್ಧರಿಸಿ ಲೋಕಹಿತಕ್ಕಾಗಿ ಬಾಳುವ ಪವಿತ್ರ ಧ್ಯೇಯದತ್ತ, ಆತ್ಮಸ್ವಾತಂತ್ರ್ಯದ ಮಹಾಧ್ಯೇಯದತ್ತ ಮುನ್ನಡೆಯಲು ದಾರಿ ತೋರಿದ ಮಹಾತ್ಮರೇ ಶ್ರೀ ಶಂಕರರು.

ಅತ್ರಿಗೋತ್ರ ಯಜುಶ್ಶಾಖೆಯ ನಂಬೂದರೀ ಬ್ರಾಹ್ಮಣ ದಂಪತಿಗಳಾದ ಶ್ರೀ ಶಿವಗುರು ಮತ್ತು ಶ್ರೀ ಸತಿ ಆರ್ಯಾಂಬಿಕೆ ಇವರು ಕೇರಳದ ತ್ರಿಚೂರು ಜಿಲ್ಲೆಯ ಪೂರ್ಣಾನದೀ ತೀರದಲ್ಲಿದ್ದ ಸಣ್ಣ ಗ್ರಾಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲಟಿಯಲ್ಲಿ ವಾಸವಿದ್ದರು. ಸದಾಚಾರ ಸಂಪನ್ನರೂ ದೈವನಿಷ್ಠರೂ ಧರ್ಮಪರಾಯಣರೂ ಆಗಿದ್ದ ಇವರಿಗೆ ಜನಿಸಿದ ಏಕಮಾತ್ರ ಪುತ್ರರೇ ಶ್ರೀ ಶಂಕರರು.

ಬಾಲಶಂಕರರಿಗೆ ಮೂರನೆಯ ವರ್ಷದಲ್ಲಿ ಚೂಡಾಕರ್ಮವೂ "ಬ್ರಹ್ಮವರ್ಚಸ ಕಾಮಸ್ಯ ಕಾರ್ಯಂ ವಿಪ್ರಸ್ಯ ಪಂಚಮೇ" ಎಂಬ ಶ್ರುತ್ಯುಕ್ತಿಗನುಸಾರವಾಗಿ, ಐದನೆಯ ವಯಸ್ಸಿನಲ್ಲಿ ಬ್ರಹ್ಮೋಪದೇಶವೂ ನಡೆದವು. ಹತ್ತಿರದಲ್ಲಿಯೇ ಇದ್ದ ಗುರು ಗೃಹದಲ್ಲಿ ಒಡನೆಯೇ ವೇದ ವೇದಾಂಗಾಧ್ಯಯನಗಳೂ ಆರಂಭವಾದವು. ಶ್ರೀಶಂಕರರು ಎಂಟನೆ ವಯಸ್ಸಿನಲ್ಲಿ ಪೂರ್ಣಾನದಿಯಲ್ಲಿ ಸ್ನಾನ ಮಾಡುತ್ತಿದ್ದ ಸಮಯದಲ್ಲಿ ಮಾನಸಿಕ ಆತುರ ಸಂನ್ಯಾಸ ಸ್ವೀಕರಿಸಿ, ತಾಯಿಯ ಅನುಜ್ಞೆ ಪಡೆದು ನರ್ಮದಾ ತೀರದ ಓಂಕಾರನಾಥದಲ್ಲಿದ್ದ ಆಚಾರ್ಯ ಶ್ರೀ ಗೋವಿಂದ ಭಗವತ್ಪಾದರಲ್ಲಿ ಬ್ರಹ್ಮವಿದ್ಯಾ ಶಿಕ್ಷಣಕ್ಕಾಗಿ ಬಂದರು. ಬಾಲಯತಿವರ್ಯರನ್ನು ಆತ್ಮೀಯತೆಯಿಂದ ಬರಮಾಡಿಕೊಂಡ ಗುರುವರ್ಯರು ಅವರಿಗೆ ವೇದಾಂತದ ಗಹನ ತತ್ವಗಳನ್ನೆಲ್ಲಾ ಉಪದೇಶಿಸಿದರು.

ಶ್ರೀ ಗೋವಿಂದಭಗವತ್ಪಾದರ ಅನುಜ್ಞೆಯಂತೆ ಶ್ರೀ ಶಂಕರರು ಕಾಶಿಗೆ ಪ್ರಯಾಣಮಾಡಿ ಅಲ್ಲಿ ಸ್ವಲ್ಪಕಾಲವಿದ್ದು ಅಲ್ಲಿಂದ ಬದರೀನಾಥಕ್ಕೆ ದಯಮಾಡಿಸಿದರು. ಬದರೀನಾಥದಲ್ಲಿ ವ್ಯಾಸಗುಹೆಯಲ್ಲಿ ಸ್ವಲ್ಪ ಕಾಲವಿದ್ದು ಗ್ರಂಥರಚನೆಯನ್ನುಮಾಡಿ ಆ ಬಳಿಕ ಕಾಶೀ ಕ್ಷೇತ್ರಕ್ಕೆ ಹಿಂದಿರುಗಿದರು. ಶ್ರೀಮದಾಚಾರ್ಯರು ಬದರಿಯಿಂದ ಕಾಶಿಗೆ ಹಿಂದಿರುಗುವುದರೊಳಗಾಗಿ ಪ್ರಸ್ಥಾನತ್ರಯ ಭಾಷ್ಯಗಳನ್ನು ರಚಿಸಿ ಪೂರ್ಣಮಾಡಿದ್ದರು.

ಕಾಶಿಯಲ್ಲಿ ಮೊದಲ ಶಿಷ್ಯರಾಗಿ ಚೋಳದೇಶದ ಶ್ರೀ ಸನಂದನಾಚಾರ್ಯರಿಗೆ ದೀಕ್ಷೆಯನ್ನಿತ್ತರು. ಕಾಶಿಯಲ್ಲಿ ವಿದ್ವಾಂಸರೊಡನೆ ವಾದಮಾಡಿ ಅವರಿಗೆ ಅದ್ವೈತ ಬೋಧನೆಯನ್ನು ಮಾಡಿದರು. ಶ್ರೀ ವ್ಯಾಸ ಮಹರ್ಷಿ ಮತ್ತು ಶ್ರೀ ವಿಶ್ವೇಶ್ವರರ ದರ್ಶನಗೈದು ಪ್ರಯಾಗಕ್ಕೆ ದಯಮಾಡಿಸಿದರು. ಪ್ರಯಾಗದಲ್ಲಿ ಕುಮಾರಿಲಭಟ್ಟರನ್ನು ಸಂದರ್ಶಿಸಿ, ತುಷಾಗ್ನಿಯಲ್ಲಿದ್ದ ಅವರಿಗೆ ಅದ್ವೈತ ಬೋಧನೆಮಾಡಿ, ಅವರ ಅಪೇಕ್ಷೆಯಂತೆ ನರ್ಮದಾ ತೀರದಲ್ಲಿದ್ದ ಮಾಹಿಷ್ಮತಿಗೆ ಬಂದರು.

Sri Vidyabharathi Book Centre, Sringeri

CC-0. In Public Domain. Digitized by eGangotri

ಮಾಹಿಷ್ಮತಿಯಲ್ಲಿ ಕರ್ಮಮೀಮಾಂಸಾಚಾರ್ಯ ಮಂಡನಮಿಶ್ರ ಶ್ರೀ ವಿಶ್ವರೂಪಾಚಾರ್ಯರೊಡನೆ ಮತ್ತು ಅವರ ಪತ್ನಿ ಶ್ರೀ ಉಭಯ ಭಾರತೀ ದೇವಿಯೊಡನೆ ವಾದಗೈದರು. ಅವರಿಗೆ ಜ್ಞಾನದ ಶ್ರೇಷ್ಠತೆಯನ್ನು ಉಪದೇಶಿಸಿದರು. ವಿಶ್ವರೂಪರು ಶ್ರೀ ಶಂಕರರಿಂದ ಜ್ಞಾನೋಪದೇಶ ಪಡೆದರು. ಅನಂತರ ಸ್ವಇಚ್ಛೆಯಿಂದ ಸನ್ಯಾಸದೀಕ್ಷೆ ಪಡೆದು ಶ್ರೀ ಸುರೇಶ್ವರಾಚಾರ್ಯರೆಂಬ ಯೋಗಪಟ್ಟವನ್ನು ಪಡೆದರು.

ಶ್ರೀ ಶಂಕರರು ಆ ಬಳಿಕ ತಮ್ಮ ಶಿಷ್ಯದ್ವಯರೊಡನೆ ದಕ್ಷಿಣಕ್ಕೆ ಪಶ್ಚಿಮತೀರದಲ್ಲಿ ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಶ್ರೀ ಬಲಿ* ಎಂಬ ಗ್ರಾಮದಲ್ಲಿದ್ದ ಪ್ರಭಾಕರನೆಂಬ ಗೃಹಸ್ಥನ ಮೂಕ ಪುತ್ರನನ್ನು ಅನುಗ್ರಹಿಸಿ ಸನ್ಯಾಸವಿತ್ತು ಶ್ರೀ ಹಸ್ತಾಮಲಕರೆಂಬ ಯೋಗಪಟ್ಟವನ್ನು ಕೊಟ್ಟು ಶಿಷ್ಯನನ್ನಾಗಿ ಪರಿಗ್ರಹಿಸಿದರು. ಅಲ್ಲಿಂದ ಋಶ್ಯಶೃಂಗ ಕ್ಷೇತ್ರವೆಂದು ಪ್ರಸಿದ್ಧವಾದ ಶೃಂಗೇರಿಗೆ ಬಂದರು.

ಶೃಂಗೇರಿಯಲ್ಲಿ ಬಹಳ ಕಾಲವಿದ್ದ ಆಚಾರ್ಯರು, ಆನಂದಗಿರಿ ಎಂಬ ಸ್ಥಳೀಯ ಬ್ರಹ್ಮಚಾರೀ ಶಿಷ್ಯನಿಗೆ ದೀಕ್ಷೆಯನ್ನಿತ್ತರು. ಇವರೇ ಮುಂದೆ ಶ್ರೀ ತೋಟಕಾಚಾರ್ಯರೆಂದು ಪ್ರಸಿದ್ಧರಾದರು.‡ ಶೃಂಗೇರಿಯಲ್ಲಿ ಶ್ರೀಮದಾಚಾರ್ಯರು ಶ್ರೀ ಶಾರದಾಪೀಠವನ್ನೂ ಶ್ರೀ ಚಕ್ರದಲ್ಲಿ ಜ್ಞಾನ ಸ್ವರೂಪಿಣಿ ಶ್ರೀ ಶಾರದೆಯನ್ನೂ ಸ್ಥಾಪಿಸಿದರು. ಅಲ್ಲಿಯೇ ಹಲವಾರು ಪ್ರಕರಣಗ್ರಂಥಗಳನ್ನು ರಚಿಸಿದರು. ಸ್ವಾಶ್ರಮವಾದ ಶೃಂಗೇರಿಯಲ್ಲಿ ಮೊದಲನೆಯ ಮಠವನ್ನು ಸ್ಥಾಪಿಸಿ ಅಲ್ಲಿನ ವ್ಯಾಖ್ಯಾನಸಿಂಹಾಸನದಲ್ಲಿ ಸುರೇಶ್ವರಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿದರು.

---

*ಉಡುಪಿಯ ಶಿವಳ್ಳಿ ಇರಬಹುದೆಂದು ಹಲವಾರು ವಿದ್ವಾಂಸರು ಅಭಿಪ್ರಾಯ ಪಟ್ಟಿರುತ್ತಾರೆ.

‡ಆಚಾರ್ಯರ ನಾಲ್ವರು ಶಿಷ್ಯರಲ್ಲಿ, ಇಬ್ಬರು ಕರ್ನಾಟಕದವರು, ಶ್ರೀ ಹಸ್ತಾಮಲಕ ಮತ್ತು ಶ್ರೀ ತೋಟಕಾಚಾರ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಿಂದ ಕಾಲಟಿಗೆ ದಯಮಾಡಿಸಿ, ಮರಣೋನ್ಮುಖರಾಗಿದ್ದ ತಾಯಿಯನ್ನು ದರ್ಶಿಸಿ ಆಕೆಯ ಸೇವೆ ಮಾಡಿದರು. ಆಕೆಯು ಮೃತರಾಗಲು ತಾವೇ ಸಂಸ್ಕಾರಮಾಡಿ ಮಾತೃಸೇವೆಯ ಮಹತ್ವವನ್ನು ತೋರಿಸಿಕೊಟ್ಟರು. ಅಲ್ಲಿಂದ ಶೃಂಗೇರಿಗೆ ಮರಳಿ ಬಂದ, ಅನಂತರ ದಿಗ್ವಿಜಯ ಯಾತ್ರೆಗೈದರು. ಭರತಖಂಡವನ್ನೆಲ್ಲಾ ಸಂಚರಿಸಿ ಪಾಷಂಡ ಮತಗಳನ್ನೆಲ್ಲಾ ಖಂಡಿಸಿ ಧರ್ಮಸಂಸ್ಥಾಪನೆ ಮಾಡಿ, ಅದ್ವೈತ ದುಂದುಭಿಯನ್ನು ಮೊಳಗಿಸಿದರು.

ಧರ್ಮಪ್ರಸಾರಕ್ಕಾಗಿ ಚತುರ್ವ್ಯೂಹ ರಚನೆಯಲ್ಲಿ, ಕರ್ಮ, ಜ್ಞಾನಮಯೀ ಭರತಭೂಮಿಯಲ್ಲಿ ಯಜ್ಞವೇದಿಕೆಯ ಸಂಕೇತಾನುಸಾರವಾಗಿ ನಾಲ್ಕು ವೇದಗಳನ್ನು ಅನುಸರಿಸಿ ನಾಲ್ಕುದಿಕ್ಕುಗಳಲ್ಲಿಯೂ ನಾಲ್ಕು ಆಮ್ನಾಯ ಮಠಗಳನ್ನು ಸ್ಥಾಪಿಸಿದರು. ದಕ್ಷಿಣದಲ್ಲಿ ಶೃಂಗೇರಿಯಲ್ಲಿ ಶ್ರೀ ಶಾರದಾ ಪೀಠವನ್ನೂ ಪೂರ್ವದಲ್ಲಿ ಶ್ರೀ ಜಗನ್ನಾಥಕ್ಷೇತ್ರದಲ್ಲಿ ಶ್ರೀ ಗೋವರ್ಧನ ಪೀಠವನ್ನೂ, ಪಶ್ಚಿಮದಲ್ಲಿ ದ್ವಾರಕಾ ಕ್ಷೇತ್ರದಲ್ಲಿ ಕಾಳಿಕಾಪೀಠವನ್ನೂ, ಉತ್ತರದಲ್ಲಿ ಶ್ರೀ ಬದರಿಕಾಶ್ರಮದಲ್ಲಿ ಜ್ಯೋತಿರ್ಪೀಠವನ್ನೂ ಸ್ಥಾಪಿಸಿ, ಪೀಠಗಳಿಗೆ ಸೇರಿದ ಆಮ್ನಾಯ ಮಠಗಳಿಗೆ ಕ್ರಮವಾಗಿ ಶ್ರೀ ಸುರೇಶ್ವರಾಚಾರ್ಯ ಶ್ರೀ ಪದ್ಮಪಾದಾಚಾರ್ಯ, ಶ್ರೀ ಹಸ್ತಾಮಲಕಾಚಾರ್ಯ ಶ್ರೀತೋಟಕಾಚಾರ್ಯರನ್ನೂ ಪಟ್ಟಾಭಿಷಿಕ್ತರನ್ನಾಗಿ ಮಾಡಿದರು.

ಪೀಠ : ದೇವಯೋನಿಗಳು ವಾಸಿಸುವ ಸ್ಥಳ, ದೇವಮೂರ್ತಿಗಳು ಪ್ರತಿಷ್ಠೆಯಾದ ಅನೇಕ ತೀರ್ಥಕ್ಷೇತ್ರಗಳು. "ಕಲೌ ಸ್ಥಾನಾನಿ ಪೂಜ್ಯಂತೆ" ಎಂದಿರುವುದರಿಂದ ಪೀಠಗಳನ್ನು ಕದಲಿಸಲಾಗದು. ಶಾರದಾಪೀಠ, ಕಾಳಿಕಾಪೀಠ, ಗೋವರ್ಧನಪೀಠ, ಜ್ಯೋತಿರ್ಪೀಠ ಇತ್ಯಾದಿ ಪೀಠಗಳು ಶಾಶ್ವತವಾಗಿ ಅವು ಸ್ಥಾಪಿಸಲ್ಪಟ್ಟ ಸ್ಥಳಗಳಲ್ಲಿಯೇ ಇರತಕ್ಕದ್ದು. ಆಮ್ನಾಯವೆಂದರೆ ವೇದ.

Sri Vidyabharathi Book Centre, Sringeri

CC-0. In Public Domain. Digitized by eGangotri

ಭರತಖಂಡದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ, ರಾಜಕೀಯ ಐಕ್ಯತೆಗೆ ಮುನ್ನವೇ ಧಾರ್ಮಿಕ ಏಕತೆಯನ್ನು ಸಾಧಿಸಿದರು. ದಕ್ಷಿಣದ ಪೀಠಕ್ಕೆ ಉತ್ತರದವರನ್ನೂ, ಉತ್ತರದ ಪೀಠಕ್ಕೆ ದಕ್ಷಿಣದವರನ್ನೂ, ಪೂರ್ವದ ಪೀಠಕ್ಕೆ ದಕ್ಷಿಣದವರನ್ನೂ, ಪಶ್ಚಿಮದ ಪೀಠಕ್ಕೆ ದಕ್ಷಿಣದವರನ್ನೂ ನೇಮಕಮಾಡಿ, ಭಾವೈಕ್ಯತೆಗೆ ಬುನಾದಿ ಹಾಕಿದರು. ತಾವು ಕೇರಳದವರಾಗಿದ್ದರೂ ತಮ್ಮವರನ್ನು ಎಲ್ಲಿಯೂ ನೇಮಕ ಮಾಡದೆ, ಅರ್ಹತೆಗೂ ಯೋಗ್ಯತೆಗೂ ಪ್ರಾಮುಖ್ಯತೆ ಇತ್ತರು.

ಆಮ್ನಾಯ ಮಠಗಳ ಸ್ಥಾಪನೆಯ ನಂತರ ಕಾಶ್ಮೀರಕ್ಕೆ ಬಂದು ಸರ್ವಜ್ಞಪೀಠಾರೋಹಣಮಾಡಿ ಆ ಬಳಿಕ ಹಿಮಾಲಯಕ್ಕೆ ದಯಮಾಡಿಸಿ ಕೇದಾರನಾಥನ ಸನ್ನಿಧಿಯಲ್ಲಿ ಸ್ವಲ್ಪಕಾಲವಿದ್ದು, ಕೈವಲ್ಯಧಾಮದಲ್ಲಿ ಎಲ್ಲರಿಗೂ ಕಡೆಯದಾಗಿ ದರ್ಶನವನ್ನಿತ್ತು ಅಂತರ್ಧಾನರಾದರು. ಆಗ ಆಚಾರ್ಯರ ವಯಸ್ಸು ಕೇವಲ ಮೂವತ್ತೆರಡು ವರ್ಷಗಳು.

ಮಠ : ಬ್ರಹ್ಮಚಾರಿಗಳು ವಿದ್ಯೆಯನ್ನು ಕಲಿಯುವಂತಹ ಸ್ಥಳ, ಸನ್ಯಾಸಿಗಳು ಬ್ರಹ್ಮಚಾರಿಗಳು ವಾಸಿಸುವಂತಹ ಸ್ಥಳವೇ ಮಠ. ಮಠ: ಛಾತ್ರಾದಿನಿಲಯಃ

ಆಮ್ನಾಯ ಮಠ : ಮಠಾಮ್ನಾಯ ಮತ್ತು ಮಹಾನುಶಾಸನಗಳಿಂದ ಬದ್ಧವಾಗಿ ಆಡಳಿತ ನಡೆಸಲ್ಪಡುವ ಮಠಗಳು. ಇತರ ಸನ್ಯಾಸಿಗಳು, ಗೃಹಸ್ಥರು ಮತ್ತು ಬ್ರಹ್ಮಚಾರಿಗಳಿಗೆ ಮಾರ್ಗದರ್ಶನ ನೀಡುವ ನಿರ್ದೇಶನ ಕೊಡುವ ಸ್ಥಳ. ಸಾಧಾರಣ ಸನ್ಯಾಸಿಗಳು ಸ್ನಾನ, ಶೌಚ, ಭಿಕ್ಷೆ ಮತ್ತು ಏಕಾಂತ ಸೇವನ ಇಷ್ಟನ್ನು ಪಾಲಿಸಿದಲ್ಲಿ, ಆಮ್ನಾಯ ಮಠಾಧಿಪತಿಗಳು ಸಾಧಾರಣ ಸನ್ಯಾಸಿಗಳ ಮೇಲ್ವಿಚಾರಣೆಯಷ್ಟನ್ನೇ ಅಲ್ಲದೆ, ಸಮಾಜದ ಧಾರ್ಮಿಕ ನೈತಿಕ ವ್ಯವಹಾರಗಳಲ್ಲಿಯೂ ಸಹ ನಿರ್ದೇಶನ ನೀಡಬೇಕು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಶ್ರೀಮದಾಚಾರ್ಯರ ಕಾಲವು ಭಾರತೀಯ ಅಧ್ಯಾತ್ಮಿಕ ಇತಿಹಾಸದಲ್ಲಿ ಸುವರ್ಣಯುಗವಾಗಿತ್ತು. ಅದು ಮೀಮಾಂಸಾ, ನ್ಯಾಯ, ವೈಶೇಷಿಕ, ಸಾಂಖ್ಯ ಮತ್ತು ಯೋಗ ದರ್ಶನಗಳಲ್ಲಿಯೂ, ಜೈನ, ಬೌದ್ಧಮತಗಳಲ್ಲಿಯೂ, ವ್ಯಾಕರಣ ಜ್ಯೋತಿಷಶಾಸ್ತ್ರಗಳಲ್ಲಿಯೂ ಶ್ರೇಷ್ಠ ಪಂಡಿತರು ಇದ್ದ ಕಾಲ. ಪ್ರತಿಯೊಬ್ಬರೂ ತಮ್ಮ ತಮ್ಮ ಮತಗಳನ್ನು ಮಂಡಿಸಲು ಇತರ ಮತಗಳನ್ನು ಖಂಡಿಸಲು ವಾದವಿವಾದಗಳಲ್ಲಿ ತೊಡಗಿ ಗ್ರಂಥಗಳನ್ನು ರಚಿಸುತ್ತಿದ್ದ ಕಾಲ. ತಮ್ಮ ಮಾರ್ಗ ಅಸಿಂಧು. ಅಸಾಧುವಾದುದು ಎಂದು ತಿಳಿದರೆ ಹೃತ್ಪೂರ್ವಕವಾಗಿ ಇದಿರಾಳಿಯ ಮಾರ್ಗವನ್ನು ಅನುಸರಿಸಲು ಸಿದ್ಧವಾಗಿದ್ದಂತಹ ವಿಶಾಲ ಹೃದಯರಾದ ಪಂಡಿತಶ್ರೇಷ್ಠರು ಇದ್ದ ಕಾಲ. ಅದು ಬೌದ್ಧಿಕಯುಗವಾಗಿತ್ತು. ವಿಚಾರವಂತರ ಯುಗವಾಗಿತ್ತು.

ಅಂತಹ ಸಂಧಿಕಾಲದಲ್ಲಿ ಆಚಾರ್ಯರ ಅವತಾರವಾದುದು ವೈದಿಕ ಧರ್ಮದ ಪುನರುತ್ಥಾನಕ್ಕಾಗಿಯೇ. ನೈರಾತ್ಮ್ಯವಾದ ನಿರೀಶ್ವರವಾದಗಳನ್ನು ಖಂಡಿಸಿ ಅವುಗಳ ಬೆಳವಣಿಗೆಯನ್ನು ತಡೆದರು. ಅವರೆಲ್ಲರೂ ತಮ್ಮ ಲೋಪ ದೋಷಗಳನ್ನರಿತು ಮತ್ತೆ ವೈದಿಕ ಧರ್ಮದ ಶ್ವೇತಚ್ಛತ್ರದ ಆಶ್ರಯಕ್ಕೆ ಬರುವಂತೆ ಮಾಡಿದರು. ಶ್ರೀ ಶಂಕರರು ವೈದಿಕ ಮತವನ್ನು ಉದ್ಧಾರ ಮಾಡಿದರು. ಷಣ್ಮತಗಳಲ್ಲಿ ಸೇರಿಕೊಂಡಿದ್ದ ನಿಷಿದ್ಧ ಆಚಾರಗಳನ್ನೆಲ್ಲಾ ನಿವಾರಿಸಿ ಅವುಗಳಿಗೆ ವೈದಿಕ ಬಲವನ್ನು ಕೊಟ್ಟು ಸನಾತನ ಧರ್ಮದ ಚೌಕಟ್ಟಿನಲ್ಲಿ ಅವುಗಳನ್ನೆಲ್ಲಾ ತಂದು ಷಣ್ಮತಸ್ಥಾಪನಾಚಾರ್ಯರಾದರು. ಅವರು ಜ್ಞಾನಿಗಳಲ್ಲಿ ಅಗ್ರೇಸರಾಗಿದ್ದಂತೆಯೇ ಭಕ್ತಶಿರೋಮಣಿಗಳೂ ಆಗಿದ್ದರು. ಆಚಾರ್ಯರಿಂದ ರಚಿತವಾದ ಅನೇಕ ಸ್ತೋತ್ರಗಳಲ್ಲಿ ಕಂಡುಬರುವ ಶಿವ, ವಿಷ್ಣು, ಶಕ್ತಿ ಮುಂತಾದ ದೇವತೆಗಳ ಪಾರಮ್ಯವನ್ನು ಕಂಡುಕೊಂಡ ವೈಷ್ಣವರೂ, ಶಾಕ್ತರೂ, ಶೈವರೂ ಮುಂತಾದ ಅನೇಕರು ಆಚಾರ್ಯರನ್ನು ತಮ್ಮವರೇ ಎಂದು ಕರೆದುಕೊಂಡಿದ್ದಾರೆ. ಅವರು ಶೈವ, ವೈಷ್ಣವಾದಿ ಷಣ್ಮತಸ್ಥಾಪಕರಾದುದರಿಂದ ಆಯಾ ಜನಾಂಗದವರು ಅವರನ್ನು ತಮ್ಮವರೇ ಎಂದು ಹೇಳುವುದು ಸಮಂಜಸವೇ ಅಲ್ಲವೇ ?

Sri Vidyabharathi Book Centre, Sringeri

CC-0. In Public Domain. Digitized by eGangotri

ಆಧ್ಯಾತ್ಮಿಕ ವಿಷಯಗಳಲ್ಲಿ ಪೂಜ್ಯಪಾದರು ಅದ್ವೈತಭಾವನೆಯಿಂದ, ಅಜ್ಞಾನ ಜನ್ಯವಾದ ಭೇದ, ಭಯ, ದುಃಖ, ವ್ಯಥೆ, ವ್ಯಸನ, ತರತಮ ಭಾವನೆಗಳನ್ನು ಹೇಗೆ ನಿವಾರಿಸಿದರೋ ಹಾಗೆಯೇ ಐಹಿಕ ವಿಷಯಗಳಲ್ಲಿಯೂ ಆತ್ಮ ಸ್ವಾತಂತ್ರ್ಯದ ಸಂದೇಶವನ್ನು ಜಗತ್ತಿಗೆ ಸಾರಿದರು. ಜ್ಞಾನಿಯಾದವನು ಚಾಂಡಾಲನಾದರೇನು, ಬ್ರಾಹ್ಮಣನಾದರೇನು ಆತನೂ ಸಹ ತಮ್ಮ ಗುರುವೇ ಎಂದು ಅಂಗೀಕರಿಸಿದರು.†

ಆಚಾರ್ಯರ ಶಿಷ್ಯರು ಮುಂದೆ ದ್ವೀಪಾಂತರಗಳಿಗೂ ಹೋಗಿ ಭಾರತೀಯ ಧರ್ಮ ತತ್ತ್ವಗಳ ಪ್ರಚಾರವನ್ನು ಮಾಡಿದರು.* ಆಚಾರ್ಯರ ಆ ಅಮರಸಂದೇಶವೇ ಮತ್ತೊಮ್ಮೆ ಶ್ರೀ ವಿವೇಕಾನಂದವಾಣಿಯಾಗಿ, ಶ್ರೀ ರಾಮತೀರ್ಥವಾಣಿಯಾಗಿ ನಾಡಿನಲ್ಲೆಲ್ಲಾ ಮೊಳಗಿ ಇಂದಿನ ಸ್ವಾತಂತ್ರ್ಯಕ್ಕೆ ಅಸ್ತಿಭಾರ ಹಾಕಿತು. ಹೊರರಾಷ್ಟ್ರಗಳಲ್ಲಿಯೂ ಜಯಭೇರಿಯನ್ನು ಮೊಳಗಿಸಿತು.

ಜ್ಞಾನಮಾರ್ಗೋಪದೇಶಕ್ಕಾಗಿ ಉಪನಿಷತ್ತು ಬ್ರಹ್ಮಸೂತ್ರ ಮತ್ತು ಗೀತಾಭಾಷ್ಯಗಳನ್ನೂ, ಉ ಪ ದೇ ಶ ಸಾ ಹ ಸ್ರಿ ಯ ನ್ನೂ,

---

ಮಠ : ಬ್ರಹ್ಮಘೋಷೋ ಭವೇದ್ಯತ್ರಯತ್ರ ಬ್ರಹ್ಮಾಶ್ರಮಿಸ್ಥಿತಿಃ ।
ವೇದಪ್ರದಾನಕಂ ವೇಶ್ಮ ಮಠ ಇತ್ಯಭಿಧೀಯತೇ ॥

†ಚಾಂಡಾಲೋಽಸ್ತು ಸತುದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾಮಮ ಎಂದು ಆಚಾರ್ಯರು ಮನೀಷಾ ಪಂಚಕದಲ್ಲಿ ಹೇಳಿದ್ದಾರೆ.

*ಕಾಂಬೋಡಿಯಾ ದಲ್ಲಿ ಕ್ರಿ. ಶ. 878–887 ರಲ್ಲಿ ಇದ್ದ ದೊರೆ ಇಂದ್ರವರ್ಮನ ಗುರುವಾದ ಶಿವಸೋಮನೆಂಬಾತನು ತಾನು ಭಗವಾನ್ ಶಂಕರರ ಶಿಷ್ಯನೆಂದು ಹೇಳಿ ಕೊಂಡಿದ್ದಾನೆ, ಆದರೆ ಈ ಶಂಕರರೇ ಬೇರೆ. ಆದಿ ಶಂಕರರಲ್ಲವೆಂದು ಹಲವರು ಅಭಿಪ್ರಾಯ ಪಡುತ್ತಾರೆ.
ಯೇನಾಧೀತಾನಿ ಶಾಸ್ತ್ರಾಣಿ ಭಗವಚ್ಛಂಕರಾಹ್ವಯಾತ್ ।
ನಿಶ್ಶೇಷಸೂರಿ ಮೂರ್ಧಾಲಿ ಮಾಲಾ ಲೀಢಾಂಘ್ರಿ ಪಂಕಜಾತ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿಮಾರ್ಗ ಬೋಧನೆಗಾಗಿ ಅನೇಕ ಸ್ತೋತ್ರಗಳನ್ನೂ, ವಿಷ್ಣು ಸಹಸ್ರನಾಮ ಭಾಷ್ಯವನ್ನೂ, ಶ್ರೀ ವಿದ್ಯಾಪರವಾಗಿ ಸೌಂದರ್ಯಲಹರೀ, ಮಂತ್ರಮಾತೃಕಾಕ್ಷರಮಾಲಾ ಸ್ತೋತ್ರ ಶ್ರೀ ಲಲಿತಾತ್ರಿಶತಿಭಾಷ್ಯ ಮುಂತಾದುವನ್ನು ರಚಿಸಿದರು. ಷಣ್ಮತಸ್ಥಾಪನೆಯ ದ್ಯೋತಕವಾಗಿ ಶಿವ, ವಿಷ್ಣು, ದೇವಿ, ಕುಮಾರ, ಗಣಪತಿ ಮುಂತಾದ ದೇವತೆಗಳನ್ನು ಕುರಿತು ಅನೇಕ ಸ್ತೋತ್ರ ರತ್ನಗಳನ್ನು ರಚಿಸಿದರು. ಇವಿಷ್ಟೇ ಅಲ್ಲದೆ ವೇದಾಂತ ತತ್ವವನ್ನು ಅತ್ಯಂತ ಸುಲಭವಾಗಿಯೂ, ಸರಳವಾಗಿಯೂ, ಸಂಗ್ರಹವಾಗಿಯೂ, ಬೋಧಿಸುವುದಕ್ಕಾಗಿ, ಭಜಗೋವಿಂದಸ್ತೋತ್ರ, ಏಕಶ್ಲೋಕೀ, ನಿರ್ವಾಣಷಟ್ಕ, ಮನೀಷಾ ಪಂಚಕ ಇತ್ಯಾದಿ ಅನೇಕಸ್ತೋತ್ರಗಳನ್ನು ರಚಿಸಿದರು. ಮುಮುಕ್ಷುಗಳ ಯೋಗ್ಯತೆ ಅರ್ಹತೆಗೆ ತಕ್ಕಂತೆ ಬೋಧನೆಮಾಡಿ ಜಗದ್ಗುರುವೇ ಆದರು.

ಶ್ರೀ ಶಂಕರರ ಸಮನ್ವಯದಂತೆ ಬ್ರಹ್ಮವು ಶಾಶ್ವತವಾದುದೂ, ರೂಪರಹಿತವಾದುದೂ, ತ್ರಿಗುಣಾತೀತವಾದುದೂ ಆಗಿರುತ್ತದೆ. ಈ ಬ್ರಹ್ಮವು ಮಾಯಾ ಅಥವಾ ಅವಿದ್ಯಾ ಎಂದು ಕರೆಯಲ್ಪಡುವ ಅನಿರ್ವಚನೀಯವಾದ ತನ್ನ ಶಕ್ತಿಯ ಸಹಾಯದಿಂದ ದೇಶ, ಕಾಲ, ನಿಯಮಗಳಿಗೆ ಒಳಗಾಗಿ ಬದಲಾವಣೆ ಹೊಂದುವ, ನಾಶಕ್ಕೊಳಗಾಗುವ ಈ ಸೃಷ್ಟಿ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುತ್ತದೆ. ಜೀವನು ಈ ಬ್ರಹ್ಮನಿಂದ ಬೇರೆಯಲ್ಲ. ಆದರೆ ಉಪಾಧಿಗಳಿಂದ ಭಿನ್ನನಂತೆ ತೋರುತ್ತಾನೆ. ಈ ಉಪಾಧಿಗಳು ಮಿಥ್ಯವಾದವುಗಳು. ಒಮ್ಮೆ ಅಜ್ಞಾನವು ನಾಶವಾದರೆ ಎಂದರೆ, ಬಂಧನಕ್ಕೆ ಕಾರಣವಾದ ಉಪಾಧಿಗಳು ನಾಶವಾದರೆ, ಜೀವನು ಏಕ-ಮೇವ ಬ್ರಹ್ಮನೇ ಎಂಬ ಅರಿವು ಮೂಡುತ್ತದೆ. ಜಗತ್ತು ಜೀವ ಮತ್ತು ಈಶ್ವರ ಈ ಮೂರೂ ಬ್ರಹ್ಮವೇ. ಈ ಉಪಾಧಿ ನಾಶಕ್ಕೆ ಜ್ಞಾನವು ಅತ್ಯಾವಶ್ಯಕ ಮತ್ತು ಏಕಮಾತ್ರ ಸಾಧನ.

ಬ್ರಹ್ಮವು ನಿರಾಕಾರವೂ ಸಾಕಾರವೂ ಆಗಿ ಗೋಚರಿಸುತ್ತದೆ. ಪ್ರಪಂಚದ ಸಂಬಂಧವಿಲ್ಲದೇ ತನ್ನಷ್ಟಕ್ಕೆ ತಾನಿದ್ದಾಗ ಇಂದ್ರಿಯಾತೀತವೂ, ವಾಙ್ಮನೋತೀತವೂ, ನಿರಾಕಾರವೂ ಆಗಿರುತ್ತದೆ. ಆ ಬ್ರಹ್ಮವೇ ಜಗತ್ ಸೃಷ್ಟಿ, ಸ್ಥಿತಿ, ಲಯಕರ್ತೃವೆಂದು ಧ್ಯಾನಿಸಿದಾಗ ಸಾಕಾರವಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುತ್ತದೆ. ಬ್ರಹ್ಮವು ಸ್ವೇಚ್ಛೆಯಿಂದ ತನ್ನ ಶಕ್ತಿಯಾದ ಮಾಯೆಯನ್ನು ವಿಸ್ತರಿಸಿಕೊಂಡಾಗಲೇ ಈಶ್ವರವಾಗುತ್ತದೆ. ಭಕ್ತರನ್ನೂ, ಭಜಕರನ್ನೂ ಅನುಗ್ರಹಿಸುವುದಕ್ಕಾಗಿ ಅವರವರ ಉಪಾಸನೆಗೆ ಅನುಗುಣವಾಗಿ ಅವರವರ ಭಾವನೆಗೆ ತಕ್ಕಂತೆ ದಿವ್ಯರೂಪಗಳಲ್ಲಿ ಕಾಣಿಸುತ್ತದೆ.

ಶ್ರೀ ಶಂಕರರ ಅನಂತರ ಅಭಿವೃದ್ಧಿಗೆ ಬಂದ ಅನೇಕಾನೇಕ ಮತಗಳು ಪ್ರತಿಯೊಂದೂ ಯಾವುದಾದರೂ ಒಂದು ರೀತಿಯಲ್ಲಿ ಆಚಾರ್ಯರ ಬೋಧನೆಯ ಪ್ರಭಾವಲಯದಲ್ಲಿ ಬಂದಿವೆ. ಅವರ ಅನಂತರ ಬಂದ ಇತರ ಆಚಾರ್ಯರುಗಳು ಶ್ರೀ ಶಂಕರರ ಆದರ್ಶವನ್ನೇ ಅನುಸರಿಸಿ ಗ್ರಂಥ ರಚನೆಯನ್ನೂ ಮತಗಳ ಸ್ಥಾಪನೆಯನ್ನೂ ಮಾಡಿದರು ಮತ್ತು ಅವರಂತೆಯೇ ಸಂಸ್ಕೃತ ಭಾಷೆಯನ್ನೇ ಉಪದೇಶ ಮಾಧ್ಯಮನ್ನಾಗಿ ಆರಿಸಿಕೊಂಡರು. ಶ್ರೀ ಶಂಕರಾಚಾರ್ಯರು ಸನ್ಯಾಸಾಶ್ರಮಕ್ಕೆ ಶ್ರೇಷ್ಠ ಸ್ಥಾನವನ್ನು ಕಲ್ಪಿಸಿಕೊಟ್ಟರು. ಭರತಖಂಡದಲ್ಲೆಲ್ಲಾ ಪ್ರಸಿದ್ಧವಾದ ದಶನಾಮೀ ಸಂಪ್ರದಾಯ ಪ್ರವರ್ತಕರು ಶ್ರೀ ಶಂಕರರೇ. ವಿಶ್ವದ ಯಾವ ದೇಶದಲ್ಲೂ ಕಾಣಲಾಗದ ಭಕ್ತ, ತಪಸ್ವಿ, ಯೋಗಿ, ಕವಿ, ಜ್ಞಾನಿ, ಸಂನ್ಯಾಸಿ, ದಾರ್ಶನಿಕ, ಉದ್ಧಾರಕ, ಸುಧಾರಕ, ಮುಂತಾದವರ ಮಹಾ ಗುಣಗಳ ಸಿದ್ಧಿ ಸಾಧನೆಗಳ ಮತ್ತು ಪವಿತ್ರ ಭಾವನೆಗಳ ದಿವ್ಯ ಸಮಾಗಮವನ್ನು ಶ್ರೀಮದಾಚಾರ್ಯರಲ್ಲಿ ನಾವು ಕಾಣುತ್ತೇವೆ. ಜಾಗತಿಕ ಜ್ಞಾನದ ವಿಸ್ತೃತ ದರ್ಶನದಲ್ಲಿ ಪ್ರತಿಯೊಂದನ್ನೂ ಅದರದರ ಯೋಗ್ಯ ಸ್ಥಾನದಲ್ಲಿಟ್ಟು ಎಲ್ಲರನ್ನೂ ಅದ್ವೈತ ಬ್ರಹ್ಮದತ್ತ ಕೊಂಡೊಯ್ಯಲು ಶ್ರೀ ಶಂಕರರ ಉಪದೇಶವೊಂದೇ ಸಾಧನವಾಗಿದೆ. ಅದ್ವೈತದ ಏಕೀಕರಣ ಭಾವನೆಯು ಇಡೀ ವಿಶ್ವವನ್ನೇ ಒಂದುಗೂಡಿಸುವ ಯೋಗ್ಯತೆಯನ್ನು ಹೊಂದಿದೆ.

ಆಚಾರ್ಯರು ಮಹಾಸಂಧಿಕಾಲದಲ್ಲಿ ಅವತರಿಸಿ, ರಾಷ್ಟ್ರಕ್ಕೊಂದು ಧರ್ಮ ಅದು ಸನಾತನ ಧರ್ಮ, ರಾಷ್ಟ್ರಕ್ಕೊಂದು ಭಾಷೆ ಸಂಸ್ಕೃತ ಭಾಷೆ, ರಾಷ್ಟ್ರಕ್ಕೊಂದು ತತ್ತ್ವ ಅದ್ವೈತ ತತ್ತ್ವ ಇವುಗಳ ಕೊಡುಗೆಗಳನ್ನಿತ್ತು ಚಿರಸ್ಮರಣೀಯರಾದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದಾಚಾರ್ಯರು ಬ್ರಹ್ಮವಿದ್ಯಾ ಸ್ವರೂಪಳಾದ ಶ್ರೀ ದೇವಿಯನ್ನು ಶ್ರೀ ಚಕ್ರದಲ್ಲಿ ಸ್ಥಾಪಿಸಿ, ಭಕ್ತಿ, ಕರ್ಮ ಮತ್ತು ಯೋಗಗಳ ಸಂಯೋಗವಾದ ಶ್ರೀ ವಿದ್ಯೆಯಿಂದ ದೇವಿಯನ್ನು ಪೂಜಿಸುವ ವಿಧಾನವನ್ನೂ ಅದ್ವೈತದ ಪ್ರಾಯೋಗಿಕ ಸಾಧನವನ್ನಾಗಿ ಮಾಡಿದರು. ದೇಶ ಮತ್ತು ಧರ್ಮದ ರಕ್ಷಣೆಗಾಗಿ ಸಂನ್ಯಾಸಿಗಳ ಪಡೆಯನ್ನೇ ನಿರ್ಮಿಸಿದ ಶಂಕರರು ಇಂದು ಭರತಖಂಡದಲ್ಲೆಲ್ಲಾ ವ್ಯಾಪಿಸಿರುವ ದಶನಾಮೀ ಸಂಪ್ರದಾಯದ ಸಂನ್ಯಾಸಿಗಳಿಗೆ ಮೂಲ ಪುರುಷರಾದರು.

ಶಂಕರರೂ ಪವಾಡಗಳನ್ನು ಮೆರೆದರೆಂದು ಎಲ್ಲ ಶಂಕರವಿಜಯಕಾರರೂ ವರ್ಣಿಸಿದ್ದಾರೆ. *ತಮ್ಮ ಕಥಾನಾಯಕರನ್ನು ಕುರಿತು ಬರೆಯುವಾಗ, ಅವರು ಅತ್ಯಂತ ಶ್ರೇಷ್ಠ ಪುರುಷರೆಂಬ ಕಲ್ಪನೆ ಬರಲು, ಕವಿಗಳು ಕಲ್ಪನೆಯ ಅದ್ಭುತ ಘಟನೆಗಳನ್ನು ಚಿತ್ರಿಸುವುದು ಅಸ್ವಾಭಾವಿಕವೇನಲ್ಲ. ಮತ್ತು ಯೋಗಸಿದ್ಧರಾದಂತಹ ಮಹಾತ್ಮರಿಗೆ ಪವಾಡಗಳು ಸಾಮಾನ್ಯ ಚಟುವಟಿಕೆಗಳಾದ್ದರಿಂದ ವಿಸ್ಮಯಪಡ

---

*ಇನ್ನೂ ಬಾಲಕರಿದ್ದಾಗಲೇ ಭಿಕ್ಷೆಗಾಗಿ ಹೋಗಿದ್ದ ಮನೆಯಲ್ಲಿ ಚಿನ್ನದ ನೆಲ್ಲಿಯಕಾಯಿ ಮಳೆಯನ್ನು ಸುರಿಸಿದುದು. ಇಂದಿಗೂ ಆ ಮನೆ ತನ ಕೇರಳದ ಕಾಲಟಿ ಕ್ಷೇತ್ರದ ಸಮೀಪದಲ್ಲಿದೆ. ಶ್ರೀಮಂತರಾಗಿಯೇ ಇರುವ ಆ ಮನೆಯವರಿಗೆ ಸ್ವರ್ಣತ್ತಿಲ್ಲಂ, ಎಂಬ ಹೆಸರು ಇಂದಿಗೂ ಇದೆ.

ಪೂರ್ಣಾನದಿಯ ಪಾತ್ರವನ್ನು ಬದಲಾಯಿಸಿದುದು.

ಗುರು ಶ್ರೀ ಗೋವಿಂದ ಭಗವತ್ಪಾದರು ಧ್ಯಾನದಲ್ಲಿ ಮೈ ಮರೆತಿದ್ದಾಗ, ಉಕ್ಕಿಹರಿಯುತ್ತಿದ್ದ ನರ್ಮದಾ ಪ್ರವಾಹವನ್ನು ಕಮಂಡಲುವಿನಲ್ಲಿ ತಡೆಗಟ್ಟಿದುದು.

ಗಂಗಾ ನದಿಯ ಮಡುವಿನಲ್ಲಿ ಮುಳುಗಿದ್ದ ಶ್ರೀ ವಿಷ್ಣು ಪ್ರತಿಮೆಯನ್ನು ಸ್ವತಃ ತಾವೇ ತೆಗೆದುಕೊಂಡು ಬಂದು ಬದರಿಯಲ್ಲಿ ಪ್ರತಿಷ್ಠೆ ಮಾಡಿದುದು.

ಇಂತಹ ಇನ್ನೂ ಅನೇಕ ಘಟನೆಗಳನ್ನು ಶಂಕರವಿಜಯಕಾರರು ಸ್ವಾರಸ್ಯವಾಗಿ ಬರೆದಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕಾದುದಿಲ್ಲ. ಶ್ರೀ ಶಂಕರರು ಧಾರ್ಮಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ನಡೆಸಿದಂತಹ ಮಹತ್ಕಾರ್ಯವು ಎಲ್ಲ ಪವಾಡಗಳಿಗಿಂತಲೂ ಶ್ರೇಷ್ಠತಮವಾದ ಪವಾಡ. ಜಗತ್ತನ್ನೇ ಬೆರಗುಗೊಳಿಸುವಂತಹ ಮಹತ್ಸಾಧನೆ, ಅದಿರಲಿ.

ಯಾವ ಶಂಕರ ವಿಜಯದಲ್ಲಿಯೂ ರೇಣುಕರ ಪ್ರಸ್ತಾಪವಾಗಲಿ, ಅವರು ಪರಸ್ಪರ ಸಂಧಿಸಿದ ಘಟನೆಯಾಗಲಿ, ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರೆಂದಾಗಲಿ ಇಲ್ಲ. ಹಾಗೆಯೇ ಶಂಕರರ ವಿಷಯ ಬರುವ ಯಾವ ಪುರಾಣಗಳಲ್ಲಿಯೂ ಈ ವಿಷಯದ ಪ್ರಸ್ತಾಪವಿಲ್ಲ, ಎನ್ನುವುದು ಪ್ರಕೃತದಲ್ಲಿ ನಮಗೆ ಮುಖ್ಯ.

೪. ಶ್ರೀ ಶಂಕರರ ಮತ್ತು ರೇಣುಕರ ಕಾಲ

ಕಾಲದ ದೃಷ್ಟಿಯಿಂದಲೂ ಶ್ರೀ ಶಂಕರಾಚಾರ್ಯರೂ ಶ್ರೀ ರೇಣುಕರೂ ಬೇರೆ ಬೇರೆ ಕಾಲದಲ್ಲಿದ್ದವರು. ಇಬ್ಬರಿಗೂ ಇರುವ ಅಂತರ ಹಲವಾರು ಶತಮಾನಗಳದ್ದು. ಶ್ರೀ ಶಂಕರಾಚಾರ್ಯರು ಶ್ರೀ ರೇಣುಕಾಚಾರ್ಯರಿಗಿಂತಲೂ ಬಹಳ ಹಿಂದೆ ಇದ್ದವರು.

ಶಂಕರರ ಕಾಲದ ವಿಚಾರವಾಗಿ ಸಂಪ್ರದಾಯಶೀಲರಾದ ಪಂಡಿತರಲ್ಲಿಯೂ, ಚಾರಿತ್ರಿಕ ಪ್ರಮಾಣಗಳನ್ನು ಮಾತ್ರ ಒಪ್ಪುವ ಇತಿಹಾಸಜ್ಞರಲ್ಲಿಯೂ ಒಮ್ಮತವಿಲ್ಲ, ತುಂಬಾ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿವೆ. ಶಂಕರರು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಲ್ಲಿಯೂ ಈ ವಿಷಯದಲ್ಲಿ ಒಮ್ಮತವಿಲ್ಲ. ದ್ವಾರಕಾ ಮಠದಲ್ಲಿ ಶ್ರೀ ಶಂಕರರ ಕಾಲವನ್ನು ಕ್ರಿಸ್ತ ಪೂರ್ವ ಐದನೆಯ ಶತಮಾನವೆಂದು (೫೦೯–೪೭೭) ಹೇಳುತ್ತಾರೆ. ಶೃಂಗೇರಿ ಮಠದಲ್ಲಿ ಶಂಕರರ ಕಾಲವನ್ನು (ಕ್ರಿ. ಪೂ. ೨೮ ರಿಂದ ೪ ಎಂದು ಭಾವಿಸಿರುತ್ತಾರೆ.) ಇದು ವಿಕ್ರಮಶಕೆ ೧೪ ರಿಂದ ೪೬ ರ ವರೆಗೆ ಆಗುತ್ತದೆ. ಈ ವಿಕ್ರಮಶಕೆ ಉಜ್ಜಯನಿ ವಿಕ್ರಮಾದಿತ್ಯನ ಶಕೆಯಲ್ಲವೆಂದೂ ಕನ್ನಡ ನಾಡಿನ ಚಾಲುಕ್ಯ ವಂಶದ ಮೊದಲನೆಯ ವಿಕ್ರಮನ ಶಕೆಯೆಂದೂ ಹಲವರು ವಿದ್ವಾಂಸರು ಊಹಿಸಿರುವರು. ಚಾಲುಕ್ಯ ವಿಕ್ರಮನು ಪಟ್ಟಕ್ಕೆ ಬಂದುದು ಕ್ರಿ. ಶ. ೬೭೦. ಆದ್ದರಿಂದ ಶ್ರೀ ಶಂಕರರ ಅವತಾರ ಕಾಲ ೬೮೪ ಮತ್ತು ಕೇದಾರನಾಥದಲ್ಲಿ ಅದೃಶ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾದುದು ೭೧೬. ಶ್ರೀ ಆರ್.ಜಿ. ಭಂಡಾರ್‌ಕರ್‌ರವರು ಕ್ರಿ. ಶ. ೪ ನೆಯ ಶತಮಾನವೆಂದೂ, ಶ್ರೀ ಕೆ.ಟಿ. ತೇಲಂಗ್‌ರವರು ೬ ನೆಯ ಶತಮಾನವೆಂದೂ, ಡಾ। ಎಸ್. ಶ್ರೀಕಂಠಶಾಸ್ತ್ರಿಗಳವರು ೭ನೆಯ ಶತಮಾನದ ಆದಿ ಭಾಗವೆಂದೂ ಡಾ। ಆರ್. ಸಿ. ಮುಜುಂದಾರ್, ಡಾ। ಕೆ. ಎ. ನೀಲಕಂಠ ಶಾಸ್ತ್ರಿ ಮುಂತಾದ ಬಹು ಜನ ಆಧುನಿಕ ವಿದ್ವಾಂಸರು ಎಂಟನೆಯ ಶತಮಾನದ ಉತ್ತರಾರ್ಧ ಒಂಬತ್ತರ ಪೂರ್ವಾರ್ಧವೆಂದೂ ಅಂಗೀಕರಿಸಿರುವರು. ೧೮

ಹೀಗೆ ಸಂಪ್ರದಾಯ ಶರಣರು ಶಂಕರರ ಕಾಲವನ್ನು ಕ್ರಿ. ಪೂ. ಆರನೆಯ ಶತಮಾನವೆಂದೋ, ಒಂದನೆಯ ಶತಮಾನವೆಂದೋ ಹೇಳಿದರೆ, ಆಧುನಿಕ ವಿದ್ವಾಂಸರು ಅವರ ಕಾಲವನ್ನು ಕ್ರಿಸ್ತಾನಂತರ ಎಂಟನೆಯ ಶತಮಾನದವರೆಗೂ ಎಳೆತರುತ್ತಾರೆ.

ಶ್ರೀ ರೇಣುಕಾಚಾರ್ಯರ ಕಾಲದ ವಿಚಾರವಾಗಿ ಇಷ್ಟೊಂದು ಭಿನ್ನಾಭಿಪ್ರಾಯವಿಲ್ಲ. ೧೯

---

೧೮. ಕ್ರಿ. ಶಕದ ಲೆಕ್ಕದಂತೆ ಇನ್ನೂ ಹಲವು ವಿದ್ವಾಂಸರ ಅಭಿಪ್ರಾಯಗಳು: ಆರ್. ಜಿ. ಭಂಡಾರ್‌ಕರ್ ೪೦೦, ಮೆಕೆನ್ ಜೀ ೫೦೦. ಎಸ್. ಶ್ರೀಕಂಠಶಾಸ್ತ್ರೀ ೬೨೦, ರಾಜೇಂದ್ರನಾಥ ಘೋಷ್ ೬೮೬, ಬಲದೇವ ಉಪಾಧ್ಯಾಯ ೬೮೪, ತೇಲಂಗ್, ಬಾಲ ಗಂಗಾಧರ್ ತಿಲಕ್ ೬೮೮, ಮ್ಯಾಕ್ಸ ಮುಲ್ಲರ್ ಮತ್ತು ಪಾಠಕ್ ೭೮೮, ವಿಲ್ಸನ್ ಮತ್ತು ಕೆಲನ್‌ಬ್ರೂಕ್ ೮೦೦-೯೦೦, ಹಾನ್ಸನ್ ೮೦೦, ಟೇಲರ್ ೯೦೦ ಕೆ. ಆರ್. ವೆಂಟಕರಾಮನ್, ಕೆ. ಎ. ನೀಲಕಂಠಶಾಸ್ತ್ರೀ ಮತ್ತು ಆರ್. ಸಿ. ಮುಜುಂದಾರ್ ೭೮೮-೮೨೦.

೧೯. ರೇವಣರು ಗುಪ್ತವಾಗಿ ೭೦೦ ವರ್ಷಗಳೂ, ಪ್ರಕಟವಾಗಿ ೭೦೦ ವರ್ಷಗಳೂ ಇದ್ದರೆಂದು ಹರಿಹರನು ಹೇಳುತ್ತಾನೆ. ಅದು ಕವಿ ಸಮಯವೆಂದು ಹೇಳಬಹುದೇ ವಿನಾ ವಾಸ್ತವಿಕ ಸಂಗತಿಯೆಂದು ನಂಬಲಾಗದು. ಕವಿಗಳ, ಭಾವುಕರ ಕಲ್ಪನೆ ಇತಿಹಾಸದ ಒರೆಗಲ್ಲಿಗೆ ಸಿಕ್ಕದು.

Sri Vidyabharathi Book Centre, Sringeri

CC-O. In Public Domain. Digitized by eGangotri

ರೇಣುಕರ ಕಾಲ ಸುಮಾರು ೧೧೮೭ ಇರಬಹುದೆಂದು ಡಾ|| ಶಿ. ಚೆ. ನಂದೀಮಠರವರು ಸಿರಿವಾಳ ಶಾಸನದ ಆಧಾರದಮೇಲೆ ಹೇಳುತ್ತಾರೆ ೨೦ ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯನವರೂ ೧೧೮೭ ಎಂದೇ ಅಭಿಪ್ರಾಯ ಪಡುತ್ತಾರೆ. ೨೧ ಕರ್ಲಮಂಗಲಂ ಅವರು ರೇವಣಸಿದ್ಧ ಅಥವಾ ರೇಣುಕಾಚಾರ್ಯರನ್ನು ಬಸವಣ್ಣನವರ ಸಮಕಾಲೀನರೆಂದೇ ಹೇಳುತ್ತಾರೆ. ಮತ್ತು ಬಸವಣ್ಣನವರೂ ಅವರ ತಂದೆಯವರೂ ಆ ಸಮಯದಲ್ಲಿಯೇ ಲಿಂಗಧಾರಿಗಳಾದರೆಂದೂ ಹೇಳುತ್ತಾರೆ. ಆದರೆ ಅಲ್ಲಮಪ್ರಭುದೇವ, ಬಸವಣ್ಣ, ಅಕ್ಕಮಹಾದೇವಿ ಇವರ ಸಮಕಾಲೀನರಾದ ಸಿದ್ಧರಾಮರು ರೇವಣರ ಅನುಗ್ರಹದಿಂದ ಹುಟ್ಟಿದರೆಂದು ಹರಿಹರಕವಿ ಬರೆದಿರುವುದರಿಂದ ರೇಣುಕರು ಬಸವಾದಿಗಳಿಗಿಂತ ಒಂದು ತಲೆಮಾರು ಹಿಂದಿನವರಾಗಬೇಕು.

ಶ್ರೀ ಕಪಟರಾಳ ಕೃಷ್ಣರಾಯರು ರೇವಣ ಸಿದ್ಧರ ಕಾಲವನ್ನು ಕೂಲಂಕಷವಾಗಿ ಚರ್ಚಿಸಿ ರೇವಣ ಸಿದ್ಧೇಶ್ವರರಗಳೆ ಮತ್ತು ಸಿದ್ಧಾಂತ ಶಿಖಾಮಣಿಗಳ ಆಧಾರದ ಮೇಲೆ—ಅದು ೧೦೪೦ ರಿಂದ ೧೦೫೦ ರವರೆಗೆ ಎಂದು ಗೊತ್ತುಪಡಿಸಿದ್ದಾರೆ. ೨೨

---

೨೦. ಶಿವಾನುಭವ ಪತ್ರಿಕೆ ಸಂಪುಟ ೪. ಸಂಚಿಕೆ. ೭

೨೧. ವೀರಶೈವಮತಾಚಾರ್ಯರ ಕಾಲ ನಿರ್ಣಯ.

೨೨. ಶ್ರೀ ಶಿ. ಚೆ. ನಂದೀಮಠ ಅವರು ಶಿವಾನುಭವ ಪತ್ರಿಕೆಯ ನಾಲ್ಕನೆಯ ಸಂಪುಟದ ೨ನೆಯ ಸಂಚಿಕೆಯಲ್ಲಿ ಕೊಟ್ಟಿರುವ ಸಿರಿವಾಳ ಶಾಸನದಲ್ಲಿ ಉಕ್ತವಾದ ರೇವಣನೂ (ಕ್ರಿ. ಶ. ೧೧೮೭) ಪಂಚಾಚಾರ್ಯರಲ್ಲೊಬ್ಬರಾದ ರೇವಣರೂ ಸುಮಾರು ೧೦೦ ವರ್ಷಗಳ ಅಂತರದಲ್ಲಿದ್ದವರೆಂದೂ ಅವರು ಬೇರೆ ಬೇರೆಯೆಂದೂ ಕಪಟರಾಳ ಕೃಷ್ಣರಾಯರ ಅಭಿಪ್ರಾಯ (ಕ. ಸಾ. ಪ. ಪ. ಸಂ. ೨೯ ಸಂಚಿಕೆ ೧–೨), ಕ್ರಿ. ಶ. ೧೧೯೧ ರ ಚೌಡದಾನಪುರದ ಶಾಸನದಲ್ಲಿಯೂ ಈ ಸಿದ್ಧ ರೇವಣರ ಬಗೆಗೆ ಹೇಳಲ್ಪಟ್ಟಿದೆ. ಈ ಶಾಸನವನ್ನೂ ಶ್ರೀ ಶಿ. ಚೆ. ನಂದೀಮಠರವರು ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಕಾರಿಪುರದ ಶಾಸನದಲ್ಲಿ ಉಕ್ತವಾಗಿರುವಂತೆ ರೇವಣಸಿದ್ಧರ ಮಗ ರುದ್ರಮುನಿಯ ಕಾಲವು ೧೧೧೭ ಆದಲ್ಲಿ ೨೩ ಅವರ ತಂದೆಯಾದ ರೇವಣ ಸಿದ್ಧರ ಕಾಲವು ಸುಮಾರು ಇಪ್ಪತ್ತೈದರಿಂದ ಮೂವತ್ತು ವರ್ಷಗಳಷ್ಟು ಹಿಂದಿರಬಹುದೆಂದೂ ಊಹಿಸಿದಲ್ಲಿ ಕಪಟರಾಳ ಕೃಷ್ಣರಾಯರು ಗೊತ್ತು ಪಡಿಸಿರುವ ಕಾಲವು (೧೦೪೦-೧೦೫೦) ಸರಿಯಿರಬಹುದೆಂದು ಅಂಗೀ ಕರಿಸಬೇಕಾಗುತ್ತದೆ. ಈ ಮೂವರು ವಿದ್ವಾಂಸರ ವಿಚಾರಗಳನ್ನೂ ಗಮನಿಸಿದರೆ ರೇವಣರ ಕಾಲವು ೧೦೪೦ ರಿಂದ ೧೧೮೮ ರ ಒಳಗೆ ಇರ ಬೇಕೆಂದೂ ರೇವಣ ಸಿದ್ಧರು ೨೪ ಆಗಿ ಹೋದ ಒಂದೂ-ಒಂದೂವರೆ ಶತ ಮಾನದ ನಂತರ ಬಂದ ಹರಿಹರ ಕವಿಯ ಕಾವ್ಯದಲ್ಲಿ (ರೇವಣ ಸಿದ್ಧೇಶ್ವರ ರಗಳೆಯಲ್ಲಿ) ಆಗ ಜನಜನಿತವಾಗಿದ್ದ ರೇವಣಸಿದ್ಧರ ಬಗ್ಗೆ ಪ್ರಚಾರದ ಲ್ಲಿದ್ದ ಕತೆಗಳೆಲ್ಲವೂ ಕಲ್ಪನೆಯ ಮೂಸೆಯಲ್ಲಿ ಮೂಡಿಬಂದಿರಬಹುದೆಂದೂ ಹೇಳಬಹುದು.

ಈ ಮೇಲಿನ ವಿವರಗಳಿಂದ ಶಂಕರಾಚಾರ್ಯರ ಕಾಲವನ್ನು ಕ್ರಿ.ಪೂ. ೫೦೯ ರಿಂದ ಕ್ರಿ.ಶ. ೮೦೦ ರವರೆಗೂ ರೇವಣಸಿದ್ಧರ ಕಾಲವನ್ನು ೧೦೪೦ ರಿಂದ ೧೦೯೦ ರವರೆಗೂ ಹೇಳಬಹುದಾದ್ದರಿಂದ ಇವರಿಬ್ಬರೂ ಸಮಕಾಲೀನರಲ್ಲನೆಂಬುದು ಸ್ಪಷ್ಟಪಡುತ್ತದೆ. ಕ್ರಿ. ಶ. ೮ ನೆಯ ಶತ ಮಾನದಲ್ಲಿದ್ದ ಶಂಕರಾಚಾರ್ಯರಿಗೆ, ಅವರನಂತರ ಮುನ್ನೂರು ವರ್ಷಗಳ ಮೇಲೆ ಬಂದ ರೇವಣ ಸಿದ್ಧರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರೆ ರೆನ್ನುವುದು ಹೇಗೆ ಸಮಂಜಸವಾಗುತ್ತದೆ ? ಅದು ಅಸಂಭವ.

---

೨೩ ಶಿಕಾರಿಪುರದ ಶಾಸನ, Ec, VII sk. 316

೨೪ ಡಾ|| ಚಿದಾನಂದ ಮೂರ್ತಿಯವರು ರೇವಣರ ಕಾಲವನ್ನು 1060 ರಿಂದ 1190 ರ ವೇಳೆಗೆ ಎಂದು ನಿರ್ಧರಿಸಿದ್ದಾರೆ. ಪ್ರಜಾವಾಣಿ 9-1-72 (ಶಾಸನಗಳಲ್ಲಿ ಶಿವಶರಣರು ಸಂಪಾದಕರಿಗೆ ಬರೆದ ಪತ್ರ),

ಡಾ|| ಎಸ್. ಶ್ರೀಕಂಠಶಾಸ್ತ್ರಿಗಳವರು ಪಂಚಾಚಾರ್ಯರುಗಳು ರಾಜೇಂದ್ರ ಚೋಳ, ಆರನೆಯ ವಿಕ್ರಮಾದಿತ್ಯ, ಬಿಜ್ಜಳ, ಗೋರಕ್ಷ ನಾಥ ಇವರ ಸಮಕಾಲೀನರೆಂದೂ, ೧೧-೧೨ ನೆಯ ಶತಮಾನದಲ್ಲಿದ್ದ ರೆಂದೂ ಬರೆದಿದ್ದಾರೆ. ಭಾರತೀಯ ಸಂಸ್ಕೃತಿ—೧೫೯

Sri Vidyabharathi Book Centre, Sringeri

CC-O. In Public Domain. Digitized by eGangotri

೫. ಶ್ರೀ ಶಂಕರರ ಶೈವ ಮತ

ಶ್ರೀ ಶಂಕರರ ವಿಷಯಕವಾದ ಪ್ರಾಚೀನ ಕಾವ್ಯಗಳಲ್ಲೇ ಆಗಲಿ, ರೇಣುಕ ವಿಷಯಕವಾದ ಪ್ರಾಚೀನ ಕಾವ್ಯಗಳಲ್ಲೇ ಆಗಲಿ ರೇಣುಕದತ್ತ-ವಾದ ಚಂದ್ರಮೌಳೀಶ್ವರ ಲಿಂಗದ ವಿಷಯ ಇಲ್ಲವೆಂದಾಯಿತು. ರೇಣುಕರು ಶಂಕರರ ಸಮಕಾಲೀನರಲ್ಲವೆಂದೂ ಅನಂತರದವರೆಂದೂ ತಿಳಿದೆವು. ಇನ್ನು ಮುಂದೆ ಶಂಕರರು ಶೈವಮತವನ್ನು ಒಪ್ಪಿ ತಮ್ಮ ಕೃತಿಗಳಲ್ಲಿ ಎಲ್ಲಾದರೂ ಪ್ರಸ್ತಾಪ ಮಾಡಿದ್ದಾರೆಯೇ ಎಂದು ನೋಡೋಣ.

ಶ್ರೀ ಶಂಕರರು ದಶೋಪನಿಷತ್ತುಗಳು. ಬ್ರಹ್ಮಸೂತ್ರ ಮತ್ತು ಭಗವದ್ಗೀತಾ ಭಾಷ್ಯಗಳನ್ನೂ ಅನೇಕ ಪ್ರಕರಣ ಗ್ರಂಥಗಳನ್ನೂ, ಹಲವಾರು ಸ್ತೋತ್ರಗಳನ್ನೂ ರಚಿಸಿರುತ್ತಾರೆಯಷ್ಟೆ. ಶ್ರೀ ಶಂಕರರ ಕೃತಿಗಳು ವಿದ್ವಜ್ಜನರ ಮತ್ತು ಸಾಮಾನ್ಯ ಜನರ ಗೌರವಾದಾರಗಳಿಗೆ ಪಾತ್ರವಾಗಿ ಇರುವುದರಿಂದ, ಅವರ ಹೆಸರಿನಲ್ಲಿಯೇ ಇತರರೂ ತಮ್ಮ ತಮ್ಮ ಕೃತಿಗಳನ್ನು 'ಶಂಕರ ವಿರಚಿತ' ವೆಂದು ಹೇಳಿ ಪ್ರಸಾರ ಮಾಡಿಬಿಟ್ಟಿರುತ್ತಾರೆ. ಆದ್ದರಿಂದ ನಾವು ಶ್ರೀ ಶಂಕರರ ಕೃತಿಗಳೆಂದು ಸರ್ವವಿದ್ವಜ್ಜನ ಮಾನ್ಯವಾಗಿರುವುದನ್ನೇ ಇಲ್ಲಿ ಆಧಾರವಾಗಿ ಪರಿಗಣಿಸಬೇಕಾಗುತ್ತದೆ.

ಶ್ರೀ ಶಂಕರರ ಕಾಲದಲ್ಲಿ ನಮ್ಮ ದೇಶದಲ್ಲಿ ಪ್ರಸಿದ್ಧವಾಗಿದ್ದ ಮತಗಳು ಜೈನ, ಬೌದ್ಧ ಮತ್ತು ಚಾರ್ವಾಕ ಮತಗಳು. ಇವು ಮೂರೂ ಅವೈದಿಕ ಮತಗಳೆಂದು ಪರಿಗಣಿತವಾಗಿದ್ದವು. ವೈದಿಕ ಮತಗಳೇ ಆದ ಪೂರ್ವ ಮೀಮಾಂಸಾ ಮತ, ಸಾಂಖ್ಯ, ಯೋಗ, ವೈಶೇಷಿಕ, ನ್ಯಾಯ ಮತಗಳೂ (ದರ್ಶನಗಳೂ), ಈಶ್ವರಪರವಾದ ಪಾಶುಪತ, ಪಾಂಚರಾತ್ರ, ಮತ್ತು ಶಾಕ್ತಮತವೂ (ಇವು ತಾಂತ್ರಿಕ ಪೌರಾಣಿಕ ಮತಗಳು) ಭರತ ಖಂಡದಲ್ಲಿ ಪ್ರಚಲಿತವಾಗಿದ್ದವು. ಆಚಾರ್ಯರು ಈ ಎಲ್ಲ ಮತಗಳನ್ನೂ ತಮ್ಮ ದಿಗ್ವಿಜಯ ಕಾಲದಲ್ಲಿ ಎದುರಿಸ ಬೇಕಾಯಿತು. ಖಂಡಿಸಬೇಕಾಯಿತು. ದಾರ್ಶನಿಕಮತಗಳನ್ನೂ ತಾಂತ್ರಿಕ ಪೌರಾಣಿಕ ಮತಗಳನ್ನೂ ಪರಾಮರ್ಶಿಸಿ ಅವುಗಳಲ್ಲಿದ್ದ [illegible] ದ್ದ ಅವು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳನ್ನೆಲ್ಲಾ ವೈದಿಕ ಧರ್ಮದ ಆಯಕಟ್ಟಿನೊಳಕ್ಕೆ ಪುನಃ ಕರ ಬೇಕಾಯಿತು.†

ಶ್ರೀ ಶಂಕರರು ವೈದಿಕ ಮತವನ್ನು ಶುದ್ಧಗೊಳಿಸಿ, ಅದರಲ್ಲಿ ಸೇರಿದ್ದ ಅನಾಚಾರಗಳನ್ನು ಸಮರ್ಥ ಶಸ್ತ್ರಚಿಕಿತ್ಸಕನಂತೆ ತೆಗೆದು ಹಾಕಿದರು. ಈ ಮಹತ್ಕಾರ್ಯದಲ್ಲಿ ವೈದಿಕಧರ್ಮಕ್ಕಿದ್ದ ಹೊರಗಿನ ಅಪಾಯಗಳನ್ನು ಅವರು ಗುರುತಿಸಿದ್ದರು. ಹೊರಗಿನ ಅಪಾಯದಿಂದ ಧರ್ಮವನ್ನೂ ಜನರನ್ನೂ ರಕ್ಷಿಸಲು ಭಾವೈಕ್ಯತೆಯನ್ನು ಮೂಡಿಸಿ, ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಮಠಗಳನ್ನು ಸ್ಥಾಪಿಸಿದ್ದರು. ಈ ವಿಧದಿಂದ ಅವರು ಆ ಅಪಾಯಗಳನ್ನೂ ನಿವಾರಿಸಿದ್ದರು. ವೈದಿಕ ಧರ್ಮದ ವಿವಿಧ ಮತಗಳಲ್ಲಿ ಹೊಕ್ಕಿದ್ದ ದೋಷಗಳನ್ನು ಆಚಾರ್ಯರು ಸ್ವತಃ ಕಂಡವರಾಗಿದ್ದರಿಂದ ಬ್ರಹ್ಮಸೂತ್ರಕ್ಕೆ ಭಾಷ್ಯದ ತರ್ಕಪಾದದಲ್ಲಿ ಈ ಎಲ್ಲ ಮತಗಳನ್ನೂ ಸ್ಪಷ್ಟವಾಗಿ ವಿಮರ್ಶೆಮಾಡಿ, ನಿರಾಕರಿಸಿ ವೇದಾಂತಮತವನ್ನೇ, ಅದ್ವೈತವನ್ನೇ 'ಸತ್ಯ' ಎಂದು ಘೋಷಿಸಿದ್ದರು.

ಶ್ರೀ ಶಂಕರಾಚಾರ್ಯರು ತಮ್ಮ ದಿಗ್ವಿಜಯ ಕಾಲದಲ್ಲಿ ಶೈವರ ಮಹಾವ್ರತಗಳನ್ನೂ, ವೈಷ್ಣವರ ತಪ್ತ ಮುದ್ರಾಧಾರಣೆಯನ್ನೂ, ಸೌರ ಮತೀಯರ ಮತ್ತು ಗಾಣಾಪತ್ಯರ ರಕ್ತ ಗಂಧಾನುಲೇಪವನ್ನೂ ಶಾಕ್ತರ ವಾಮಾಚಾರವನ್ನೂ ಕಾಪಾಲಿಕರ ಮದ್ಯ ಮಾಂಸಯುಕ್ತವಾದ ತಾಮಸ ಪೂಜೆಗಳನ್ನೂ ಖಂಡಿಸಿದರೆಂದು ಅನೇಕ ಶಂಕರ ವಿಜಯಗಳು ಸಾರುತ್ತವೆ.

ಶ್ರೀ ಶಂಕರರು ಸೂತ್ರ ಭಾಷ್ಯದ ಅವಿರೋಧಾಧ್ಯಾಯದ, ಎರಡನೆಯ ತರ್ಕಪಾದದಲ್ಲಿ (೨-೨-೩೭) ಪಾಶುಪತ್ಯಾಧಿಕರಣದಲ್ಲಿ ೩೭ ನೆಯ ಸೂತ್ರಕ್ಕೆ ೨೪ ವ್ಯಾಖ್ಯಾನ ಮಾಡುತ್ತಾ ಹೀಗೆ ಹೇಳಿರುವರು : ವೇದ

---

† ಆಚಾರ್ಯರು ಬ್ರಹ್ಮಸೂತ್ರಭಾಷ್ಯದ ಅವಿರೋಧಾಧ್ಯಾಯದ ಸ್ಮೃತಿ ಪಾದದಲ್ಲಿ ಸಾಂಖ್ಯಯೋಗ ಮತಗಳನ್ನೂ, ತರ್ಕ ಪಾದದಲ್ಲಿ ಸಾಂಖ್ಯ ವೈಶೇಷಿಕ, ಜೈನ, ಸರ್ವಾಸ್ತಿವಾದ, ವಿಜ್ಞಾನವಾದ (ಬೌದ್ಧ) ಪಾಶುಪತ ಮತ್ತು ಪಾಂಚರಾತ್ರ ಮತಗಳನ್ನೂ ಖಂಡನೆ ಮಾಡಿದ್ದಾರೆ.

೨೪. "ಪತ್ಯುರಸಮಂಜಸ್ಯಾತ್"—ಇದು ಸೂತ್ರ

ಸೂತ್ರಭಾಷ್ಯ (೨-೨-೩೭)

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಹ್ಯವಾದ ಈಶ್ವರ ಕಲ್ಪನೆಯು ನಾನಾ ವಿಧವಾಗಿರುತ್ತವೆ. ಕಾರ್ಯ, ಕಾರಣ, ಯೋಗ, ವಿಧಿ, ದುಃಖಾಂತ ಎಂಬ ಪಂಚಪದಾರ್ಥಗಳನ್ನು ಪಶುಪತಿಯಾದ ಈಶ್ವರನು ಪಶುವಿನ ಪಾಶ ವಿಮೋಕ್ಷಕ್ಕಾಗಿ ಉಪದೇಶಿಸಿರುತ್ತಾನೆ. ಮತ್ತು ಅವನು ನಿಮಿತ್ತಕಾರಣನು ಎಂದು ಮಾಹೇಶ್ವರರು ೨೫ ಹೇಳುತ್ತಾರೆ.

---

೨೫ ಮಾಹೇಶ್ವರರು ನಾಲ್ಕು ಬಗೆ. ಶೈವರು, ಪಾಶುಪತರು, ಕಾರಣಿಕ ಸಿದ್ಧಾಂತಿಗಳು ಮತ್ತು ಕಾಪಾಲಿಕರು. ಇವರೆಲ್ಲರೂ ಮಾಹೇಶ್ವರ ಪ್ರೋಕ್ತವಾದ ಆಗಮವನ್ನು ಅನುಸರಿಸುವುದರಿಂದ ಮಾಹೇಶ್ವರರೆಂದು ಕರೆಯಲ್ಪಡುತ್ತಾರೆ.

ಶೈವ ಮತದಲ್ಲಿ, ಪ್ರತ್ಯಭಿಜ್ಞಾ ಅಥವಾ ಕಾಶ್ಮೀರ ಶೈವಮತ ಶುದ್ಧ ಶೈವಮತ, ಲಾಕುಳ, ಪಾಶುಪತ, ಕಾಳಾಮುಖ, ಶೈವವಿಶಿಷ್ಟಾದ್ವೈತ, ಶೈವ ವಿಶೇಷಾದ್ವೈತ ಮುಂತಾದ ಪ್ರಭೇದಗಳಿದ್ದು, ಶಂಕರಾಚಾರ್ಯರ ಕಾಲದಲ್ಲಿ ಪಾಶುಪತಮತವೊಂದು ಮಾತ್ರವೇ ಅಸ್ತಿತ್ವದಲ್ಲಿತ್ತು. ಉಳಿದ ಪ್ರಭೇದಗಳು ಇನ್ನೂ ಸ್ಪಷ್ಟವಾದ ರೂಪು ಪಡೆದಿರಲಿಲ್ಲ.

ಇವರಲ್ಲಿ ಕಾಶ್ಮೀರ ಶೈವಮತದವರು ಅದ್ವೈತಿಗಳು. ಶುದ್ಧ ಶೈವರು (ದ್ರಾವಿಡ ದೇಶದಲ್ಲಿ ಇದು ಪ್ರಸಿದ್ಧವಾಗಿತ್ತು) ದ್ವೈತಿಗಳು, ಲಾಕುಳ ಕಾಳಾಮುಖರು ವಿಶಿಷ್ಟಾದ್ವೈತಿಗಳು.

ಪಂಚಾಚಾರ್ಯರು ವಿಶೇಷಾದ್ವೈತಿಗಳು.

" ಸಾಚ ಇಯಂ ವೇದ ಬಾಹ್ಯೇಶ್ವರ ಕಲ್ಪನಾ ಅನೇಕ ಪ್ರಕಾರಾ ಕೇಚಿತ್ ತಾವತ್ ಸಾಂಖ್ಯಯೋಗ ವ್ಯಪಾಶ್ರಯಾಃ ಕಲ್ಪಯನ್ತಿ ಪ್ರಧಾನ ಪುರುಷಯೋಃ ಅಧಿಷ್ಟಾತಾ ಕೇವಲಂ ನಿಮಿತ್ತ ಕಾರಣಂ ಈಶ್ವರಃ ಇತರೇತರಂವಿಲಕ್ಷಣಃ ಪ್ರಧಾನ ಪುರುಷೇಶ್ವರಾಃ ಇತಿ॥ ಮಾಹೇಶ್ವರಾಸ್ತು ಮನ್ಯತೆ ಕಾರ್ಯ, ಕಾರಣ, ಯೋಗ, ವಿಧಿ, ದುಖಾನ್ತಾಃ ಪಂಚಪದಾರ್ಥಾಃ ಪಶುಪತಿನಾ ಈಶ್ವರೇಣ ಪಶುಪಾಶ ವಿಮೋಕ್ಷಣಾಯ ಉಪದಿಷ್ಟಾಃ ಪಶುಪತಿಃ ಈಶ್ವರಃ ನಿಮಿತ್ತ ಕಾರಣಂ ಇತಿ ವರ್ಣಯಂತಿ।

(ಸೂ. ಭಾ. ಅದೇ)

"ಅತಃ ಉತ್ತರಂ ಉಚ್ಯತೇ। ಪತ್ಯುರ ಸಮಂಜಸ್ಯಾತ್ ಇತಿ, ಪಶುಃ ಈಶ್ವರಸ್ಯ ಪ್ರಧಾನ ಪುರುಷಯೋಃ ಅಧಿಷ್ಟಾತೃತ್ವೇನ ಜಗತ್ ಕಾರಣಂ ನೋಪ ಪದ್ಯತೇ ಕಸ್ಮಾತ್? ಇತ್ಯಾದಿ

Sri Vidyabharathi Book Centre, Sringeri

 CC-O. In Public Domain. Digitized by eGangotri

"ಈ ಮತವು ಅಸಮಂಜಸವಾಗಿರುವುದರಿಂದ ಸೂತ್ರಕಾರರು ಇದನ್ನು ನಿರಾಕರಿಸುತ್ತಾರೆ.

"ಪ್ರತ್ಯುರ ಸಮಂಜಸ್ಯಾತ್." ಪತಿಯು ಪ್ರಧಾನ ಪುರುಷರಿಗೆ ಅಧಿಷ್ಠಾತೃವಾಗಿ ಜಗತ್ಕಾರಣನು ಎಂಬುದು ಹೊಂದುವುದಿಲ್ಲ. ಏಕೆಂದರೆ ಅದು ಅಸಮಂಜಸವಾಗುತ್ತದೆ. ಇದರಲ್ಲಿ ಅಸಾಮಂಜಸ್ಯವಾವುದೆಂದರೆ, ಹೀನ ಮಧ್ಯಮ ಉತ್ತಮ ಎಂದು. ಪ್ರಾಣಿ ವಿಶೇಷಗಳನ್ನು ಸೃಷ್ಟಿಸಿರುವ ಈಶ್ವರನಿಗೆ ರಾಗದ್ವೇಷಾದಿ ದೋಷವು ಪ್ರಸಕ್ತವಾಗುವುದು. ಆದ್ದರಿಂದ ಆತನಿಗೂ ನಮ್ಮಂತೆಯೇ ಅನೀಶ್ವರತ್ವವು ಪ್ರಸಕ್ತವಾಗುವುದು. ಜೀವರ ಕರ್ಮ ಮತ್ತು ಈಶ್ವರ ಇವರುಗಳಿಗೆ ಪ್ರವರ್ತ್ಯ ಪ್ರವರ್ತನ ಭಾವವಿದ್ದರೆ ಅನ್ಯೋನ್ಯಾಶ್ರಯವೆಂಬ ದೋಷವು ಪ್ರಾಪ್ತವಾಗುತ್ತದೆ. ಈ ಪ್ರವರ್ತ್ಯ ಪ್ರವರ್ತನ ಭಾವಗಳು ಅನಾದಿಯಾದುದೆಂದರೆ, ಆಗಲೂ ಈಗಿನಂತೆಯೇ ಹಿಂದೆಯೂ ಸಹ ಅನ್ಯೋನ್ಯಾಶ್ರಯವು ಸಮಾನವಾಗಿರುವುದರಿಂದ ಅಂಧ ಪರಂಪರಾನ್ಯಾಯವು ಬಂದೊದಗುವುದು.

"ಯಾರೊಬ್ಬರೂ ಯಾವದೋಷದ ಪ್ರೇರಣೆಯೂ ಇಲ್ಲದೆ ಸ್ವಾರ್ಥ ಕ್ಕಾಗಲೀ, ಪರಾರ್ಥಕ್ಕಾಗಲೀ ಪ್ರವರ್ತಿಸುವುದಿಲ್ಲ. ಪ್ರತಿಯೊಬ್ಬನೂ ಸ್ವಾರ್ಥಪ್ರೇರಿತನಾಗಿಯೇ ಅಲ್ಲವೇ ಪರಾರ್ಥಕ್ಕಾಗಿ ಪ್ರವರ್ತಿಸುವುದು ? ಈ ದೃಷ್ಟಿಯಿಂದಲೂ ಈ ಮತದಲ್ಲಿ ಅಸಾಮಂಜಸ್ಯವಿದೆ. ಏಕೆಂದರೆ ಸ್ವಾರ್ಥವುಳ್ಳವನಾದ್ದರಿಂದ ಈಶ್ವರನು ಈಶ್ವರನಲ್ಲದೇ ಹೋಗುತ್ತಾನೆ. ಈಶ್ವರನು ಪುರುಷ ವಿಶೇಷನೇ ಎಂದು ಅಂಗೀಕರಿಸುವುದರಿಂದಲೂ ಪುರುಷನು ಉದಾಸೀನನೆಂದು ಒಪ್ಪಿರುವುದರಿಂದಲೂ ಅಸಾಮಂಜಸ್ಯವೇ ಉಂಟಾಗುವುದು." ಇದು ಸಂಗ್ರಹವಾಗಿ ಶಂಕರ ಭಾಷ್ಯ

ಹೀಗೆ ಮಾಹೇಶ್ವರ ಮತವನ್ನು (ಶೈವದ ಮತ) ವೇದ ಬಾಹ್ಯ ವಾದ ಈಶ್ವರ ಕಲ್ಪನೆಯ ಮತವೆಂದು ಖಂಡಿಸಿರುವ ಶಂಕರಾಚಾರ್ಯರಿಗೆ, ಶೈವಮತದ ಮುಖ್ಯ ಆಚಾರ್ಯರಾದ ಶ್ರೀರೇಣುಕರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರೆನ್ನುವುದು ತೀರಾ ಆಭಾಸವಾಗುತ್ತದೆ. ಹಾಗೆಯೇ ಇಷ್ಟಲಿಂಗಧಾರಣೆಯನ್ನು [illegible] ಪೂಜೆಗಾಗಿ ಇಟ್ಟುಕೊಳ್ಳಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಲಿಂಗವೊಂದನ್ನು ಕೊಟ್ಟರೆನ್ನುವುದೂ ವೀರಶೈವಮತದ ಸಂಪ್ರದಾಯಕ್ಕೆ ವಿರೋಧವಾದ ವರ್ತನೆಯಾಗುತ್ತದೆ. ೨೬ ಸಂಪ್ರದಾಯ ಪ್ರವರ್ತಕರೇ ಅದನ್ನು ಉಲ್ಲಂಘಿಸುತ್ತಾರೆಯೇ ?

೬. ಶ್ರೀ ಶಂಕರರು ರೇವಣರನ್ನು ಸ್ಮರಿಸಿಲ್ಲ

ಶ್ರೀ ಶಂಕರಾಚಾರ್ಯರು ತಮ್ಮ ಅಪಾರವಾದ ಗ್ರಂಥರಾಶಿಯಲ್ಲಿ ರೇಣುಕರ ಹೆಸರನ್ನು ಎಲ್ಲಿಯಾದರೂ ಹೇಳಿದ್ದಾರೆಯೋ ಎಂದು ಹುಡುಕಿ ನೋಡಿದಲ್ಲಿ ಆ ಪ್ರಯತ್ನ ನಿಷ್ಪ್ರಯೋಜಕವಾಗುತ್ತದೆ.

ಶಂಕರರು ತಮ್ಮ ಪೂರ್ವಾಚಾರ್ಯರನ್ನೂ 'ಅದ್ವೈತ ತತ್ತ್ವ' ಶ್ರದ್ಧೆಯುಳ್ಳ ಹಿರಿಯರನ್ನೂ ಅತ್ಯಂತ ಗೌರವಪೂರ್ವಕವಾಗಿ ಸ್ಮರಿಸುತ್ತಾರೆ. ಶ್ರೀ ದ್ರವಿಡಾಚಾರ್ಯರನ್ನು 'ಆಗಮವಿದ'ರೆಂದು ಸಂಬೋಧಿಸಿರುತ್ತಾರೆ. ೨೭ ಶ್ರೀ ಉಪವರ್ಷಾಚಾರ್ಯರನ್ನು 'ಭಗವಾನ್ ಉಪವರ್ಷಃ' ಎಂದು ಸಂಬೋಧಿಸಿರುತ್ತಾರೆ. ಕಾಶಕೃತ್ಸ್ನರನ್ನು ಗೌರವಪೂರ್ವಕವಾಗಿ ಸ್ಮರಿಸಿದ್ದಾರೆ. ೨೮ ಹಾಗೆಯೇ ಅದ್ವೈತ ವೇದಾಂತಕ್ಕೆ ಅಡಿಗಲ್ಲೆಂದೆನಿಸಿದ ಮಾಂಡೂಕ್ಯ ಕಾರಿಕೆಯನ್ನು ರಚಿಸಿದ ತಮ್ಮ ಪರಮ ಗುರುಗಳಾದ ಶ್ರೀ ಗೌಡಪಾದಾಚಾರ್ಯರನ್ನು ನೇರವಾಗಿ ಸ್ಮರಿಸದಿದ್ದರೂ 'ಸಂಪ್ರದಾಯವಿದ' ರೆಂದು ಸ್ಮರಿಸಿರುತ್ತಾರೆ. ೨೯ ತಮ್ಮ ಸಾಕ್ಷಾತ್ ಗುರುಗಳಾದ

---

೨೬ ಈ ಪಂಚಾಚಾರ್ಯರು ಯಾರೂ ವೀರಶೈವ ಧರ್ಮಪ್ರವರ್ತಕರಲ್ಲವೆಂದೂ ಶ್ರೀ ಬಸವಣ್ಣನವರೇ ವೀರಶೈವ ಧರ್ಮಸ್ಥಾಪಕರೆಂದೂ ಶ್ರೀ ಕುಮಾರ ಸ್ವಾಮೀಜೀ ಅಭಿಪ್ರಾಯ ಪಡುತ್ತಾರೆ.

ತತ್ತ್ವಶಾಸ್ತ್ರ ಪ್ರಾಚ್ಯ ಮತ್ತು ಪಾಶ್ಚಾತ್ಯ
ಪುಟ ೪೨೫

೨೭ ಮಾಂಡೂಕ್ಯೋಪನಿಷತ್ ಭಾಷ್ಯ (೨-೨೨ ಮತ್ತು ೨-೩೨)

೨೮ ಸೂತ್ರ ಭಾಷ್ಯ (೧-೩-೩೮) ೨೮ (a) (೧-೧-೨೨)

೨೯ ಸೂತ್ರ ಭಾಷ್ಯ (೧-೪ [illegible] ಮತ್ತು [illegible])

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗೋವಿಂದ ಭಗವತ್ಪಾದಾಚಾರ್ಯರನ್ನು ಪ್ರತ್ಯಕ್ಷವಾಗಿ ಕುರಿತು ಹೇಳದಿದ್ದರೂ, ಸುಪ್ರಸಿದ್ಧವಾದ ಭಜಗೋವಿಂದ ಸ್ತೋತ್ರದ "ಭಜಗೋವಿಂದಂ ಭಜಗೋವಿಂದಂ ಭಜಗೋವಿಂದಂ ಗೋವಿಂದಂಭಜ" ಎಂಬ ಚರಣವು ಗೋವಿಂದ ಭಗವತ್ಪಾದರನ್ನು ಕುರಿತು ಬರೆದುದೇ ಎಂಬುದಾಗಿ ಹಲವಾರು ಜನ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಹಾಗೆಯೇ ವಿವೇಕ ಚೂಡಾಮಣಿಯ ೩೦ ಆರಂಭದ ಮಂಗಳ ಶ್ಲೋಕವೂ ಸಹ ಶ್ರೀ ಗೋವಿಂದಭಗವತ್ಪಾದರನ್ನು ಕುರಿತುದೇ ಎಂದು ಬಹುಜನ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ರೇಣುಕಾಚಾರ್ಯರು ತಮ್ಮ ಸಮಕಾಲೀನರಾಗಿದ್ದು ಶಂಕರಾಚಾರ್ಯರು ಅವರಿಂದ ಯಾವರೀತಿಯಲ್ಲಾದರೂ ಉಪಕೃತರಾಗಿದ್ದಿದ್ದರೆ ಅಥವಾ ರೇಣುಕರ ತತ್ವಪ್ರಣಾಲಿಯು ತಮಗೆ ಸಮ್ಮತವಾಗಿದ್ದಿದ್ದರೆ ಶಂಕರರು ಅವರನ್ನು ಸ್ಮರಿಸದೆ ಇರುತ್ತಿರಲಿಲ್ಲ. ೩೧ ಶ್ರೀಪದ್ಮಪಾದಾಚಾರ್ಯರು ತಮ್ಮ ಗುರುಗಳನ್ನು 'ಅಗ್ರಣೀಃ ಶಿಷ್ಟಾಚಾರ ಪರಿಪಾಲನೇ ಭಗವಾನ್ ಭಾಷ್ಯ

---

೩೦ ಸರ್ವ ವೇದಾಂತ ಸಿದ್ಧಾಂತ ಗೋಚರಂ ತಮ ಗೋಚರಂ
ಗೋವಿಂದಂ ಪರಮಾನಂದಂ ಸದ್ಗುರುಂ ಪ್ರಣಮಾಮ್ಯಹಂ
(ವಿ. ಚೂ. ೧)

೩೧ ಶ್ರೀ ಶಂಕರಾಚಾರ್ಯ ಕೃತ ರೇಣುಕ ಸ್ತೋತ್ರವೆಂಬುದೊಂದು ಕನ್ನಡ ರೇಣುಕ ವಿಜಯದಲ್ಲಿದೆ. ಅದು ಕೇವಲ ಇತ್ತೀಚಿನವನಾದ ಕವಿಯೊಬ್ಬನ ಸೃಷ್ಟಿ. ತಕ್ಕಮಟ್ಟಿಗೆ ಸಂಸ್ಕೃತವನ್ನು ಬಲ್ಲವರು ಕಾವ್ಯರಚನಾ ಶಕ್ತಿ ಉಳ್ಳವರು ಯಾರೊಬ್ಬರಾದರೂ ಅಂತಹ ಪದ್ಯಗಳನ್ನು ಹೊಸೆದು ಪ್ರಸಿದ್ಧರ ಹೆಸರಿನಲ್ಲಿ ಹೊರಗೆಡವಬಹುದು. ಇಂತಹ ಸ್ತೋತ್ರಗಳೂ ಪುಸ್ತಕಗಳೂ ಸಂಸ್ಕೃತದಲ್ಲಿ ಹೇರಳವಾಗಿ ಇವೆ.

ಈ ಕಾವ್ಯವು ಹೇಳಿ ಬರೆಸಿದ ಕಾವ್ಯ. ಕಾವ್ಯಕರ್ತೃ ದಿ|| ನಂಜನಗೂಡು ಶ್ರೀಕಂಠಶಾಸ್ತ್ರಿ. ಅವರು ರೇಣುಕರು ಚಂದ್ರಮೌಳೀಶ್ವರಲಿಂಗವನ್ನು ಕೊಟ್ಟ ಪ್ರಸಂಗವನ್ನು ಬರೆಯುತ್ತ ಶಂಕರಾಚಾರ್ಯರಿಗೆ ಎಂದು ಹೇಳದೆ (ಶಂಕರಾಯೋಗಿನೇ) ಎಂದು ಹೇಳಿರುವುದು ಗಮನಾರ್ಹ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರಃ ' ಎಂದಿದ್ದಾರೆ. ಶ್ರೀ ಶಂಕರರು ಶಿಷ್ಟಾಚಾರವನ್ನು ಬಿಟ್ಟು ಉಪಕಾರಮಾಡಿದವರನ್ನು ಮರೆಯುವಂತಹ ಅಸಂಸ್ಕೃತರೇ ?

ವೇದಾಂತ ಜನ್ಯವಾದ ವಾಕ್ಯದಿಂದ ಮಾತ್ರವೇ ಸದ್ಯೋಮುಕ್ತಿ ಆಗುವುದೆಂದೂ ಅವಿದ್ಯಾನಿವೃತ್ತಿಯಿಂದ ಬದುಕಿರುವಾಗಲೇ ಮುಕ್ತಿಯಾಗುವುದೆಂದೂ (ಜೀವನ್ಮುಕ್ತಿ) ಅದ್ವೈತ ತತ್ತ್ವವನ್ನು ಸಾರುತ್ತ ಜೀವ ಬ್ರಹ್ಮೈಕ್ಯವನ್ನು ಬೋಧಿಸಿದ ಶ್ರೀಶಂಕರರು, ದ್ವೈತಪರವೂ ಭಾವನಾತ್ಮಕವೂ ಆದ ಶೈವಮತವನ್ನು ಒಪ್ಪಿಕೊಂಡು ಆ ಮತಾಚಾರ್ಯರಿಂದ ಅನುಗ್ರಹಿಸಲ್ಪಟ್ಟರೆಂದು ಹೇಳುವುದು ಕೇವಲ ಮಿಥ್ಯಾ ಕಲ್ಪನೆ, ಅತ್ಯುತ್ಸಾಹದ ಮಾತು. ಶ್ರೀ ಶಂಕರರಿರಲಿ, ಅವರ ಶಿಷ್ಯರೂ ಸಹ ರೇವಣರನ್ನು ಎಲ್ಲಿಯೂ ಸ್ಮರಿಸಿಲ್ಲವೆಂಬುದು ಇನ್ನೂ ಗಮನಾರ್ಹವಾದುದು.

೭. ಗುರುವಂಶಕಾವ್ಯದಲ್ಲಿನ ವಿಚಾರ

ಶ್ರೀ ರೇವಣಸಿದ್ಧರನ್ನು ಕುರಿತ ಪ್ರಾಮಾಣಿಕ ಗ್ರಂಥಗಳಲ್ಲಾಗಲೀ ಶಂಕರರನ್ನು ಕುರಿತಂತಹ ಶಂಕರವಿಜಯ ಕಾವ್ಯಗಳಲ್ಲಾಗಲೀ ಚಂದ್ರಮೌಳೀಶ್ವರ ಲಿಂಗವು ರೇವಣರಿಂದ ಶಂಕರರಿಗೆ ಕೊಡಲ್ಪಟ್ಟಿತೆಂಬುದಕ್ಕೆ ನಂಬಲರ್ಹವಾದಂತಹ ಆಧಾರವಿಲ್ಲವೆಂದು ನೋಡಿದೆವು. ಅವರಿಬ್ಬರೂ ಸಮಕಾಲೀನರಲ್ಲವೆಂಬುದೂ ಶ್ರುತಪಟ್ಟಿತು. ಅವರಿಬ್ಬರ ಜೀವನೋದ್ದೇಶಗಳೂ ಬೇರೆಬೇರೆ ಆಗಿತ್ತೆಂಬದನ್ನೂ ಅವರಿಬ್ಬರೂ ಮಾಡಿದಂತಹ ಮಹತ್ವದ ಕಾರ್ಯಗಳೂ ಬೇರೆ ಬೇರೆಯೆಂಬುದನ್ನೂ ಅರಿತೆವು. ಶಂಕರರು ಶೈವಮತವನ್ನು ಸೂತ್ರಭಾಷ್ಯದಲ್ಲಿ ಸ್ಪಷ್ಟವಾಗಿ ನಿರಾಕರಿಸಿ, ಅವರದು 'ವೇದಬಾಹ್ಯೇಶ್ವರ ಕಲ್ಪನೆ' ಎಂದು ಕರೆದಿದ್ದಾರೆಂಬುದನ್ನು ಓದಿದೆವು. ಹೀಗೆ ಶಂಕರರಿಗೂ ರೇಣುಕರಿಗೂ ಯಾವವಿಧವಾದ ಸಂಬಂಧವೂ ಇಲ್ಲದೇ ಇದ್ದರೂ ಈ ಕಲ್ಪನೆಗೆ – ಶಂಕರರಿಗೆ ರೇವಣರು ಚಂದ್ರಮೌಳೀಶ್ವರಲಿಂಗವನ್ನು ಕೊಟ್ಟರೆಂಬ ಕಲ್ಪನೆಗೆ ಆಧಾರವೇನೆಂಬುದನ್ನು ನೋಡಬೇಕು. ಹಾಗೆಯೇ ಶಾಂಕರ ಪೀಠಗಳಲ್ಲಿ ಪ್ರಧಾನಪೀಠವಾದ ಶೃಂಗೇರಿಯ ಪೀಠದಲ್ಲಿರುವ ಶ್ರೀ ಚಂದ್ರಮೌಳೀಶ್ವರ ಲಿಂಗವು ಯಾವುದೆಂಬುದನ್ನು ಸ್ಪಷ್ಟಮಾಡಿಕೊಳ್ಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರಿಪೀಠದ ೨೭ ನೆಯ ಜಗದ್ಗುರುಗಳಾಗಿದ್ದ ಶ್ರೀ ದ್ವಿತೀಯ ಸಚ್ಚಿದಾನಂದಭಾರತೀ ಸ್ವಾಮಿಗಳವರ ಕಾಲದಲ್ಲಿ (೧೭೦೫-೧೭೪೧) ಅವರ ಆಸ್ಥಾನ ಪಂಡಿತರಾಗಿದ್ದ ಕಾಶೀ ಲಕ್ಷ್ಮಣಶಾಸ್ತ್ರಿಗಳು ಗುರುವಂಶ ಕಾವ್ಯವೆಂಬ ಹತ್ತೊಂಬತ್ತು ಸರ್ಗಗಳ ಸಂಸ್ಕೃತ ಮಹಾಕಾವ್ಯವೊಂದನ್ನು ರಚಿಸಿದ್ದಾರೆ. ಆ ಕಾವ್ಯ ಶ್ರೀ ಶಂಕರರಿಂದ ಆರಂಭಿಸಲ್ಪಟ್ಟು ಶ್ರೀ ದ್ವಿತೀಯ ಸಚ್ಚಿದಾನಂದ ಭಾರತೀ ಸ್ವಾಮಿಗಳವರೆಗಿನ ಗುರು ಪರಂಪರೆಯನ್ನೂ ಅವರ ಜೀವನಚರಿತ್ರೆಯನ್ನೂ ವಿವರಿಸುವಂತಹ ಗ್ರಂಥವಾಗಿದೆ. ಅದರಲ್ಲಿ ಕೆಲವು ಮಾತ್ರ ಐತಿಹಾಸಿಕಾಂಶಗಳು ಇದ್ದು ಉಳಿದುದರಲ್ಲಿ ಹೆಚ್ಚಿನವು ಕವಿ ಸಮಯ ರೀತಿಯಲ್ಲಿವೆ. ಆಗಿನಕಾಲದಲ್ಲಿ ಪ್ರಚಲಿತವಾಗಿದ್ದ ದಂತಕಥೆಗಳು ಅವಾಸ್ತವಿಕವಾದ ಸಂಗತಿಗಳೂ ಈ ಕಾವ್ಯದಲ್ಲಿ ಸೇರಿ ಅದು ಐತಿಹಾಸಿಕ ಕಾವ್ಯವೊ ಎಂಬ ಭ್ರಮೆಯನ್ನು ಉಂಟುಮಾಡುತ್ತದೆ. ಆದರೆ ಅದು ಐತಿಹಾಸಿಕ ಕಾವ್ಯವಲ್ಲ.

ಆ ಕಾವ್ಯದ ಮೂರನೆಯ ಸರ್ಗದ ೩೩ ನೆಯ ಶ್ಲೋಕದಲ್ಲಿ ಚಂದ್ರಮೌಳೀಶ್ವರ ಲಿಂಗದ ಪ್ರಸ್ತಾಪವಿದೆ. ೩೨ ಶ್ರೀ ಶಂಕರಾಚಾರ್ಯರು ಶೃಂಗೇರಿ ಪೀಠದಲ್ಲಿ ಸುರೇಶ್ವರಾಚಾರ್ಯರಿಗೆ ಪಟ್ಟಾಭಿಷೇಕಮಾಡಿದ ಅನಂತರ ತಾವು ಕಾಂಚೀಕ್ಷೇತ್ರಕ್ಕೆ ಹೊರಡುವಾಗ "ಸುಸಿದ್ಧರು ತಮಗೆ ಕೊಟ್ಟಿದ್ದಂತಹ (ಈ ಸುಸಿದ್ಧರು ಸಾಕ್ಷಾತ್ ಪರಮೇಶ್ವರನೇ ಆಗಿರಬಹುದಲ್ಲವೇ?) ಚಂದ್ರಮೌಳೀಶ್ವರ ಲಿಂಗವನ್ನೂ, ರತ್ನಗರ್ಭಗಣಪತಿಯನ್ನೂ ವಿಶ್ವರೂಪರಿಗೆ - ಸುರೇಶ್ವರರಿಗೆ ಕೊಟ್ಟು ಇವುಗಳನ್ನು ಯಾವಾಗಲೂ ಪೂಜಿಸುತ್ತಿರಬೇಕೆಂದೂ ಹೇಳಿದರು." ಎಂದು ಬರೆದಿದೆ ಈ ಶ್ಲೋಕದಲ್ಲಿ ಬರುವ "ಸುಸಿದ್ಧದತ್ತಂ" ಎಂಬುದಕ್ಕೆ ಕಾಶೀ ಲಕ್ಷ್ಮಣಶಾಸ್ತ್ರಿಯೇ ಬರೆದುದೆನ್ನ

---

೩೨ ಶ್ರೀ ಚಂದ್ರಮೌಳೀಶ್ವರ ಲಿಂಗಮಸ್ಮೈ
ಸದ್ರತ್ನ ಗರ್ಭಂ ಗಣನಾಯಕಂಚ
ಸವಿಶ್ವರೂಪಾಯ ಸುಸಿದ್ಧದತ್ತಂ
ಚಿತ್ರಸ್ಯಗಾದೀ ಚ್ಛರಮರ್ಚಯೇತಿ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಲಾದ ವ್ಯಾಖ್ಯಾನವೂ ಇದೆ. ೩೩ ಆ ವ್ಯಾಖ್ಯಾನದಲ್ಲಿ ಸುಸಿದ್ಧದತ್ತಂ ಎಂಬುದಕ್ಕೆ 'ರೇವಣಸಿದ್ಧಮಹಾಯೋಗಿನಾದತ್ತಂ' ಎಂದಷ್ಟೇ ವಿವರಣೆಯಿದೆ. ಈ ರೇವಣಸಿದ್ಧರು ಯಾರು ? ಅವರಿಗೂ ಶಂಕರರಿಗೂ ಎಲ್ಲಿ ಭೇಟಿಯಾಯಿತು ? ಆಗ ನಡೆದಂತಹ ಮಾತುಕತೆಯಾಗಲೀ ವಾದವಿವಾದವಾಗಲಿ ಏನು ? ಯಾವ ವಿಷಯವನ್ನು ಕುರಿತು ಅವರಿಬ್ಬರಲ್ಲಿಯೂ ಚರ್ಚೆಯಾಯಿತು ? ಅದರ ಫಲಿತಾಂಶವೇನು ? ಏತಕ್ಕಾಗಿ ಲಿಂಗವು ಕೊಡಲ್ಪಟ್ಟಿತು ? ಎಂಬ ಯಾವ ಕೌತುಕದ ಪ್ರಶ್ನೆಗೂ ಆ ಕಾವ್ಯದಲ್ಲಿ ಉತ್ತರವಿಲ್ಲ ! ವ್ಯಾಖ್ಯಾನವನ್ನು ಲಕ್ಷ್ಮಣಶಾಸ್ತ್ರಿಯೇ ಬರೆದನೋ ಇಲ್ಲವೋ ಎಂಬ ಸಂಶಯವೂ ಇದೆ. ಆತನೇ ಬರೆದಿದ್ದಲ್ಲಿ ಆ ರೇವಣಸಿದ್ಧರು ಬಾಳೆಹಳ್ಳಿಯ ಮಠದ ಸ್ಥಾಪಕರಾದ ಪಂಚಾಚಾರ್ಯರಲ್ಲೊಬ್ಬರಾಗಿದ್ದಲ್ಲಿ ಅವರನ್ನು ಕುರಿತು ವಿವರವನ್ನು ಸ್ವಲ್ಪವಾದರೂ ಕೊಡದೆ

---

೩೩ ಈ ವ್ಯಾಖ್ಯಾನವು ಕಾಶೀ ಲಕ್ಷ್ಮಣಶಾಸ್ತ್ರಿಯದಲ್ಲವೆಂದೂ ಮತ್ತಾರೋ ಅದನ್ನು ಬರೆದು ಕಾವ್ಯದಲ್ಲಿ ಸೇರಿಸಿರಬಹುದೆಂದೂ ಹಲವಾರು ಜನ ವಿದ್ವಾಂಸರು ಅಭಿಪ್ರಾಯಪಡುತ್ತಾರೆ ಇಡೀ ಕಾವ್ಯಕ್ಕೆ ವ್ಯಾಖ್ಯಾನ ಬರೆಯಲ್ಪಟ್ಟಿಲ್ಲ. ವ್ಯಾಖ್ಯಾನಕಾರನು ತಾನು ಆನಂದಗಿರಿಯ ಶಂಕರವಿಜಯವನ್ನು ಅನುಸರಿಸಿರುವುದಾಗಿ ಹೇಳುತ್ತಾನೆ. ಕಾವ್ಯ ಕರ್ತೃವು ಮಾಧವೀಯವನ್ನೇ ಅನುಸರಿಸಿ ಶಂಕರ ಚರಿತ್ರೆಯನ್ನು ಬರೆದಿದ್ದಾನೆ. ಆನಂದಗಿರಿಯ ಶಂಕರವಿಜಯದಲ್ಲಿರುವ ಶಂಕರಚರಿತ್ರೆಗೂ ಗುರುವಂಶ ಕಾವ್ಯದಲ್ಲಿರುವ ಶಂಕರಚರಿತ್ರೆಗೂ ತುಂಬಾ ವ್ಯತ್ಯಾಸವಿದೆ. ಆನಂದಗಿರಿಯು ತನ್ನ ಶಂಕರವಿಜಯದಲ್ಲಿ ರೇವಣ ಅಥವಾ ರೇಣುಕವಿಷಯಕವಾದ ಪ್ರಸ್ತಾಪವನ್ನು ಎಲ್ಲಿಯೂ ಮಾಡಿಲ್ಲ. ಕಾವ್ಯವನ್ನೂ ವ್ಯಾಖ್ಯಾನವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದ ವಿದ್ವಾಂಸರು ಸರಳವೂ ಸುಭಗವೂ ಆದ ಕಾವ್ಯಕ್ಕೆ ವ್ಯಾಖ್ಯಾನವು ಅನಾವಶ್ಯಕವೆಂದೂ, ಅದು ಕವಿಯ ಹೆಸರಿನಲ್ಲಿ ಬೇರೆಯವರಿಂದ ರಚಿಸಲ್ಪಟ್ಟಿರಬೇಕೆಂದೂ ಅಭಿಪ್ರಾಯಪಡುತ್ತಾರೆ. ವ್ಯಾಖ್ಯಾನವೂ ಪೂರ್ತಿಯಾಗಿಲ್ಲ, ಮೊದಲ ಹದಿನೈದು ಸರ್ಗಗಳಿಗೆ ಮಾತ್ರ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಚುಟುಕದಲ್ಲಿ 'ರೇವಣಸಿದ್ಧ ಮಹಾಯೋಗಿನಾದತ್ತಂ' ಎಂದಷ್ಟೇ ಬರೆಯು ತ್ತಿರಲಿಲ್ಲ. ಈಗಾಗಲೇ ನಾವು ಶಂಕರರ ಮತ್ತು ರೇವಣರ ಕಾಲವನ್ನು ಪರಾಮರ್ಶಿಸಿ ಶಂಕರರು ರೇವಣರಿಗಿಂತಲೂ ಬಹಳ ಪ್ರಾಚೀನರೆಂದೂ ಇಬ್ಬರಿಗೂ ಕನಿಷ್ಠಪಕ್ಷ ಮುನ್ನೂರು ವರ್ಷಗಳಷ್ಟಾದರೂ ಅಂತರವಿದ್ದಿ ತೆಂದೂ ತಿಳಿಸಿದ್ದೇವೆ. ಆದ್ದರಿಂದ ಈ ರೇವಣರು ಪಂಚಾಚಾರ್ಯರಲ್ಲಿ ಒಬ್ಬರಾದ ರೇಣುಕರಲ್ಲವೆಂಬುದು ಸ್ಪಷ್ಟವಾಗುತ್ತದೆ.

ಹಾಗಾದರೆ ಲಕ್ಷ್ಮಣಶಾಸ್ತ್ರಿಯು ಹೇಳಿರುವ ರೇವಣಸಿದ್ಧ ಮಹಾ ಯೋಗಿಯು ಯಾರು ?

ಪುರಾಣಗಳಲ್ಲಿ ರೇವಾ ಎಂಬ ಹೆಸರು ಅನೇಕ ಕಡೆಗಳಲ್ಲಿ ಬರುತ್ತದೆ. ರೇವಾ ಎಂಬುದು ಒಂದು ಪವಿತ್ರವಾದ ನದಿಯ ಹೆಸರು. ಗಂಗಾ, ಯಮುನಾ, ಗೋದಾವರೀ, ಸರಸ್ವತೀ, ನರ್ಮದಾ, ಸಿಂಧು ಮತ್ತು ಕಾವೇರೀ ಇವು ಭರತವರ್ಷದಲ್ಲಿ ಸ್ತುತ್ಯರ್ಹವೂ ಶ್ರೇಷ್ಠವೂ ಆದ ಸಪ್ತನದಿ ಗಳು. ಇವುಗಳಲ್ಲಿ ನರ್ಮದಾನದಿಗೆ ರೇವಾನದೀ ಎಂಬ ಹೆಸರು ಪ್ರಖ್ಯಾತ ವಾಗಿದೆ. ಸ್ಕಾಂದ ಪುರಾಣದಲ್ಲಿ ಈ ನದಿಯ ಮಹಾತ್ಮ್ಯ ವಿಶೇಷವಾಗಿ ವರ್ಣಿತವಾಗಿದೆ. ರೇವಾ ಖಂಡ ಎಂಬ ಪ್ರತ್ಯೇಕ ಭಾಗವೇ ಸ್ಕಾಂದ ಪುರಾಣದಲ್ಲಿದೆ. ಶ್ರೀ ಗೋವಿಂದ ಭಗವತ್ಪಾದರು ಈ ರೇವಾ ಅಥವಾ ನರ್ಮದಾ ನದೀತೀರದ ಓಂಕಾರನಾಥಕ್ಷೇತ್ರದಲ್ಲಿ ತಪೋನಿರತರಾಗಿದ್ದರು. ಅವರು ಮಹಾಯೋಗಿಗಳೆಂದೂ, ಸಿದ್ಧರೆಂದೂ, ಸದಾ ಆತ್ಮಧ್ಯಾನ ನಿರತರೆಂದೂ ಪ್ರಸಿದ್ಧರಾಗಿದ್ದರು. ಅವರಿಗೆ ಗೋವಿಂದ ಯೋಗೀಂದ್ರ ರೆಂಬ ಹೆಸರೂ ಪ್ರಖ್ಯಾತವಾಗಿತ್ತು. ಸಂಪ್ರದಾಯವಿದರು ಅಷ್ಟಾಂಗ ಯೋಗಶಾಸ್ತ್ರ ಪ್ರವರ್ತಕರಾದ ಶ್ರೀ ಪತಂಜಲಿಮಹರ್ಷಿಗಳೇ ಗೋವಿಂದ ಭಗವತ್ಪಾದರಾಗಿ ಅವತಾರಮಾಡಿದರೆಂದು ಇಂದಿಗೂ ನಂಬುತ್ತಾರೆ. ಆದ್ದ ರಿಂದ ಸುಸಿದ್ಧರೆಂದರೆ ರೇವಾ ಅಥವಾ ನರ್ಮದಾ ತೀರದಲ್ಲಿದ್ದ ಗೋವಿಂದ ಯೋಗೀಂದ್ರರೆಂದೂ, ಅವರೇ ರೇವಣಸಿದ್ಧರೆಂಬ ಮತ್ತೊಂದು ಹೆಸರನ್ನು ಹೊಂದಿದ್ದರೆಂದೂ ಹೇಳಬೇಕಾಗುತ್ತದೆ. ಗುರುವಂಶ ಕಾವ್ಯದ ಕರ್ತೃವಿನ ಅಭಿಪ್ರಾಯವೂ ಹೀಗೆಯೇ ಇರಬೇಕೆಂದು ನಮ್ಮ ನಂಬಿಕೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದನ್ನೇ ವ್ಯಾಖ್ಯಾನಕಾರನೂ 'ರೇವಣಸಿದ್ಧಮಹಾಯೋಗಿನಾದತ್ತಂ' ಎಂದು ಬರೆದಿದ್ದಾನೆಂದು ಹೇಳಬಹುದು.

ಇದಕ್ಕೆ ಆಧಾರವಾಗಿ ಚಿದ್ವಿಲಾಸರ ಶಂಕರವಿಜಯದಲ್ಲಿ ಶ್ರೀ ಗೋವಿಂದ ಭಗವತ್ಪಾದರು ಶಿಷ್ಯರಾದ ಶ್ರೀ ಶಂಕರರನ್ನು ಕುರಿತು ಹೇಳಿದರೆನ್ನುವ ಈ ಹಲವು ವಾಕ್ಯಗಳಿವೆ. "ಎಲೈ ಶಿಷ್ಯನೇ ನೀನು ಬುದ್ಧಿವಂತನಾಗಿದ್ದು ಎಲ್ಲಾದರ್ಶನಗಳನ್ನೂ ತಿಳಿದುಕೊಂಡಿದ್ದೀಯೆ. ಪರಾಶರೀಯ ಸೂತ್ರಗಳಿಗೂ (ಬ್ರಹ್ಮಸೂತ್ರ) ದಶೋಪನಿಷತ್ತುಗಳಿಗೂ, ಗೀತೆ, ಸಹಸ್ರನಾಮಗಳಿಗೂ ಯಾರೂ ಸರಿಯಾದ ಅರ್ಥವನ್ನು ತಿಳಿದುಕೊಳ್ಳದೆ ತಪ್ಪಾಗಿ ಅರ್ಥ ತಿಳಿದುಕೊಂಡಿದ್ದಾರೆ. ಅವುಗಳಿಗೆ ಅದ್ವೈತಾರ್ಥ ಪ್ರಕಾಶವಾದ ಅರ್ಥವನ್ನು ರಚಿಸು" ಎಂದು ಹೇಳಿ ※ ಶಿವನಿಂದ ಕ್ರಮಾಗತವಾಗಿ ಬಂದಿದ್ದ ಚಂದ್ರಮೌಳೀಶ್ವರ ಲಿಂಗವನ್ನೂ ರತ್ನಗರ್ಭಗಣಪತಿಯನ್ನೂ ಕೊಟ್ಟರು. ※※ ಇದು ಚಿದ್ವಿಲಾಸೀಯದಲ್ಲಿರುವುದು. ಆದ್ದರಿಂದ ಗುರುವಂಶ ಕಾವ್ಯದಲ್ಲಿ ರೇವಣಸಿದ್ಧಮಹಾಯೋಗಿಯೆಂದು ಹೇಳಿರುವುದು ಈ ಗೋವಿಂದ ಭಗವತ್ಪಾದರನ್ನೇ ವಿನಾ ಪಂಚಾಚಾರ್ಯರ ಲ್ಲೊಬ್ಬರಾದ ರೇಣುಕಾಚಾರ್ಯರನ್ನಲ್ಲವೆನ್ನುವುದು ಸುಸ್ಪಷ್ಟ. ಮತ್ತು ಶೃಂಗೇರಿ ಆಚಾರ್ಯರವರಿಂದ ಅನವರತ ಪೂಜೆಗೊಳ್ಳುತ್ತಿರುವ ಶ್ರೀ ಚಂದ್ರಮೌಳೀಶ್ವರ ಲಿಂಗವು ಜಗದ್ಗುರು ಶ್ರೀ ಶಂಕರರಿಗೆ ಶ್ರೀ ಪರಶಿವನಿಂದಲೇ ಕೊಡಲ್ಪಟ್ಟಿತು. ಅಥವಾ ಪರಶಿವನಿಂದ ಗುರು ಪರಂಪರೆಯಲ್ಲಿಯೇ ಕ್ರಮಾಗತವಾಗಿ ಶ್ರೀ ಗೋವಿಂದ ಭಗವತ್ಪಾದರಿಂದ ಬಂದಿತು. ಆ ಗೋವಿಂದಭಗತ್ಪಾದರನ್ನೇ ಗುರುವಂಶ ಕಾವ್ಯ ವ್ಯಾಖ್ಯಾನ ಕರ್ತೃವು

※ ಇತ್ಯುಕ್ತ್ವಾ ಚಂದ್ರಮೌಳೀಶಂ ರತ್ನಗರ್ಭ ಗಣಾಧಿಪಂ ।
ಶಿವಾತ್ಕ್ರಮಾದಿ ಹಾಯಾತಂ ದದೌ ತಸ್ಮೈ ಸದೇಶಿಕಃ ॥

※※ ಶಿವರಹಸ್ಯದಲ್ಲಿಯೂ ಚಂದ್ರಮೌಳೀಶ್ವರ ಲಿಂಗವು ಶಿವನಿಂದ ಬಂದಿತೆಂದು ಹೇಳಿದೆ. ಚಿದ್ವಿಲಾಸರು ಅದನ್ನು ಶಿವನಿಂದ ಕ್ರಮಾಗತವಾಗಿ ಗುರುಪರಂಪರೆಯಲ್ಲಿ ಬಂದಿತೆಂದು ಹೇಳಿರುವುದು ವಿಶೇಷ.

Sri Vidyabharathi Book Centre, Sringeri

CC-O. In Public Domain. Digitized by eGangotri

'ರೇವಣಸಿದ್ಧಮಹಾಯೋಗಿ' ಎಂದು ಕರೆದಿದ್ದಾನೆ ಎನ್ನುವುದು ನಿರ್ವಿವಾದ.

ಆದಿಸಿದ್ಧನು ಶ್ರೀ ಪರಮೇಶ್ವರನೇ ಆದ್ದರಿಂದ ಸುಸಿದ್ಧರೆಂದರೆ ಶ್ರೀ ಪರಮೇಶ್ವರನೇ ವಿನಾ ಬೇರೆ ಅಲ್ಲ. ಶ್ರೀ ಚಂದ್ರಮೌಳೀಶ್ವರ ಲಿಂಗವು ಪರಶಿವನಿಂದಲೇ ಶ್ರೀ ಶಂಕರರಿಗೆ ಕೊಡಲ್ಪಟ್ಟಿತೆಂದು ಶಿವರಹಸ್ಯದಲ್ಲಿರುವ ವಿವರವೇ ವಿಶ್ವಾಸಾರ್ಹ ಮತ್ತು ಅತ್ಯಂತ ಸಮಂಜಸ.

೮. ಬೇರೆಯ ಚಂದ್ರಮೌಳೀಶ್ವರ ಲಿಂಗಗಳು

ಪರಶಿವನಿಂದ ಬಂದ ಶ್ರೀ ಚಂದ್ರಮೌಳೀಶ್ವರ ಲಿಂಗವಲ್ಲದೆ ಬೇರೆ ಯಾವುದಾದರೂ ಅದೇ ಹೆಸರನ್ನು ಹೊಂದಿದ ಲಿಂಗಗಳಿವೆಯೇ ಎಂದು ನೋಡೋಣ.

ಅವತಾರ ಪುರುಷರಾದ ಶ್ರೀ ವಿದ್ಯಾರಣ್ಯಮಹಾಮುನಿಗಳವರ ಕಾಲದಲ್ಲಿ ಇಡೀ ಭರತಖಂಡದಲ್ಲಿ ನಮ್ಮ ಮತಧರ್ಮಗಳ ಪುನರುಜ್ಜೀವನವಾಯಿತು. ಸನಾತನ ವೈದಿಕ ಧರ್ಮವು, ಹಿಂದೂ ಮತವು ಮತ್ತೆ ಮುಗಿಲತ್ತ ತಲೆಯೆತ್ತುವಂತಾಗಿ ಹೊಸ ಜಾಗೃತಿ ಮೂಡಿತ್ತು. ಆಗ ಭರತಖಂಡವು ಧಾರ್ಮಿಕವಾಗಿ ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಸರ್ವತೋಮುಖವಾಗಿ ಜೀವನದ ಎಲ್ಲರಂಗಗಳಲ್ಲಿಯೂ ಹೊಸ ಹೆಜ್ಜೆಯನ್ನು ಇಟ್ಟು ಶ್ರೀ ಶಂಕರಾಚಾರ್ಯರ ಅನಂತರ ಇನ್ನೊಂದು ವಿಕ್ರಮವನ್ನೇ ಸಾಧಿಸಿತು. ಅದು ಪ್ರತ್ಯೇಕ ಅಧ್ಯಯನದ ವಿಚಾರ. ಆಗ ವೈದಿಕ ಧರ್ಮದ ಎಲ್ಲಮತಗಳೂ ಪರಸ್ಪರ ಬಾಳಿ ಬದುಕಿ ಸ್ನೇಹ ಸೌಹಾರ್ದದಿಂದ ಇರಲು ಮತ್ತು ಅನ್ಯ ಮತಗಳ (ವೈದಿಕವಲ್ಲದ) ಬಗೆಗೆ ಪ್ರೀತಿ ವಿಶ್ವಾಸದಿಂದ ವರ್ತಿಸಲು ಶ್ರೀವಿದ್ಯಾರಣ್ಯರ ಉಪದೇಶ ಮತ್ತು ಬೋಧನೆಗಳೇ ಮುಖ್ಯ ಪ್ರಚೋದಕಗಳಾಗಿದ್ದವು. ಅದ್ವೈತಿಗಳಲ್ಲದವರೂ ಅವರಿಂದ ಉಪದೇಶ ಪಡೆದು ಉಪಕಾರ ಹೊಂದಿ ತೃಪ್ತಿ ಸಂತೋಷ ಪ್ರಯೋಜನಗಳನ್ನು ಪಡೆದಿದ್ದರು. ಹಾಗೆಯೇ ಆಂಧ್ರದೇಶದ ರೇವಣ

Sri Vidyabharathi Book Centre, Sringeri

CC-O. In Public Domain. Digitized by eGangotri

-ಸಿದ್ಧನೆಂಬ ಯೋಗಿಯು; (ಈತನು ಸನ್ಯಾಸಿಯಲ್ಲ. ಗೃಹಸ್ಥ ಆಯು-ರ್ವೇದ ಪಂಡಿತ ರೇವಣಸಿದ್ಧ ಪ್ರಕ್ರಿಯಾ ಎಂಬ ಆಯುರ್ವೇದ ಗ್ರಂಥ ಕರ್ತೃ. ಶೈವಸಂಪ್ರದಾಯದ ಬ್ರಾಹ್ಮಣ.) ೩೬ ಶೃಂಗೇರಿಗೆ ಬಂದು ಆಗ ಜಗದ್ಗುರು ಪೀಠವನ್ನು ಅಲಂಕರಿಸಿದ್ದ (೧೩೮೨-೧೩೮೬) ಶ್ರೀ ವಿದ್ಯಾರಣ್ಯಮುನಿಗಳ ದರ್ಶನವನ್ನು ಮಾಡಿ ಅವರಿಂದ ಆಧ್ಯಾತ್ಮಿಕ ಉಪದೇಶ ಮಾರ್ಗದರ್ಶನವನ್ನು ಪಡೆದನು. ೩೭ ಈತನು ಹಲವು ಕಾಲ ಶೃಂಗೇರಿಯಲ್ಲಿಯೇ ಇದ್ದು ಅನುಷ್ಠಾನ ನಡೆಸಿ ತನ್ನ ಕೃತಜ್ಞತೆಯ ದ್ಯೋತಕವಾಗಿ ಪಚ್ಚೆಯ ಲಿಂಗವನ್ನು ವಿದ್ಯಾರಣ್ಯರಿಗೆ ಸಮರ್ಪಿಸಿದನು. ೩೮ ಈ ಲಿಂಗವು ಇಂದಿಗೂ ಶೃಂಗೇರಿಮಠದಲ್ಲಿ ಇದೆ. ಶ್ರೀ ಶಂಕರಾಚಾರ್ಯರವರ ಆಲಯದಲ್ಲಿ ಪೂಜೆಗೊಳ್ಳುತ್ತಿದೆ. ಇದಕ್ಕೆ ಚಂದ್ರಮೌಳೀಶ್ವರ ಲಿಂಗವೆಂಬ ಅಭಿದಾನವೇ ರೂಢಿಯಲ್ಲಿದೆ.

---

೩೬. ಶ್ರೀ ವಿದ್ಯಾರಣ್ಯ (ಮಾಧವ) ಸಾಯಣ, ಭೋಗನಾಥ ಸಹೋದರರ ನಾಲ್ವರು ಗುರುಗಳಲ್ಲಿ ಕಡೆಯವರಾಗಿದ್ದ ಶ್ರೀಕಂಠನಾಥರೂ ಶೈವ ಸಂಪ್ರದಾಯದ ಸ್ಮಾರ್ತ ಬ್ರಾಹ್ಮಣ ಮತದವರೆಂಬುದನ್ನು ಇಲ್ಲಿ ಸ್ಮರಿಸಬಹುದು.

೩೭. ಈ ಸಂಪ್ರದಾಯದ ಬ್ರಾಹ್ಮಣರು ಈಗಲೂ ಆಂಧ್ರದೇಶದಲ್ಲಿದ್ದಾರೆ. ಇವರು ಸ್ಮಾರ್ತ ಬ್ರಾಹ್ಮಣರಂತೆ ಸಂಧ್ಯಾವಂದನೆ ಅಗ್ನಿಹೋತ್ರಾದಿಗಳನ್ನು ಮಾಡುತ್ತಾರೆ. ಶ್ರೀ ವೈಷ್ಣವ ಬ್ರಾಹ್ಮಣರು ಹೇಗೆ ಎಲ್ಲವನ್ನೂ ನಾರಾಯಣ ಪರವಾಗಿ ಹೇಳುತ್ತಾರೆಯೋ ಹಾಗೆಯೇ ಇವರು ಎಲ್ಲವನ್ನು ಶಿವಪರವಾಗಿ ಹೇಳುತ್ತಾರೆ. ಇವರು ಶ್ರೀ ಶಂಕರಾಚಾರ್ಯರನ್ನೂ ಶ್ರೀ ಅಪ್ಪಯ್ಯದೀಕ್ಷಿತರನ್ನೂ ತಮ್ಮ ಗುರುಗಳೆಂದು ಗೌರವಿಸುತ್ತಾರೆ. ಶಾಂಕರ ಭಾಷ್ಯಗಳನ್ನೂ ಅಪ್ಪಯ್ಯದೀಕ್ಷಿತರ ಕೃತಿಗಳನ್ನೂ ಭಕ್ತಿ ಶ್ರದ್ಧೆಯಿಂದ ಅಧ್ಯಯನ ಮಾಡುತ್ತಾರೆ.

೩೮ ಈ ಸಂಗತಿಯನ್ನು ನನಗೆ ತಿಳಿಸಿದವರು "ಶ್ರೀ ಶಂಕರಮಠದ ವಿಮರ್ಶ" ಎಂಬ ಸಂಶೋಧನ ಪೂರ್ಣವಾದ ಉದ್ಗ್ರಂಥವನ್ನು ಹಿಂದೀ ಭಾಷೆಯಲ್ಲಿ ಬರೆದಿರುವ ಕಾಶಿಯ ಶ್ರೀ ಜೆ. ವಿ. ರಾಜಗೋಪಾಲಶರ್ಮರು.

Sri Vidyabharathi Book Centre, Sringeri

CC-O. In Public Domain. Digitized by eGangotri

೧೭೬೩ ರಿಂದ ೧೮೦೪ ರೊಳಗೆ ಇದ್ದ ಲಿಂಗಣ್ಣ ಕವಿಯಿಂದ ರಚಿತವಾದ ಕೆಳದಿಯ ರಾಜಮನೆತನವನ್ನು ಕುರಿತ, ಕೆಳದಿ ನೃಪವಿಜಯವೆಂಬ ಚಂಪೂ ಕಾವ್ಯದಲ್ಲಿ ಶೃಂಗೇರಿ ಪೀಠಕ್ಕೆ ಸಂಬಂಧಪಟ್ಟಂತಹ ಹಲವಾರು ಸ್ವಾರಸ್ಯಕರ ಸಂಗತಿಗಳು ಇವೆ. ಅದರಲ್ಲಿ ವಿದ್ಯಾರಣ್ಯರಿಗೆ ರೇವಣಸಿದ್ಧ ಎಂಬೊಬ್ಬ ಜಂಗಮಸ್ವರೂಪಿ ಗಣಾಧೀಶ್ವರನು ಕಾಣಿಸಿಕೊಂಡು ಒಂದು ದಿವ್ಯಲಿಂಗವನ್ನು ಕೊಟ್ಟನು ಎಂದಿದೆ. ೩೯ ಅನಂತರ 'ಈ ಲಿಂಗಂ ಚಂದ್ರಮೌಳೀಶ್ವರಂ ಈ ಲಿಂಗಮಂ ನಿತ್ಯಪೂಜೆಗೈವುದೆಂದು ಉಸಿರ್ದಂತರ್ಧಾನನಾಗಿ ಪೋಗಲ್ ಒಡನೆ ಆ ವಿದ್ಯಾರಣ್ಯರ್, ಶೃಂಗಪುರಕ್ಕೈತಂದು, ಶೃಂಗೇರಿ ಮೂಲಸಂಸ್ಥಾನ ಮಠದಲ್ಲಿ, ಆ ಚಂದ್ರಮೌಳೀಶ್ವರ ಪೂಜೆಯಂ ಮಾಡಿಕೊಂಡಿರ್ದು ಶಿಷ್ಯಪರಂಪರೆಯಲ್ಲಿಯೂ ನಡೆಸಿಕೊಂಡು ಬಾಹಂತು ಕಟ್ಟಲೆಯಂ ಮಾಡಿಸಿರ್ದರ್' ಎಂದು ಬರೆಯಲ್ಪಟ್ಟಿದೆ.

ಲಿಂಗಣ್ಣಕವಿಯ ಈ ಚಂಪೂ ಪ್ರಬಂಧದ ಪ್ರಕಾರ 'ರೇವಣಸಿದ್ಧನೆಂಬೊಬ್ಬ ಜಂಗಮ ಗಣಾಧೀಶ್ವರನು ಕಾಣಿಸಿಕೊಂಡು ವಿದ್ಯಾರಣ್ಯರಿಗೆ ಚಂದ್ರಮೌಳೀಶ್ವರ ಲಿಂಗವೊಂದನ್ನು ಪೂಜೆಗಾಗಿ ಹಂಪೆಯಲ್ಲಿ ಕೊಟ್ಟನು. ಧರ್ಮ ಸಂಸ್ಥಾಪನೆಗಾಗಿ ಟೊಂಕಕಟ್ಟಿನಿಂತಿದ್ದ ಬ್ರಾಹ್ಮಣ ಯತಿಶ್ರೇಷ್ಠನ ಲೋಕಾನುಗ್ರಹದ ದೃಷ್ಟಿಯನ್ನೂ, ಧ್ಯೇಯ ಸಾಧನೆಗಳನ್ನೂ ಮೆಚ್ಚಿಕೊಂಡು ಮುಗ್ಧನಾದ ಆ ಜಂಗಮನು ತನ್ನ ಭಕ್ತಿ ಗೌರವ ಸಂತೋಷ ಪ್ರೀತಿಗಳ ದ್ಯೋತಕವಾಗಿ ಲಿಂಗವೊಂದನ್ನು ಕೊಟ್ಟಿರಬಹುದು. ಅದು ಸನಾತನ ಧರ್ಮದ ನವೋದಯ ಕಾಲವಾಗಿದ್ದು ಶ್ರೀ ವಿದ್ಯಾರಣ್ಯರು ಆ ಯುಗದ ಭಾಸ್ಕರನಂತೆ ಬೆಳಗುತ್ತಿದ್ದರು. ಅವರ ದಿವ್ಯ ಪ್ರಭಾವದಿಂದ ಆಗ ಶೈವ, ವೈಷ್ಣವ, ಸ್ಮಾರ್ತರಲ್ಲಿ ಅನ್ಯೋನ್ಯ ಪ್ರೀತಿ ವಿಶ್ವಾಸಗಳು ದೃಢವಾಗಿದ್ದವು. ಪರಸ್ಪರರಲ್ಲಿ ಸಹಕಾರ ಬೆಂಬಲಗಳಿದ್ದವು, ಪ್ರತ್ಯೇಕ ಭಾವನೆ, ಸಂಶಯದೃಷ್ಟಿ, ಪರಸ್ಪರ ಅಸೂಯೆಗಳು ಇರಲಿಲ್ಲ. ಅದು ಪ್ರತ್ಯೇಕ ಅಧ್ಯಯನಕ್ಕೆ ಅರ್ಹವಾದ ವಸ್ತು.

---

೩೯ ಕೆಳದಿ ನೃಪವಿಜಯ ಪುಟ ೧೬

Sri Vidyabharathi Book Centre, Sringeri

CC-O. In Public Domain. Digitized by eGangotri

ಅದಿರಲಿ. ಶ್ರೀಶಂಕರರಿಗೆ ಪರಂಪರಾಪ್ರಾಪ್ತವಾಗಿ ಬಂದಿದ್ದ ಚಂದ್ರಮೌಳೀಶ್ವರ ಲಿಂಗವಲ್ಲದೆ ಇನ್ನೊಂದು ಲಿಂಗವೂ ಶೃಂಗೇರಿ ಮಠಕ್ಕೆ ಬಂದು ಅದರ ಹೆಸರೂ ಚಂದ್ರಮೌಳೀಶ್ವರನೆಂದೇ ಆಯಿತು ಎಂಬುದು ಪ್ರಸ್ತುತ ವಿಷಯ.

ಹಿಂದೆಹೇಳಿದ ರೇವಣಸಿದ್ಧನೆಂಬ ಶೈವಬ್ರಾಹ್ಮಣನೇ-ಆಯುರ್ವೇದ ಪಂಡಿತನೇ ಲಿಂಗಣ್ಣ ಕವಿಯ ಕಾಲದಲ್ಲಿ ರೇವಣಸಿದ್ಧನೆಂಬ ಗಣಾಧೀಶ್ವರನಾಗಿ ಮಾರ್ಪಾಟಾಗಿ ಹೋಗಿರಬಹುದು. ಹನ್ನೊಂದನೆಯ ಶತಮಾನದಲ್ಲಿದ್ದ ವೀರಶೈವಾಚಾರ್ಯರಾದ ರೇವಣಸಿದ್ಧರ ಹೆಸರಿಗೂ ಈತನ ಹೆಸರಿಗೂ ಸಾಮ್ಯವಿರುವುದರಿಂದ ಕವಿಯು ಗೊಂದಲಕ್ಕೆ ಈಡಾಗಿ ಭ್ರಾಂತನಾಗಿ ಹೋಗಿರಬಹುದು, ೪೦ ರೇವಣನೆಂಬ ಹೆಸರು ಕೇವಲ ವೀರಶೈವ, ಶೈವರಿಗಷ್ಟೇ ಅಲ್ಲದೆ ಸ್ಮಾರ್ತ ಸಂಪ್ರದಾಯದ ಬ್ರಾಹ್ಮಣರಿಗೂ ಸಲ್ಲುತ್ತದೆಂಬ (ಈ ವಿಷಯವನ್ನು ಮುಂದೆ ಚರ್ಚಿಸೋಣ) ಅಂಶವು ಕವಿಗೆ ತಿಳಿಯದೆ ಹೋಗಿರಬಹುದು. ವೀರಶೈವಾಚಾರ್ಯ ರೇಣುಕ ಅಥವಾ ರೇವಣರ ಅನಂತರ ಅದೇ ಹೆಸರಿನವರು ಬಹು ಜನ ಆಗಿಹೋಗಿರುವರು. ೪೧

---

೪೦ ಇಂತಹ ನಾಮ ಸಾಮ್ಯವನ್ನು ಗುರುತಿಸಿಯೇ ೧೦೪೦-೫೦ ರಲ್ಲಿದ್ದ ವೀರಶೈವಾಚಾರ್ಯ ರೇವಣ ಸಿದ್ಧರೇ ೧೧೮೭ ರ ಸಿರಿವಾಳಶಾಸನದಲ್ಲಿ ಉಕ್ತರಾಗಿರುವ ರೇವಣಸಿದ್ಧರೆಂದು ಕೆಲವರು ಪಂಡಿತರು ಭಾವಿಸಿರುವರೆಂದು ಕಪಟರಾಳ ಕೃಷ್ಣರಾಯರು ಅಭಿಪ್ರಾಯಪಟ್ಟಿದ್ದಾರೆ.

೪೧ ಉದಾಹರಣೆಗಾಗಿ ಇವುಗಳನ್ನು ನೋಡಬಹುದು.

a) ರೇವಣ ೧೧೮೭ (ಸಿರಿವಾಳ ಶಾಸನ)
b) ಮುಸುಕುಂದ ಮಹಾರುಷಿಯ ಪಿತಾಮಹ ರೇವಣ ಸು-೧೦೦೦(?) (E.C. IX. Ht (ಹೊಸಕೋಟೆ) 123
c) ಸಿದ್ಧರೇವಣದೇವ 1262 ಚೌಡದಾನಪುರದ ಶಾಸನ ಶಿವಾನುಭವ ಪತ್ರಿಕೆ IV ಪುಟ 159
d) ಪೂವಲ್ಲಿ ಸಿದ್ಧರೇವಣ (೧೫೧೩. ಶಿವಾನುಭವ ಪು. 127)
e) ರೇವಣ ಆದರೆ ಈತ ಬ್ರಾಹ್ಮಣನಲ್ಲ, ಕುರುಬರ ಗುರು E. C. Si XII 68.
f) ಮರುಳ ಸಿದ್ಧೇಶ್ವರನ ತಂದೆ ರೇವಣ ರಾಮನಗರ ತಾಲ್ಲೂಕು ಅವ್ವೇರಹಳ್ಳಿ ಶಾಸನ MAR 1945 No 5 page 109
g) ರೇವಣ ವೀರಣ ಚನ್ನಬಸಪ್ಪ ಯಿಂಮಡಿ ಸಾತಿದೇವನ ಮಗ ಕು[illegible] E C VIII AG 83

Sri Vidyabharathi Book Centre, Sringeri

 CC-O. In Public Domain. Digitized by eGangotri

ಹಿಂದೆ ಹೇಳಿದ ಗುರುವಂಶ ಕಾವ್ಯವು ರಚಿತವಾದುದು ದ್ವಿತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ಶೃಂಗೇರಿ ವ್ಯಾಖ್ಯಾನ ಪೀಠವನ್ನು ಅಲಂಕರಿಸಿದ್ದ ಕಾಲದಲ್ಲಿ (೧೭೦೪-೧೭೪೧). ಕೆಳದಿ ನೃಪ ವಿಜಯವು ರಚಿತವಾದುದು ಅನಂತರದಲ್ಲಿ, ಎಂದರೆ ೧೭೬೩ ರಿಂದ ೧೮೦೪ ರ ಮಧ್ಯಕಾಲದಲ್ಲಿ. ಇಬ್ಬರು ಕವಿಗಳೂ ಸಮಕಾಲೀನರಲ್ಲದಿದ್ದರೂ ಇವರಿಬ್ಬರಿಗೂ ಚಂದ್ರಮೌಳೀಶ್ವರ ಲಿಂಗದ ವಿಷಯವು ಒಂದೇ ಮೂಲದಿಂದ ಪ್ರಾಪ್ತವಾಗಿರಬೇಕು. (ಕಾಶೀ ಲಕ್ಷ್ಮಣಶಾಸ್ತ್ರಿಯು ವಿದ್ಯಾರಣ್ಯರ ಕಾಲದ ಸಂಗತಿಯನ್ನು ಅರಿತಿದ್ದಿರಬಹುದು. ಹಾಗೆಯೇ ಲಿಂಗಣ್ಣ ಕವಿಯು ಗುರುವಂಶ ಕಾವ್ಯದಿಂದಲೇ ಆ ವಿಷಯವನ್ನೆತ್ತಿಕೊಂಡು ಕಲ್ಪನೆಯ ಬಣ್ಣ ಕೊಟ್ಟು ಬರೆದಿರಲೂ ಬಹುದು) ಆ ಮೂಲವು ಯಾವುದೆಂಬುದನ್ನು ಹುಡುಕೋಣ.

೯. ಶೃಂಗಶಾಸ್ತ್ರಿಯು ತಂದ ಚಂದ್ರಮೌಳೀಶ್ವರ

ಬಿದನೂರಿನಲ್ಲಿ ಆಳುತ್ತಿದ್ದ ಮೊದಲನೆಯ ಸೋಮಶೇಖರರಾಯನ ಕಾಲದಲ್ಲಿ (೧೬೬೪-೧೬೭೧) ಶೃಂಗೇರಿಯ ಜ್ಞಾನಪೀಠದಲ್ಲಿ ಐದನೆಯ ಶ್ರೀ ನರಸಿಂಹಭಾರತೀ ಸ್ವಾಮಿಗಳು ಧರ್ಮಪ್ರಸಾರ ಮಾಡುತ್ತಿದ್ದರು. (೧೬೬೩-೧೭೦೫) ಈ ಸೋಮಶೇಖರನಾಯಕನ ನಂತರ ಈತನ ಧರ್ಮಪತ್ನಿ ಚೆನ್ನಮ್ಮಾಜಿಯೂ (೧೬೭೧-೧೬೯೭), ಆ ಬಳಿಕ ದತ್ತು ಪುತ್ರ ಬಸವಪ್ಪನಾಯಕನೂ (೧೬೯೭-೧೭೧೪), ಅನಂತರ ಇಮ್ಮಡಿ ಸೋಮಶೇಖರನಾಯಕನೂ (೧೭೧೪-೧೭೩೯) ಬಿದನೂರಿನಲ್ಲಿ ಆಳಿದರು. ಶೃಂಗೇರಿಯ ಧರ್ಮಪೀಠದಲ್ಲಿ ಶ್ರೀ ನರಸಿಂಹಭಾರತಿಗಳ ನಂತರ ಇಮ್ಮಡಿ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು (೧೭೦೫-೧೭೪೧) ವಿರಾಜಮಾನರಾಗಿದ್ದರು.

ಮೊದಲನೆಯ ಸೋಮಶೇಖರನಾಯಕನ ಕಾಲದಲ್ಲಿ (೧೬೬೪-೭೧) ಬಾಳೆಹಳ್ಳಿ ವೀರಶೈವ ಮಠದಲ್ಲಿ ಶ್ರೀ ಗುರುಶಾಂತಸ್ವಾಮಿ ಎಂಬುವರು ಪೀಠಾಧಿಪತಿಗಳಾಗಿದ್ದರು. ಈ ಸ್ವಾಮಿಗಳು ಬಿದನೂರು ಸಂಸ್ಥಾನಕ್ಕೆ ವಿರುದ್ಧವಾಗಿ ನಡೆದುಕೊಂಡುದರಿಂದ ಶಕವರ್ಷ ೧೫೯೪ ರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

(೧೬೭೨ ನೇ ಇಸವಿ), ದೊರೆ ಸೋಮಶೇಖರನಾಯಕನು ಬಾಳೆಹಳ್ಳಿ ಮಠವನ್ನು ಜಪ್ತಿಮಾಡಿಸಿ, ಅಲ್ಲಿದ್ದ ಚಂದ್ರಮೌಳೀಶ್ವರ, ಬಲದ ಶಂಖ, ಏಕಬೆತ್ತ ಮುಂತಾದ ಪೂಜಾ ವಸ್ತುಗಳನ್ನು ಶೃಂಗೇರಿ ಮಠಕ್ಕೆ ಕಳುಹಿಸಿ ದನೆಂದೂ, ರಾಜ ಲಾಂಛನಗಳೆಲ್ಲವನ್ನೂ ತನ್ನ ಅರಮನೆಗೆ ಸಾಗಿಸಿದ ನೆಂದೂ, ಬಾಳೆಹಳ್ಳಿ ಮಠದಲ್ಲಿಯೇ ದೊರೆತ ಶಾಸನದ ಪ್ರತಿ (ಶಿಲ) ರಿಂದ ಶ್ರುತಪಡುತ್ತದೆ. ೪೨ ಮತ್ತು ಸುತ್ತಮುತ್ತಣ ೩೦೦ ಹಳ್ಳಿಗಳಲ್ಲಿ ಬಾಳೆಹಳ್ಳಿ ಮಠದವರು ಕಪ್ಪಕಾಣಿಕೆ ವಸೂಲು ಮಾಡುತ್ತಿದ್ದುದನ್ನೂ ತಪ್ಪಿಸಿದನೆಂದೂ ಅದೇ ಶಾಸನ ತಿಳಿಸುತ್ತದೆ. ೪೩

ಈ ಘಟನೆಯು ನಡೆದ ಐವತ್ತೆರಡು ವರ್ಷಗಳ ನಂತರ (೧೭೨೪) ಶಕವರ್ಷ ೧೬೪೬ ರಲ್ಲಿ ಬಾಳೆಹಳ್ಳಿಮಠದ ಶ್ರೀ ಬಸವಲಿಂಗಸ್ವಾಮಿಗಳು ಪುನಃ ಆಗಿನ ಬಿದನೂರದೊರೆ ಇಮ್ಮಡಿ ಸೋಮಶೇಖರನಾಯಕನಿಗೆ ವಿಜ್ಞಾಪನೆ ಮಾಡಿಕೊಳ್ಳಲು, ಆ ನಾಯಕನು ಪುನಃ ಅವರಿಗೆ ಕಾಣಿಕೆ

---

೪೨ MAR. 1927–P. 20

೪೩ ಇವೇ ಹಿರಿಯ ಸೋಮಶೇಖರನಾಯಕನು ಶೃಂಗೇರಿ ಮಠಕ್ಕೆ ಹಿಂದೆಯೇ ದತ್ತವಾಗಿದ್ದ ೩೦೦ ಪಗೋಡ ಬೆಲೆ ಬಾಳುವ ಎರೆಹಳ್ಳಿ ಸೀಮೆ ಯನ್ನು ಚಂದ್ರಮೌಳೀಶ್ವರ ಪೂಜೆಗಾಗಿ ಪುನಃ ಸ್ಥಿರೀಕರಣಮಾಡಿದ ನೆಂದು ಶೃಂಗೇರಿ ಶಾಸನ ೧೮ ರಿಂದ ವ್ಯಕ್ತಪಡುತ್ತದೆ ಮತ್ತು MAR 1916 P. 67 ರಲ್ಲೂ ಇದು ವಿಶದವಾಗಿದೆ. ಇದು ಹಿಂದೆಯೇ ಕೊಡ ಲ್ಪಟ್ಟದ್ದು, ಕೈ ಬಿಟ್ಟು ಹೋಗಿದ್ದಂತಹ ಗ್ರಾಮಗಳ ಗಡಿಯನ್ನು ಗುರು ತಿಸಿ, ಆ ದಾನವನ್ನು ಸ್ಥಿರೀಕರಣಮಾಡಿದಂತಹ ಒಂದು ಶಾಸನ. ಬಾಳೇ ಹಳ್ಳಿ ಮಠದಲಿಂಗವು ಬರುವುದಕ್ಕಿಂತ ಮೊದಲೇ ಕೊಡಲ್ಪಟ್ಟಿದ್ದ ದಾನ ಶಾಸನ.

Sri Vidyabharathi Book Centre, Sringeri

 CC-O. In Public Domain. Digitized by eGangotri

ವಸೂಲುಮಾಡಿಕೊಳ್ಳಲು ಸಮ್ಮತಿಸಿ ಅಪ್ಪಣೆಯಿತ್ತನೆಂದು ಬಾಳೆಹಳ್ಳಿ ಮಠದ ಇನ್ನೊಂದು ಶಾಸನದ ಪ್ರತಿಯಿಂದ (೫೭) ವ್ಯಕ್ತವಾಗುತ್ತದೆ. ೪೪

ಮೇಲಿನ ವೃತ್ತಾಂತದಿಂದ ಶ್ರುತಪಡುವ ಅಂಶವೆಂದರೆ ಬಾಳೆಹಳ್ಳಿ ವೀರಶೈವ ಮಠದಿಂದ ಶೃಂಗೇರಿ ಸ್ಮಾರ್ತಮಠಕ್ಕೆ ಚಂದ್ರಮೌಳೀಶ್ವರ ನಾಮಕವಾದ ಲಿಂಗವೊಂದು ತರಲ್ಪಟ್ಟಿತು ಎಂಬುದು. ಈ ಘಟನೆ ನಡೆದುದು ೧೬೭೨ ರಲ್ಲಿ. ಆ ವೇಳೆಗೆ ಗುರುವಂಶ ಕಾವ್ಯವಾಗಲಿ, ಕೆಳದಿ ನೃಪವಿಜಯವಾಗಲಿ ರಚಿತವಾಗಿರಲಿಲ್ಲ. ಈ ಎರಡು ಕಾವ್ಯಗಳೂ ಅನಂತರದಲ್ಲಿ, (೧೭೦೬–೪೧ ಮತ್ತು ೧೬೬೩–೧೮೦೪) ರಚಿತವಾದವು. ಈ ಇಬ್ಬರುಕವಿಗಳಿಗೂ ಈ ಘಟನೆಯ ವೃತ್ತಾಂತವು ಜನಶ್ರುತಿಯಾಗಿ ತಿಳಿದು ಬಂದುದರಮೇಲೆ ಒಬ್ಬರು ರೇವಣರಿಂದ ಶಂಕರರಿಗೂ ಇನ್ನೊಬ್ಬರು ರೇವಣರಿಂದ ವಿದ್ಯಾರಣ್ಯರಿಗೂ ಚಂದ್ರಮೌಳೀಶ್ವರ ಲಿಂಗವನ್ನು ಕೊಡಿಸಿ ತೃಪ್ತರಾಗಿಬಿಟ್ಟರು.

---

೪೪ MAR. 1927 P. 20 ಈ ಶಾಸನದಲ್ಲಿ ನಮೂದಿಸಿರುವ ಶಕ ವರ್ಷ ೧೬೪೬. ಅದಕ್ಕೆ ಸರಿಹೊಂದುವ ಜಯಾದಿ ಸಂವತ್ಸರವು ಕ್ರೋಧಿ ಯಾಗುವುದೇ ವಿನಾ ಪರಾಭವ ಆಗುವುದಿಲ್ಲ. ಮತ್ತು ಆಗ ಶೃಂಗೇರಿ ಯಲ್ಲಿ ಶೃಂಗಶಾಸ್ತ್ರಿ ಯೆಂಬ ಪೀಠಾಧಿಪತಿಯು ಯಾರೂ ಇರಲಿಲ್ಲವಾದ್ದ ರಿಂದ ಈ ಶಾಸನಗಳೆರಡೂ (57–58) ಕೃತಕವೆಂದು ಡಾ॥ ಶಾಮಾ ಶಾಸ್ತ್ರಿ ಗಳವರ ಅಭಿಪ್ರಾಯ. ಇದಕ್ಕೆ ನಮ್ಮ ವಿವರಣೆ ಹೀಗಿದೆ.

a) ಶಾಸನದ ಮೂಲ ಪ್ರತಿ ದೊರೆತಿಲ್ಲ. ಬಾಳೆಹಳ್ಳಿ ಮಠದಲ್ಲಿ ದೊರೆತಿರುವುದು ಅದರ ಪ್ರತಿ ಮಾತ್ರ. ನಕಲು ಮಾಡಿ ಕೊಂಡಿರುವುದರಲ್ಲಿ ತಪ್ಪಾಗಿ ಬರೆದುಕೊಂಡಿರಬಹುದು. ಯಾರಿಗೆ ಆ ಪದಾರ್ಥಗಳೆಲ್ಲವೂ ಕೊಡಲ್ಪಟ್ಟವೋ ಮೂಲ ಶಾಸನವು ಅವರಲ್ಲಿಯೆ ಇರಬಹುದು,

b) ಶೃಂಗಶಾಸ್ತ್ರಿಯೆಂಬುವರಾರೂ ಶೃಂಗೇರಿಯಲ್ಲಿ ಪೀಠಾಧಿಪತಿ ಯಾಗಿರಲಿಲ್ಲ ಎಂಬುದು ವಾಸ್ತವ ಸಂಗತಿ. ಆದರೆ ಸ್ವತಃ

Sri Vidyabharathi Book Centre, Sringeri

CC-0. In Public Domain. Digitized by eGangotri

ಈಗ ಶೃಂಗೇರಿ ಮಠದಲ್ಲಿ ಮೂರು ಚಂದ್ರಮೌಳೀಶ್ವರ ಲಿಂಗಗಳು ಇವೆಯೆಂದಾಯಿತು. ಒಂದು ಶ್ರೀ ಆದ್ಯಶಂಕರಾಚಾರ್ಯರಿಗೆ ಶ್ರೀ ವಿಶ್ವೇಶ್ವರನೇ ಅನುಗ್ರಹಿಸಿದ ಸ್ಫಟಿಕ ಲಿಂಗ. ಇನ್ನೊಂದು ಶ್ರೀ ವಿದ್ಯಾರಣ್ಯರಿಗೆ ರೇವಣಸಿದ್ಧರೆಂಬ ಆಂಧ್ರ ಬ್ರಾಹ್ಮಣನು ಒಪ್ಪಿಸಿದ ಪಚ್ಚೆಯ ಲಿಂಗ. ಮೂರನೆಯದು ಬಾಳೆಹಳ್ಳಿ ವೀರಶೈವ ಮಠದಲ್ಲಿದ್ದುದನ್ನು ಶೃಂಗ ಶಾಸ್ತ್ರಿಯು ತಂದೊಪ್ಪಿಸಿದ ಚಂದ್ರಮೌಳೀಶ್ವರ ಲಿಂಗ. ಈ ಲಿಂಗವು ಆನಂತರ, ೧೭೨೪ ರಲ್ಲಿ ಹಿಂದಿರುಗಿಸಲ್ಪಟ್ಟಿರಬಹುದು.

ಶೃಂಗೇರಿಯ ಪೀಠಾಧಿಪತಿಗಳೇ ಆ ವಸ್ತುಗಳನ್ನು ತರಲು ಬಾಳೆಹಳ್ಳಿಗೆ ಹೋಗಬೇಕಾದ ಪ್ರಮೇಯವಿರಲಿಲ್ಲ. ಅವರ ಪ್ರತಿನಿಧಿಯು ಹೋಗಿರಬಹುದು. ಶೃಂಗಶಾಸ್ತ್ರಿಯು ಮಠದ ಧರ್ಮಾಧಿಕಾರಿಯೋ ಸರ್ವಾಧಿಕಾರಿಯೋ ಆಗಿರಬಹುದು. ಸ್ವಾಮಿಗಳ ಪರವಾಗಿ ಆತನು ಆ ಪೂಜ್ಯವಸ್ತುಗಳನ್ನು ಶೃಂಗೇರಿಗೆ ಕೊಂಡೊಯ್ದಿರಬಹುದು. ಶೃಂಗಶಾಸ್ತ್ರಿಯೆಂದರೆ ಶೃಂಗೇರಿ ಶಾಸ್ತ್ರಿಯೊಬ್ಬಾತನೂ ಇರಬಹುದು. ಶೃಂಗಶಾಸ್ತ್ರಿ ಶೃಂಗೇಶ್ವರ ಶಾಸ್ತ್ರಿ ವೆಂಬ ಹೆಸರುಗಳು ಈಗಲೂ ಆ ಸೀಮೆಯಲ್ಲಿ ರೂಢಿಯಲ್ಲಿವೆ.

c) 58 ನೆಯ ಶಾಸನದಲ್ಲಿ ಇರತಕ್ಕ ವಿಷಯದಲ್ಲಿ ಅನುಮಾನಕ್ಕೆ ಕಾರಣವಿಲ್ಲ. ಅದು ವಾಸ್ತವವಾಗಿ ನಡೆದಿರಬೇಕು. ಇದೇ ಹಿರಿಯ ಸೋಮಶೇಖರನಾಯಕನು ಚಂದ್ರಮೌಳೀಶ್ವರ ಅರ್ಚನೆಗಾಗಿ 300 ಪಗೋಡಗಳು ಬೆಳೆಬಾಳುವ ಭೂಮಿಯನ್ನು ಕೊಟ್ಟಿದ್ದಾಗಿ MAR. 1916 P. 67 ರಲ್ಲಿ ವಿವರಣೆಯಿದೆ. ಇದನ್ನಾಗಲೇ ತಿಳಿಸಿದ್ದೇವೆ.

d) 57 ನೆಯ ಶಾಸನ ಕೃತಕವಾಗಿರಬಹುದು. ಆ ಶಾಸನದ ಕಾಲದಲ್ಲಿ ಬಿದನೂರನ್ನು ಆಳುತ್ತಿದ್ದ ದೊರೆಯೂ ಇಮ್ಮಡಿ ಸೋಮಶೇಖರನಾಯಕನೇ ವಿನಾ ಶಾಸನದಲ್ಲಿ ಉಕ್ತವಾಗಿರುವಂತೆ ಶಿವಪ್ಪನಾಯಕನಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೦. ಕೆಳದಿಯ ರಾಣಿ ಸಮರ್ಪಿಸಿದ ಮತ್ತೊಂದು ಲಿಂಗ

ಹಿಂದಿನ ಅಧ್ಯಾಯದಲ್ಲಿ ವಿವರಿಸಿರುವ ಮೂರು ಲಿಂಗಗಳಲ್ಲದೆ ನಾಲ್ಕನೆಯ ಚಂದ್ರಮೌಳೀಶ್ವರ ಲಿಂಗವೂ ಶೃಂಗೇರಿ ಮಠದಲ್ಲಿದೆ.

ಇಕ್ಕೇರೀ ಸಂಸ್ಥಾನದ ಅಂತಿಮ ಕಾಲದಲ್ಲಿ ಚನ್ನಬಸಪ್ಪನಾಯಕನು ಅಲ್ಲಿಯ ರಾಜನಾಗಿದ್ದನು (೧೭೫೪-೫೭) ಆತನ ಮರಣಾನಂತರ ಆತನ ಪತ್ನಿ ವೀರಮ್ಮಾಜಿ (೧೭೫೭-೧೭೬೩) ಇಕ್ಕೇರಿಯನ್ನು ಆಳಿದಳು. ಆಕೆಯು ತನಗೆ ಮಕ್ಕಳಿಲ್ಲದುದರಿಂದ ತನ್ನ ಸೋದರಮಾವನ ನಾಲ್ಕನೆಯ ಮಗನನ್ನು ದತ್ತು ತೆಗೆದುಕೊಂಡಳು. ಆ ದತ್ತು ಪುತ್ರನಿಗೆ ಸೋಮಶೇಖರನಾಯಕನೆಂದು ನಾಮಕರಣಮಾಡಿ ಅವನ ಹೆಸರಿನಲ್ಲಿಯೇ ತಾನು ರಾಜ್ಯಭಾರಮಾಡುತ್ತಿದ್ದಳು.

ಆ ಸಮಯದಲ್ಲಿ ಶೃಂಗೇರಿಯ ಜ್ಞಾನ ಸಿಂಹಾಸನದಲ್ಲಿ ಆಚಾರ್ಯರಾಗಿ ಶ್ರೀ ಅಭಿನವ ಸಚ್ಚಿದಾನಂದ ಭಾರತೀಸ್ವಾಮಿಗಳವರು (೧೭೪೧-೧೭೬೩) ವಿರಾಜಮಾನರಾಗಿದ್ದರು. ಆಗ ಮಠಕ್ಕೆ ತುಂಬಾ ಋಣಭಾರವಿದ್ದುದನ್ನು ಅರಿತ ವೀರಮ್ಮಾಜಿಯು ತನ್ನ ನಿಯೋಗಿಗಳನ್ನು ಶೃಂಗೇರಿಗೆ ಕಳುಹಿಸಿ. ಆ ಸ್ವಾಮಿಗಳನ್ನು ಬಿದನೂರಿಗೆ ಬರಮಾಡಿಕೊಂಡಳು. ಅವರನ್ನು ಭಕ್ತಿಶ್ರದ್ಧೆಯಿಂದ ಸತ್ಕರಿಸಿ. ಮಠಕ್ಕಿದ್ದ ಸಾಲವನ್ನೆಲ್ಲ ಪೂರ್ಣವಾಗಿ ತೀರಿಸಿದಳು. ಅಷ್ಟೇ ಅಲ್ಲದೆ ಸ್ವಾಮಿಗಳಿಗೆ ದಿವ್ಯವಾದ ಲಿಂಗವೊಂದನ್ನು ಅನರ್ಘ್ಯವಾದ ರತ್ನಖಚಿತ ಗೋಪಾಲಕೃಷ್ಣಮೂರ್ತಿಯನ್ನೂ ಮತ್ತು ಧನಕನಕ ವಸ್ತುವಾಹನಗಳನ್ನೂ ಸಮರ್ಪಿಸಿದಳು. ೪೫ ಆ ಲಿಂಗವೂ ಮತ್ತು ಗೋಪಾಲಕೃಷ್ಣ ವಿಗ್ರಹವೂ ಇಂದಿಗೂ ಶೃಂಗೇರಿ ಮಠದಲ್ಲಿ ಪೂಜೆಗೊಳ್ಳುತ್ತಿವೆ. ಆ ಸಮಯದಲ್ಲಿ ವೀರಮ್ಮಾಜಿಯು

---

೪೫ ಕೆಳದಿ ನೃಪವಿಜಯ [೧೨ ಆಶ್ವಾಸ ಪದ್ಯದ ಮತ್ತು ಗದ್ಯ ಭಾಗ]
ಈ ಲಿಂಗದ ಹೆಸರು ಚನ್ನವೀರರಾಜೇಶ್ವರ ಎಂಬುದಾಗಿ ಪ್ರಸಿದ್ಧವಾಗಿದೆ.
ಇದೂ ಸಹ ...

Sri Vidyabharathi Book Centre, Sringeri

CC-O. In Public Domain. Digitized by eGangotri

೩೦೦ ಪಗೋಡಗಳ ಬೆಲೆಬಾಳುವ ಭೂಮಿಯನ್ನು ಶೃಂಗೇರೀ ಸ್ವಾಮಿಗಳಿಗೆ ದಾನಮಾಡಿದಳು ೪೬. ಆ ದಾನವನ್ನು ಮುಂದೆ ಆಕೆಯ ಮಗ ಸೋಮಶೇಖರನಾಯಕನು ಸ್ಥಿರೀಕರಿಸಿದನು.

ಹೀಗೆ ಶೃಂಗೇರಿಮಠದಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾದ ನಾಲ್ಕು ಚಂದ್ರಮೌಳೀಶ್ವರ ಲಿಂಗಗಳಿವೆ. ಅವುಗಳಲ್ಲಿ ಮೂರು ಸ್ಫಟಿಕಲಿಂಗಗಳು, ಒಂದು ಪಚ್ಚೆಯ ಲಿಂಗ. ಇವಲ್ಲದೆ ಶ್ರೀ ಸಚ್ಚಿದಾನಂದಭಾರತೀಸ್ವಾಮಿಗಳವರಿಗೆ ಟಿಪ್ಪೂಸುಲ್ತಾನನು ಪೂಜೆಗಾಗಿ ಒಂದು ಸ್ಫಟಿಕ ಲಿಂಗವನ್ನು ಕಳುಹಿಸಿಕೊಟ್ಟನೆಂದು ಮಠದ ಪ್ರಾಕ್ತನ ಲೇಖನವೊಂದರಿಂದ ತಿಳಿದು ಬರುವುದು. ೪೭ ಈ ಚಂದ್ರಮೌಳೀಶ್ವರ ಲಿಂಗಗಳಲ್ಲದೆ ಬೇರೆ ಹೆಸರುಳ್ಳ ಲಿಂಗಗಳೂ ಅನೇಕವಿವೆ. ಪೂಜೆಯನ್ನು ಮಾಡಲು ಬಲ್ಲಂತಹ ಮಂತ್ರವೇತ್ತರು ಇಲ್ಲದಿದ್ದ ಸಂದರ್ಭದಲ್ಲಿ ಅಥವಾ ಮೃತರಾದಲ್ಲಿ ಆಯಾ ಮನೆಗಳವರು ತಮ್ಮ ಮನೆಗಳಲ್ಲಿ ಅನೂಚಾನವಾಗಿ ಬಂದಿದ್ದ ಲಿಂಗಗಳನ್ನೂ ಸಾಲಿಗ್ರಾಮಗಳನ್ನೂ ಪೂಜೆಗಾಗಿ ಮಠಗಳಿಗಾಗಲೀ ದೇವಾಲಯಗಳಿಗಾ-ಗಲೀ ಕೊಡುವುದುಂಟು. ಇಂತಹ ಲಿಂಗಗಳೂ, ಸಾಲಿಗ್ರಾಮಗಳೂ ಶೃಂಗೇರಿ ಮಠದಲ್ಲಿ ಹೇರಳವಾಗಿವೆ. ಇವೆಲ್ಲಕ್ಕೂ ಪೂಜೆ ನಡೆಯುತ್ತಲೂ ಇದೆ. ರೇಣುಕ ಅಥವಾ ರೇವಣ ಎಂಬೊಬ್ಬರು ಸಹ ಹೀಗೆಯೇ ಶಿವಲಿಂಗವನ್ನು ಕೊಟ್ಟಿರಬಹುದು. ಆ ರೇಣುಕ ಅಥವಾ ರೇವಣರು ಬಾಳೆಹಳ್ಳಿ ಮಠದ ಸ್ವಾಮಿಗಳೆಂದು, ಹಲವರು ತಪ್ಪಾಗಿ ಗ್ರಹಿಸಿ ಭ್ರಮಿಸಿರಬಹುದು.

ಇವುಗಳಲ್ಲಿ ಶ್ರೀ ಶಂಕರಭಗವತ್ಪಾದರಿಂದ ಕ್ರಮಾಗತವಾಗಿ ಬಂದ ವಿಶ್ವೇಶ್ವರದತ್ತವಾದ ಶ್ರೀ ಚಂದ್ರಮೌಳೀಶ್ವರ ಲಿಂಗವು ಮಠದ ಆಚಾರ್ಯರ ಸನ್ನಿಧಿಯಲ್ಲಿಯೇ ಇರುತ್ತಿದ್ದು, ಅವರು ಸಂಚಾರ ಹೊರಟಾಗಲೂ ಅವರೊಡನೆಯೇ ಇರುತ್ತದೆ. ಪಚ್ಚೆ ಲಿಂಗವು ಶೃಂಗೇರಿಯಲ್ಲಿರುವ

---

೪೬. Nayaka's of Ikkeri – ಪು. 155 ಮತ್ತು ಶೃಂಗೇರಿಯ ಪ್ರಾಚ್ಯಲೇಖನಮಾಲೆ ಪುಟ 38-39.

೪೭ ಶೃಂಗೇರಿ ಶ್ರೀಮಠೀಯ ಪ್ರಾಕ್ತನ ಲೇಖನಮಾಲಾ ಸಂಗ್ರಹ ಪು. 79. 80 (1795-96).

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯರ ಗುಡಿಯಲ್ಲಿ ಪೂಜೆಗೊಳ್ಳುತ್ತಿದೆ. ಉಳಿದ ಲಿಂಗಗಳೆಲ್ಲವೂ ಮಠದಲ್ಲಿಯೇ ಪ್ರತಿನಿತ್ಯವೂ ಪೂಜೆಗೊಳ್ಳುತ್ತಿವೆ. ಇವಲ್ಲದೆ ಶ್ರೀ ಶಾರದಾ ದೇವಾಲಯದಲ್ಲಿಯೇ ಇರುವ ಭಂಡಾರದಲ್ಲಿ ಸಹಸ್ರಾರು ಲಿಂಗಗಳೂ ಸಾಲಿಗ್ರಾಮಗಳೂ, ಮೂರ್ತಿಗಳೂ ಪೂಜೆಗೊಳ್ಳುತ್ತಿವೆ. ಪೂಜೆಗಾಗಿ ಯಾರಾದರೂ ಸಾಲಿಗ್ರಾಮವನ್ನಾಗಲೀ, ಶಿವಲಿಂಗವನ್ನಾಗಲೀ ಪ್ರಾರ್ಥಿಸಿಕೊಂಡರೆ, ಮಠದಲ್ಲಿ ಪೂಜೆಗೊಳ್ಳುತ್ತಿರುವ ಇವುಗಳಲ್ಲಿ ಯಾವುದನ್ನಾದರೂ ಸ್ವಾಮಿಗಳು ಅನುಗ್ರಹಿಸುವುದುಂಟು.

ಚೆನ್ನಮ್ಮಾಜಿಯನಂತರ ಬಿದನೂರನ್ನು ಆಕೆಯ ಗೃಹೀತ ಪುತ್ರನಾಗಿದ್ದ ಬಸವಪ್ಪನಾಯಕನು ಆಳುತ್ತಿದ್ದನು. (೧೬೯೭–೧೭೧೪) ಬಸವಪ್ಪನಾಯಕನು ವಿದ್ಯಾವಂತನಾಗಿದ್ದ ದೊರೆ. ಸಾಹಿತ್ಯ, ಶಾಸ್ತ್ರಗಳಲ್ಲಿ ಒಳ್ಳೆಯ ಪ್ರಾವೀಣ್ಯವನ್ನು ಪಡೆದಿದ್ದನು. ಈತನು ವೀರಶೈವ ಮತದಲ್ಲಿ ಹೆಚ್ಚಿನ ಶ್ರದ್ಧಾಭಕ್ತಿಗಳನ್ನು ಹೊಂದಿದ್ದನು. ಶಿವತತ್ವರತ್ನಾಕರ, ಸುಭಾಷಿತ ಸುರದ್ರುಮ ಎಂಬ ಸಂಸ್ಕೃತ ಗ್ರಂಥಗಳನ್ನೂ, ಕನ್ನಡ ಸಂಸ್ಕೃತಗಳೆರಡರಲ್ಲಿಯೂ ಅನುಪಮಸೂಕ್ತಿ ಸುಧಾಕರ ಎಂಬ ಗ್ರಂಥವನ್ನೂ ರಚಿಸಿದ್ದನು. ೨೮ ಈತನು ರಚಿಸಿದ ಶಿವತತ್ವರತ್ನಾಕರದ ನಾಲ್ಕನೆಯ ಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ ಶ್ಲೋಕ ೯–೧೦ ರಲ್ಲಿ ಈ ರೇವಣಸಿದ್ಧ ಚಂದ್ರಮೌಳೀಶ್ವರ ಲಿಂಗದ ಪ್ರಸ್ತಾಪ ಬರುತ್ತದೆ. ೨೯

---

೨೮ ಕೆಳದಿ ನೃಪವಿಜಯ ಪು. 171

೨೯ ರೇವಣಸಿದ್ಧ ಸಂಪ್ರದಾಯ ಪ್ರವರ್ತಕರಾದ ಶ್ರೀ ಶಂಕರಾಚಾರ್ಯರ ಪೀಠಕ್ಕೆ ಅಧಿಪತಿಗಳಾಗಿದ್ದ ಒಬ್ಬ ಸ್ವಾಮಿಗಳಲ್ಲಿ ಶಿವಧರ್ಮನೆಂಬ ಬಡಬ್ರಾಹ್ಮಣನು ಬಂದು ತನ್ನ ಕಷ್ಟಗಳನ್ನು ಹೇಳಿಕೊಂಡನೆಂದೂ ಆ ಸ್ವಾಮಿಗಳವರು ಆ ಬ್ರಾಹ್ಮಣನಿಗೆ ಶ್ರೀ ಚಕ್ರವನ್ನು ಕೊಟ್ಟು ಅದನ್ನು ಪೂಜಿಸುವಂತೆ ಹೇಳಿದರೆಂದೂ ಶ್ರೀ ಚಕ್ರಾರ್ಚನೆಯ ಪ್ರಭಾವದಿಂದ ಆ ಶಿವಧರ್ಮನೆಂಬ ಬ್ರಾಹ್ಮಣನು ಪರಮಜ್ಞಾನಿಯಾಗಿ ಆ ಸ್ವಾಮಿಗಳಿಂದಲೇ ಸನ್ಯಾಸದೀಕ್ಷೆ ಪಡೆದು ವಿದ್ಯಾರಣ್ಯ ಎಂಬ ಹೆಸರನ್ನು ಹೊಂದಿದರೆಂದು ಶಿವತತ್ವ ರತ್ನಾಕರದ ಗ್ರಂಥಕರ್ತನ ಕಲ್ಪನಾ ವಿಲಾಸ ಹರಿದಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರಲ್ಲಿ ಶ್ರೀ ವಿದ್ಯಾರಣ್ಯರಿಗೆ ರೇವಣಸಿದ್ಧರೆಂಬುವರ ಪರಂಪರೆಯವರೇ ಗುರುಗಳೆಂದೂ ಅವರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರೆಂದೂ, ಶೃಂಗೇರಿಯದು ರೇವಣಸಿದ್ಧೇಶ್ವರರ ಸಂಪ್ರದಾಯವೆಂದೂ ಬರೆದಿದೆ. ಶಿವತತ್ವರತ್ನಾಕರದಲ್ಲಿ ಇರುವ ಈ ವೃತ್ತಾಂತಕ್ಕೆ ಮೂಲ ನಾವು ಆಗಲೇ ತಿಳಿಸಿದ ಮೊದಲನೇ ಸೋಮಶೇಖರನಾಯಕನ ಕಾಲದಲ್ಲಿ (೧೬೬೪-೧೬೭೫) ನಡೆದ ಘಟನೆಯೂ ಮತ್ತು ಶ್ರೀ ವಿದ್ಯಾರಣ್ಯರಿಗೆ ಆಂಧ್ರದೇಶದ ರೇವಣಸಿದ್ಧನೆಂಬ ಶೈವಬ್ರಾಹ್ಮಣನು ಶ್ರೀ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟುದೂ ಆದ್ದರಿಂದ, ಶಿವತತ್ವರತ್ನಾಕರದಲ್ಲಿರುವ ವಿಷಯಕ್ಕೆ ಪ್ರಾಮಾಣ್ಯವನ್ನೇನೂ ಕೊಡಬೇಕಾಗಿಲ್ಲ.

ಏತಕ್ಕೆಂದರೆ ಶ್ರೀ ವಿದ್ಯಾರಣ್ಯರು ರೇವಣಸಿದ್ಧರನ್ನಾಗಲೀ ಅಥವಾ ಅವರ ಪರಂಪರೆಯವರನ್ನಾಗಲೀ ತಮ್ಮ ಗುರುಗಳೆಂದು ತಮ್ಮ ಅಪಾರ ಗ್ರಂಥರಾಶಿಯಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಶ್ರೀ ವಿದ್ಯಾತೀರ್ಥ, ಶ್ರೀ ಭಾರತೀಕೃಷ್ಣತೀರ್ಥ ಮತ್ತು ಶ್ರೀ ಶಂಕರಾನಂದರೂ (ಇವರೆಲ್ಲ ಸಂನ್ಯಾಸಾಶ್ರಮಿಗಳು) ಶ್ರೀ ಶ್ರೀಕಂಠನಾಥರೆಂಬ ಗೃಹಸ್ಥರು ವಿದ್ಯಾರಣ್ಯರಿಗೆ ವಿದ್ಯಾಗುರುಗಳಾಗಿದ್ದರು. ವಿದ್ಯಾರಣ್ಯರಿಗೆ ತಮ್ಮ ಬಾಲ್ಯದಲ್ಲಿ ಅವರ ಪಿತೃ ಪರ್ಯರೂ ಗುರುಗಳಾಗಿದ್ದರು. ಇವರ ವಿನಾ ಬೇರೆ ಯಾರೂ ಅವರಿಗೆ ಗುರುಗಳಾಗಿದ್ದುದಕ್ಕೆ ಆಧಾರಗಳಿಲ್ಲ. ಈ ಎಲ್ಲ ಗುರುಗಳಲ್ಲಿ ಶ್ರೀ ವಿದ್ಯಾತೀರ್ಥರೇ ಪ್ರಧಾನರಾಗಿದ್ದು ಅವರೇ ಶ್ರೀವಿದ್ಯಾರಣ್ಯರಿಗೆ ಸಂನ್ಯಾಸಾಶ್ರಮವನ್ನು ಕೊಟ್ಟಂತಹ ಮಹಾಪುರುಷರು. ಶ್ರೀ ವಿದ್ಯಾತೀರ್ಥರನ್ನೂ ಶ್ರೀ ಭಾರತೀಕೃಷ್ಣತೀರ್ಥರನ್ನೂ, ಶ್ರಿ ಶಂಕರಾನಂದರನ್ನೂ ಶ್ರೀ ಶ್ರೀಕಂಠನಾಥರನ್ನೂ ಶ್ರೀ ವಿದ್ಯಾರಣ್ಯರು ಅನನ್ಯ ಭಕ್ತಿ ಶ್ರದ್ಧೆಯಿಂದ ಹೃದಯಪೂರ್ವ

. ತತಃ ರೇವಣಸಿದ್ಧ ಸಂಪ್ರದಾಯ ಪ್ರವರ್ತಿನಾಂ
ಶಂಕರಾಚಾರ್ಯವರ್ಯಾಣಾಂ ಪಾರಂಪರ್ಯಕ್ರಮಾಗತಂ ||
ಸನ್ಯಾಸಿನಮುಪಾಶ್ರಿತ್ಯ ವಿನಯಾವನತೋಧಿಕವಾ್
ವೃತ್ತಾಂತಮಖಿಲಂ ತಸ್ಮೈ ಯತಯೇ ಸ್ವಂವ್ಯಜಿಜ್ಞಪತ್ ||

[ಶಿವತತ್ವ ರತ್ನಾಕರ ತರಂಗ 12 ಕಲ್ಲೋಲ –4 ಶ್ಲೋ 9–10]

Sri Vidyabharathi Book Centre, Sringeri

 CC-O. In Public Domain. Digitized by eGangotri

ಕವಾಗಿ ಸ್ಮರಿಸಿದ್ದಾರೆ. ೫೦ ಆದರೆ ರೇವಣಸಿದ್ಧರೆಂಬುವರನ್ನು ಎಲ್ಲಿಯೂ ತಮ್ಮ ಗುರುವೆಂದು ಹೇಳಿಲ್ಲ. ತಮ್ಮಕಾಲದಲ್ಲಿದ್ದ ರೇವಣರೆಂಬ ಯಾರಿಂದಲಾದರೂ, ವಿದ್ಯಾರಣ್ಯರು ಉಪಕಾರ ಪಡೆದಿದ್ದಲ್ಲಿ ಅವರನ್ನು ಸ್ಮರಿಸದೇ ಇರುತ್ತಿರಲಿಲ್ಲ. ಆದ್ದರಿಂದ ಶಿವತತ್ವರತ್ನಾಕರದ ಹೇಳಿಕೆಯು ಕೇವಲ ಬಾಲಿಶವಾದ ಕಲ್ಪನೆ.

---

೫೦ ಶ್ರೀ ವಿದ್ಯಾತೀರ್ಥರ ಸ್ಮರಣೆ

ಯಸ್ಯನಿಃ ಶ್ವಸಿತಂ ವೇದಾ ಯೋವೇದೇಭ್ಯೋ ಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥ ಮಹೇಶ್ವರಂ ॥

(ಯಾರ ಉಸಿರಾಟವೇ ವೇದವೋ ಯಾರು ವೇದದಿಂದ ಅಖಿಲ ಜಗತ್ತನ್ನು ನಿರ್ಮಿಸಿದರೋ ಆ ವಿದ್ಯಾತೀರ್ಥಮಹೇಶ್ವರನಿಗೆ (ನಮಸ್ಕಾರಗಳು) -ಜೀವನ್ಮುಕ್ತಿ ವಿವೇಕ

ಶ್ರೀ ಭಾರತೀತೀರ್ಥರ ಸ್ಮರಣೆ

ಸಭವ್ಯಾದ್ಭಾರತೀತೀರ್ಥ ಯತೀಂದ್ರ ಚತುರಾನನಾತ್ ।
ಕೃಪಾಮವ್ಯಾಹತಾಂ ಲಬ್ಧ್ವಾ ಪರಾರ್ಥ್ಯ ಪ್ರತಿಮೋಭವತ್ ॥

(ಆತನು [ಮಾಧವಾಚಾರ್ಯ] ಭಾರತೀತೀರ್ಥ ಯತಿವರ್ಯರ ಕೃಪೆಗೆ ಪಾತ್ರನಾಗಿ ಆವರ ಪ್ರಸಾದದಿಂದ ಉತ್ತಮತೆಗೆ ಪ್ರಮಾಣರೂಪವಾಗಿದ್ದಾನೆ)

-ಜೈಮಿನಿಯ ನ್ಯಾಯಮಾಲಾ ವಿಸ್ತರದ ಪೀಠಿಕೆ

ಶ್ರೀ ಶಂಕರಾನಂದರ ಸ್ಮರಣೆ

ನಮಃ ಶ್ರೀ ಶಂಕರಾನಂದ ಗುರುಪಾದಾಂಬುಜಜನ್ಮನೇ ।
ಸವಿಲಾಸ ಮಹಾಮೋಹ ಗ್ರಾಹ ಗ್ರಾಸೈಕ ಕರ್ಮಣೇ ॥

(ಮಹಾಮೋಹವೆಂಬ ಮೊಸಳೆಯನ್ನು ನುಂಗಬಲ್ಲುದಾದ ಶಂಕರಾನಂದ ಗುರುಚರಣ ಕಮಲಕ್ಕೆ ನಮಸ್ಕಾರ) -ವೇದಾಂತ ಪಂಚದಶಿ.

Sri Vidyabharathi Book Centre, Sringeri

CC-0. In Public Domain. Digitized by eGangotri

೧೧. ಭ್ರಾಮಕ ಕಲ್ಪನೆಗಳು

ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಶೃಂಗೇರಿ ಮಠವು ಶೈವ ಮತವೆಂದೂ, ರೇವಣಸಿದ್ಧ ಸಂಪ್ರದಾಯಕ್ಕೆ ಸೇರಿದುದೆಂದೂ ಕೆಲವರು ಭ್ರಮಿಸಿದ್ದಾರೆ.*೧ ಇದಕ್ಕೆ ಆಧಾರವಾಗಿ ಅವರು ತೋರಿಸುವುದು

೧) ಶೃಂಗೇರಿಯಲ್ಲಿ ಸದಾ ನಡೆಯುತ್ತಿರುವ ಚಂದ್ರಮೌಳೀಶ್ವರ ಪೂಜೆ.

೨) ಆ ಲಿಂಗವನ್ನು ವೀರಶೈವಾಚಾರ್ಯರಾದ ರೇವಣಸಿದ್ಧರೆಂಬುವರು ಕೊಟ್ಟರು ಎಂಬುದು ಮತ್ತು

ಶ್ರೀಕಂಠನಾಥರ ಸ್ಮರಣೆ

ಸೋಽಹಂ ಪ್ರಾಪ್ಯ ವಿವೇಕತೀರ್ಥ ಪದವೀಮಾಮ್ನಾಯ ತೀರ್ಥಂಪರಂ ।
ಮಜ್ಜನ್ ಸಜ್ಜನಸಂಗ ತೀರ್ಥನಿಪುಣಃ ಸದ್ವೃತ್ತತೀರ್ಥಂಶ್ರಯನ್
ಲಬ್ಧ್ವಾಮಾಕಲಯನ್ ಪ್ರಭಾವಲಹರೀಂ ಶ್ರೀಭಾರತೀ ತೀರ್ಥತಃ ।
ವಿದ್ಯಾತೀರ್ಥಮುಪಾಶ್ರಯನ್ ಹೃದಿ ಭಜೇ ಶ್ರೀಕಂಠಮವ್ಯಾಹತಂ ॥

(ನಾನು ತರ್ಕ ಮೀಮಾಂಸಾದಿ ಶಾಸ್ತ್ರಗಳನ್ನು ಅಭ್ಯಾಸಮಾಡಿ ವಿದ್ಯಾತೀರ್ಥರಲ್ಲಿ ಮಿಂದು, ಸಾಧು ಸಂತರ ಸಹವಾಸವನ್ನು ಬೆಳಸಿ, ಸದಾಚಾರವನ್ನು ಅವಲಂಬಿಸಿ, ಶ್ರೀ ಭಾರತೀತೀರ್ಥರ ವರಪ್ರಸಾದದಿಂದ ಸಾಮರ್ಥ್ಯವನ್ನು ಪಡೆದುಕೊಂಡು ಶ್ರೀ ವಿದ್ಯಾತೀರ್ಥಸ್ವಾಮಿಗಳನ್ನು ಆಶ್ರಯಿಸಿ, ನಿರಂತರವೂ ಶ್ರೀಕಂಠಗುರುವನ್ನು ಧ್ಯಾನಿಸುವವನಾಗಿದ್ದೇನೆ)

—ಪರಾಶರಸ್ಮೃತಿವ್ಯಾಖ್ಯಾನ-ಪೀಠಿಕಾ ಶ್ಲೋಕ

*೧ ಮೈಸೂರು ಗೆಜೆಟಿಯರನ್ನು ಸಂಪಾದನೆಮಾಡಿ ಪ್ರಕಟಿಸಿದ ಶ್ರೀ ರೈಸ್‌ರವರು ಶ್ರೀ ಶಂಕರರನ್ನು 'a great Shaiva reformer' ಎಂದು ಕರೆದಿದ್ದಾರೆ. ಆದರ ಪುನರ್ಮುದ್ರಣದಲ್ಲಿಯೂ ಶ್ರೀ ಸಿ. ಹಯವದನರಾಯರು ಅದೇ ತಪ್ಪನ್ನೇ ಮಾಡಿದ್ದಾರೆ. (Mysore Gazeteer P. 1173) ಶ್ರೀ ಶಂಕರರನ್ನು 'a great Hindu Reformer' ಎಂದು ಕರೆಯಬಹುದಿತ್ತು. ಅವರು ಹಿಂದೂಧರ್ಮದ ಎಲ್ಲ ಮತಗಳನ್ನೂ ಸುಧಾರಣೆಮಾಡಿ, ಪರಮತದಲ್ಲಿದ್ದ ಭೇದಭಾವನೆಯನ್ನೂ ನಿವಾರಿಸಿ ಷಣ್ಮತಸ್ಥಾಪನಾಚಾರ್ಯರೆಂದು ಪ್ರಸಿದ್ಧರಾದರು.

Sri Vidyabharathi Book Centre, Sringeri

CC-O. In Public Domain. Digitized by eGangotri

೩) ವೀರಶೈವರಾದ ಕೆಳದಿಯ ಅರಸರು ಶೃಂಗೇರಿ ಮಠಕ್ಕೆ ಶ್ರದ್ಧೆಯಿಂದ ನಡೆದುಕೊಳ್ಳುತ್ತಿದ್ದರು ಎಂಬುದು. [೫೨]

ಇವುಗಳಲ್ಲಿ ಎರಡನೆಯ ಅಂಶವನ್ನು ಕೂಲಂಕುಶವಾಗಿ ಈಗಾಗಲೇ ಪರಿಶೀಲಿಸಿ ಅದು ಮಿಥ್ಯಾಕಲ್ಪನೆಯೆಂಬುದನ್ನು ತೋರಿಸಿದ್ದೇವೆ. ಉಳಿದ ಎರಡು ಅಂಶಗಳನ್ನು ಸ್ವಲ್ಪಮಟ್ಟಿಗೆ ಪರಿಶೀಲಿಸುವುದು ಅಗತ್ಯವಾಗಿದೆ.

ಶೃಂಗೇರಿಯಲ್ಲಿ ಶ್ರೀ ಶಂಕರರು ಸ್ಥಾಪಿಸಿದ ಧರ್ಮಪೀಠದಲ್ಲಿ ಚಂದ್ರಮೌಳೀಶ್ವರ ಪೂಜೆ ನಡೆಯುತ್ತಿರುವುದು ವಾಸ್ತವ. ಚಂದ್ರಮೌಳೀಶ್ವರ ಲಿಂಗದೊಡನೆ ಶ್ರೀ ನೃಸಿಂಹ ಸಾಲಿಗ್ರಾಮವೂ ಇದ್ದು ಅದಕ್ಕೂ ಪೂಜೆ

---

[೫೨] ರಾವ್‌ಬಹದ್ದೂರ್ ಹೆಚ್. ಕೃಷ್ಣಶಾಸ್ತ್ರಿಗಳು ಕೆಳದಿ ಬಸವರಾಜನ ಶಿವತತ್ತ್ವರತ್ನಾಕರಕ್ಕೆ ಪೀಠಿಕೆಯನ್ನು ಬರೆಯುತ್ತಾ ಈ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.

1) The ಲಿಂಗ of ಚಂದ್ರಮೌಳೀಶ್ವರ which is still worshipped as the chief deity ಶೃಂಗೇರಿ ಮಠ is also said to have been presented to ವಿದ್ಯಾರಣ್ಯ by his direct ಗುರು ರೇವಣಸಿದ್ಧ we know, is a well known Shaiva teacher whome Veerashaivas still claim as one of their earli st Acharyas.

2) The Keladi chiefs who were mostly followers of the Veerashaiva religion were devout adherents of the ಶೃಂಗೇರಿ ಶಂಕರಾಚಾರ್ಯರ ಮಠ Perhaps for the same reason viz., that ಶಂಕರಾಚಾರ್ಯರು were the followers of the ರೇವಣಸಿದ್ಧ ಸಂಪ್ರದಾಯ.

3) Ths explains perhaps why in the Advaita Mutt of Sringeri there is still a greater bias towards Shaivism and Shiva worship than towards Vaishnavism and Krishna worship ಎಂದು ಬರೆದಿದ್ದಾರೆ. ಶ್ರೀ ಕೃಷ್ಣಶಾಸ್ತ್ರಿಗಳಂತಹ ಹಿರಿಯ ನುರಿತ ಸಂಶೋಧಕರಿಗೆ. ಶ್ರೀ ವಿದ್ಯಾರಣ್ಯರ ಗುರು ರೇವಣ ಸಿದ್ಧರಲ್ಲ, ಶೃಂಗೇರಿಯ ಸಂಪ್ರದಾಯ ರೇವಣಸಿದ್ಧರ ಸಂಪ್ರದಾಯವಲ್ಲ, ಎಂದು ಅರಿವಾಗದಿದ್ದುದು ಆಶ್ಚರ್ಯಕರ ಸಂಗತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಲ್ಲುತ್ತಿರುವುದೂ ಅಷ್ಟೇ ವಾಸ್ತವಿಕ ಸಂಗತಿಯಾಗಿದೆ. ಅವುಗಳೊಡನೆ ಶ್ರೀ ರತ್ನಗರ್ಭಗಣಪತಿಗೂ ಶ್ರೀ ಚಕ್ರಕ್ಕೂ ಪೂಜಾದಿಗಳು ಸಲ್ಲುತ್ತಿವೆ. ಶ್ರೀ ಶಂಕರಾಚಾರ್ಯರು ಪರಶಿವನ ಅವತಾರವೆಂದೂ ಅವರ ಜನನಕ್ಕೆ ಮುನ್ನ ಶ್ರೀಶಿವಗುರು ಮತ್ತು ಸತಿ ಆರ್ಯಾಂಬೆಯರು ಕಾಲಟಿಯ ಹತ್ತಿರದಲ್ಲಿಯೇ ಇದ್ದ ವೃಷಭಾಚಲಕ್ಕೆ ಹೋಗಿ ಅಲ್ಲಿ ಶ್ರೀ ಚಂದ್ರಮೌಳಿಯಾದ ವೃಷಭಾಚಲೇಶ್ವರನ ಸೇವೆಮಾಡಿದರೆಂದು ಶಂಕರವಿಜಯಗಳಿಂದ ವ್ಯಕ್ತಪಡುತ್ತದೆ.

ಶ್ರೀ ಶಂಕರರು ನಿರೂಪಿಸಿದ ಅದ್ವೈತಸಿದ್ಧಾಂತದಲ್ಲಿ ಸಂಪೂರ್ಣ ಶ್ರದ್ಧಾವಿಶ್ವಾಸಗಳನ್ನೂ ನಂಬಿಕೆಯನ್ನೂ ಹೊಂದಿರುವ ಶೃಂಗೇರಿ ಆಚಾರ್ಯರುಗಳು ಶಂಕರರಂತೆಯೇ ತಾವೂ ಸಹ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ಮಾಡುತ್ತಿದ್ದಾರೆ. ಶ್ರೀ ನೃಸಿಂಹ ಸಾಲಿಗ್ರಾಮದ ಪೂಜೆಯನ್ನೂ ಶ್ರೀಚಕ್ರಾರ್ಚನೆಯನ್ನೂ ಮಾಡುತ್ತಿದ್ದಾರೆ. ಶೃಂಗೇರಿ ಗುರುಗಳು ಶಿವಪೂಜೆ ಮಾಡುವುದರಿಂದ ಶೈವರೂ ಅಲ್ಲ. ಶ್ರೀಚಕ್ರಾರ್ಚನೆ ಮಾಡುವುದರಿಂದ ಶಾಕ್ತರೂ ಅಲ್ಲ, ನೃಸಿಂಹೋಪಾಸಕರಾದುದರಿಂದ ವೈಷ್ಣವರೂ ಅಲ್ಲ. ಅವರು ಶ್ರೀಶಂಕರರು ನಿರೂಪಿಸಿದ ನಿರ್ಗುಣ ನಿರಾಕಾರ ಚೈತನ್ಯವನ್ನೇ ಆರಾಧಿಸುತ್ತಿದ್ದಾರೆ. ಈಶ್ವರ ಲಿಂಗವೊಂದನ್ನೇ ಪ್ರತ್ಯೇಕವಾಗಿ ಆರಾಧಿಸುತ್ತಿಲ್ಲ. ಶೃಂಗೇರಿ ಪೀಠಕ್ಕೆ ಆದಿಯಿಂದಲೂ 'ಶಾರದಾಪೀಠ' ಎಂಬ ಹೆಸರು ಪ್ರಖ್ಯಾತವಾಗಿದೆ. ಮಠದ ಶ್ರೀಮುಖಗಳಲ್ಲಿ "ನಾರಾಯಣ ಸ್ಮರಣ ಪೂರ್ವಕವಾದ ಆಶೀರ್ವಾದಗಳು" ಎಂದೇ ಇಂದಿಗೂ ವ್ಯವಹರಿಸುತ್ತಾರೆ. ಅಲ್ಲಿನ ಆಚಾರ್ಯರಿಗೆ ಉಪದಿಷ್ಟವಾಗುವ ಹಲವಾರು ಮಂತ್ರಗಳಲ್ಲಿ "ನೃಸಿಂಹಮಂತ್ರ"ವೂ ಒಂದಾಗಿದೆ. ಈ ಆಚಾರ್ಯರುಗಳಲ್ಲಿ ವಿಷ್ಣುಪರವಾದ ಹೆಸರುಳ್ಳ ಆಚಾರ್ಯರೇ ಹದಿನೇಳು ಜನ ಇರುವರು ರೇವಣಸಿದ್ಧರ ಸಮಕಾಲೀನರಾಗಿದ್ದ ಶೃಂಗೇರಿಯ ಆಚಾರ್ಯರ ಹೆಸರು ವಿಷ್ಣುಪರವಾದ ಹೆಸರಿದ್ದ ಶ್ರೀ ನಿಂಹಗಿರಿಯವರೆಂಬು (೧೧೩೮–೧೧೫೮) ದಾಗಿದ್ದು, ಅವರು ತಪೋನುಷ್ಠಾನ ನಡೆಸುತ್ತಿದ್ದ ಸ್ಥಳವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿಂಹಗಿರಿ ಅಥವಾ ಹಳೇ ಶೃಂಗೇರಿ ಎಂಬ ಅಗ್ರಹಾರವು ಶೃಂಗೇರಿಯ ನೈಋತ್ಯದಿಕ್ಕಿನಲ್ಲಿ ಸುಮಾರು ಅರ್ಧ ಮೈಲಿ ಸಮೀಪದಲ್ಲಿಯೇ ಇದೆ. ೫೩

ಆದ್ದರಿಂದ ಶೃಂಗೇರಿ ಗುರುಗಳು ಕೇವಲ ಈಶ್ವರಲಿಂಗವೊಂದನ್ನೇ ಅರ್ಚನೆ ಮಾಡುತ್ತಿರುವರೆಂದೂ ಅವರ ಒಲವು ಶೈವಮತದಕಡೆಗೆ ಇದೆ ಯೆಂದೂ ಹೇಳುವುದು ಅವಾಸ್ತವಿಕ ಕಲ್ಪನೆ. ಶೃಂಗೇರಿ ಗುರುಗಳಿಗೆ ಜಗದ್ಗುರುಗಳೆಂಬ ಹೆಸರು ಅನ್ವರ್ಥವಾಗಿದ್ದು ಯಾರೇ ಆಗಲಿ ಅವರಲ್ಲಿ ಜ್ಞಾನೋಪದೇಶಕ್ಕೆ ಬಂದಲ್ಲಿ ಬಂದವರ ಅರ್ಹತೆ ಯೋಗ್ಯತೆಯನ್ನೂ ಅರಿತು ಆತನಿಗೆ ನಿರ್ಗುಣೋಪಾಸನೆಯನ್ನೋ ಸಗುಣೋಪಾಸನೆಯನ್ನೋ ಬೋಧಿಸುವರು. ಸಗುಣೋಪಾಸನೆಯಲ್ಲಿ ಶಿಷ್ಯರ ಒಲವು ಭಗವಂತನ ಯಾವ ನಾಮದತ್ತ, ಯಾವ ರೂಪದತ್ತ ಹರಿಯುತ್ತದೆಯೋ ಅದೇ ಪ್ರಕಾರ ಅವರಿಗೆ ಶಿವಮಂತ್ರವನ್ನೋ, ವಿಷ್ಣುಮಂತ್ರವನ್ನೋ, ಶ್ರೀ ಚಕ್ರ ಪೂಜೆಯನ್ನೋ, ಗಣಪತಿ ಮಂತ್ರೋಪಾಸನೆಯನ್ನೋ, ಸೂರ್ಯನಮಸ್ಕಾರವನ್ನೋ ಉಪದೇಶಿಸುವರು. ಎಲ್ಲರಿಗೂ ಒಂದೇ ಮಂತ್ರವನ್ನು ಉಪದೇಶಿಸುವುದಿಲ್ಲ. ಆದರೆ ತಾವು ಮಾತ್ರ ಶ್ರೀ ಶಂಕರರು ಬೋಧಿಸಿದ ಮಹಾವಾಕ್ಯವನ್ನೇ ನಿಧಿಧ್ಯಾಸನ ಮಾಡುವರು. ಶೈವ ಮತ್ತು ವೈಷ್ಣವ ಮತಾಚಾರ್ಯರಲ್ಲಿ ಇದು ಕಂಡುಬರದು. ಅವರು ತಮ್ಮ ತಮ್ಮ ಮತಾನುಸಾರ ಶಿವ, ವಿಷ್ಣು ಪೂಜೆಯನ್ನು ಮಾತ್ರ ಮಾಡುತ್ತಾರೆ. ಅದೊಂದೇ ಸರ್ವಶ್ರೇಷ್ಠವೆಂದು ಇತರರಿಗೂ ಬೋಧಿಸುತ್ತಾರೆ.

ಶೈವರು ವಿಷ್ಣುವನ್ನೂ ವೈಷ್ಣವರು ಶಿವನನ್ನೂ ಆರಾಧಿಸುವುದಿಲ್ಲ. ಏಕಂ ಸತ್ ವಿಪ್ರಾ ಬಹುಧಾವದಂತಿ ಎಂಬುದನ್ನು ಆದರಿಸಿ, ಅನುಸರಿಸುವವರು ಶ್ರೀ ಶಂಕರಾಚಾರ್ಯರ ಅನುಯಾಯಿಗಳು ಮಾತ್ರವೇ.

ಶ್ರೀ ರೇವಣಸಿದ್ಧರೆಂಬೊಬ್ಬ ಪ್ರಸಿದ್ಧ ವೀರಶೈವಮತಾಚಾರ್ಯರು ಆಗಿ ಹೋದರು. ಅವರ ಕಾಲ ಹನ್ನೊಂದನೆಯ ಶತಮಾನ. ಅವರೇ ಚಂದ್ರ

---

೫೩ ಅಲ್ಲಿಯೇ ಶ್ರೀವಿದ್ಯಾಶಂಕರರ ಕಾಲದಲ್ಲಿ (1229-1333) ಪ್ರತಿಷ್ಠಿತವಾದ ಶ್ರೀ ಚತುರ್ವಿದ್ಯೇಶ್ವರ ಮೂರ್ತಿಯ ಅಪರೂಪವಾದ ದಿವ್ಯ ಲಿಂಗವಿರುವುದು.

Sri Vidyabharathi Book Centre, Sringeri

CC-0. In Public Domain. Digitized by eGangotri

ಮೌಳೀಶ್ವರಲಿಂಗವನ್ನು ಶ್ರೀಶಂಕರರಿಗೋ, ಶ್ರೀವಿದ್ಯಾರಣ್ಯರಿಗೋ ಕೊಟ್ಟವರು ಎಂದು ತಪ್ಪಾಗಿ ಗ್ರಹಿಸಿದವರು, ವಾಸ್ತವಾಂಶವನ್ನು ಗಣಿಸದೇ ಹೋದರು. ಅವರು ಆ ಚಂದ್ರಮೌಳೀಶ್ವರನನ್ನು ಅರ್ಚಿಸುವವರು ಶೈವರೇ ಆಗಿರಬೇಕೆಂದು ಊಹಿಸಿ ತಮ್ಮ ಕಲ್ಪನೆಗೆ ರೆಕ್ಕೆಕೊಟ್ಟಿದ್ದಾರೆ. ಚಂದ್ರಮೌಳೀಶ್ವರ ಲಿಂಗಕ್ಕೂ ರೇವಣಸಿದ್ಧರಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಈಗಾಗಲೇ ಸ್ಪಷ್ಟಗೊಳಿಸಿದ್ದೇವೆ. ರೇವಣಸಿದ್ಧರೆಂಬೊಬ್ಬರು ಹದಿನಾಲ್ಕನೆಯ ಶತಮಾನದಲ್ಲಿದ್ದರು. ಅವರು ಶೈವಬ್ರಾಹ್ಮಣ ಗೃಹಸ್ಥರು. ಆಯುರ್ವೇದ ಪಂಡಿತರು. ವೀರಶೈವಸಂಪ್ರದಾಯದವರಲ್ಲ. ಅವರು ಶ್ರೀ ವಿದ್ಯಾರಣ್ಯರ ದರ್ಶನ ಮಾಡಿ ಲಿಂಗವೊಂದನ್ನು ಕೃತಜ್ಞತಾದ್ಯೋತಕವಾಗಿ ಅರ್ಪಿಸಿದರು. ಅವರ ಹೆಸರೂ ಬಾಳೆಹಳ್ಳಿಯ ರೇವಣಸಿದ್ಧರ ಹೆಸರೂ ಒಂದೇ ಆಗಿರುವುದು ಗೊಂದಲಕ್ಕೆ ಕಾರಣ. ವಿದ್ಯಾರಣ್ಯರು ತಮ್ಮ ಕೃತಿಗಳಲ್ಲಿ ಎಲ್ಲಿಯೂ ರೇವಣರೆಂಬುವರೊಬ್ಬ ಗುರುವಿದ್ದಂತೆ ಹೇಳಿಕೊಂಡಿಲ್ಲ. ಆದ್ದರಿಂದ ರೇವಣರು ವಿದ್ಯಾರಣ್ಯರ ಗುರುವೆನ್ನುವುದು ಕೇವಲ ಮಿಥ್ಯಾ ಕಲ್ಪನೆ. ಈ ರೇವಣ ಎಂಬ ಹೆಸರಿನ ಬಗೆಗೆ ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸೋಣ.

ಇನ್ನು ರೇವಣಸಿದ್ಧ ಸಂಪ್ರದಾಯವೆಂದರೇನು ?

ರೇವಣಸಿದ್ಧ ಸಂಪ್ರದಾಯವು ಪ್ರಧಾನವಾಗಿ ವೀರಶೈವಾಗಮನವನ್ನು ಅವಲಂಬಿಸಿದೆ. ಅದರಲ್ಲಿ ವೇದಾನುಸಾರಿಯಾದ ತತ್ವಗಳು ಹೇರಳವಾಗಿದ್ದರೂ, ಶ್ರೀ ಶಂಕರಾಚಾರ್ಯರ ಸಂಯಕ್‌ದೃಷ್ಟಿಯ ಅದ್ವೈತ ತತ್ವ "ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾ ಪರಃ" ಎಂಬುದಕ್ಕೆ ಅದು ಹೊರತಾಗಿದೆ ಮತ್ತು ಶಂಕರರ ಸ್ಮಾರ್ತ ಸಂಪ್ರದಾಯದವರು ನಂಬಿರುವ "ಏಕಂ ಸತ್ ವಿಪ್ರಾ ಬಹುಧಾವದಂತಿ" ಎಂಬುದಕ್ಕೂ ಹೊರತಾಗಿದೆ. ಅದು ಮುಖ್ಯವಾಗಿ ದ್ವೈತತತ್ತ್ವವನ್ನು ನಿರೂಪಿಸುವ ಭಾವನಾ ಪ್ರಧಾನವಾದ ಒಂದು ಪಂಥ, ವೈಷ್ಣವ ಶ್ರೀವೈಷ್ಣವ ಮತಗಳಂತೆ. ಅದರ ದರ್ಶನದ ಪ್ರಕಾರ ದೇವರಲ್ಲಿ ತರತಮ ಭಾವಗಳುಂಟು. ರುದ್ರನಿಂದ ವಿಷ್ಣು, ವಿಷ್ಣುವಿನಿಂದ ಬ್ರಹ್ಮ, ಈ ರೀತಿ ಅಲ್ಲಿ ಸೃಷ್ಟಿ ಕ್ರಮವಿದೆ. ಇತರ

Sri Vidyabharathi Book Centre, Sringeri

CC-O. In Public Domain. Digitized by eGangotri
ಸಾಮಾನ್ಯ ಜೀವರುಗಳಿಗಿಂತ ವಿಷ್ಣು ಮತ್ತು ಬ್ರಹ್ಮರು ಉತ್ತಮರಾದ ದೇವತೆಗಳು. ಅವರಿಗೆ ಮೋಕ್ಷಕೊಡುವ ಅಧಿಕಾರವಿಲ್ಲ, ಈ ದೇವತೆಗಳಿಗೆ ಧರ್ಮಾರ್ಥಕಾಮಗಳನ್ನೀಯುವ ಸಾಮರ್ಥ್ಯ ಬಂದಿರುವುದು ಪರಶಿವನ ಅನುಗ್ರಹದಿಂದಲೇ ವಿನಾ ಸ್ವಶಕ್ತಿಯಿಂದ ಅಲ್ಲ. ಆದ್ದರಿಂದ ಮೋಕ್ಷಾಪೇಕ್ಷಿಗಳಾಗಿರುವವರೂ ವೀರಶೈವ ಮತಾನುಷ್ಠಾನಪರರೂ ಆದಂತಹವರು ಈ ದೇವತೆಗಳನ್ನು ಪೂಜಿಸಬೇಕಾದುದಿಲ್ಲ. ಈ ದೇವತೆಗಳು ಪರಶಿವನ ಅಧೀನರು ಆತನ ಆಜ್ಞಾಪಾಲಕರು. ಈ ಶೈವದರ್ಶನದ ಪ್ರಕಾರ ಸೃಷ್ಟಿ, ಸ್ಥಿತಿ, ಸಂಹೃತಿ, ತಿರೋಧಾನ ಮತ್ತು ಅನುಗ್ರಹ ಎಂಬ ಸ್ವಶಕ್ತಿಯಿಂದಾದ ಅವಸ್ಥಾಭೇದದಿಂದ ಪರಶಿವನು ಈಶಾನಾದಿ ಐದು ಅವಸ್ಥೆಯುಳ್ಳವನು. ಈ ಪಂಥದಲ್ಲಿ ಲಿಂಗಧಾರಣೆಯು ಅವಶ್ಯಕ ೫೪. ಇವಾವುವೂ ಶ್ರೀ ಶಂಕರರ ವೈದಿಕ ಶ್ರೌತಸ್ಮಾರ್ತ ಸಂಪ್ರದಾಯದಲ್ಲಿ ಇಲ್ಲವೆನ್ನುವುದು ಸುಸ್ಪಷ್ಟ.

ಶ್ರೀ ಶಾಂಕರ ಸಂಪ್ರದಾಯದ ಮೂಲ ಕೇಂದ್ರವಾದ ಶೃಂಗೇರಿಯಲ್ಲಿ ಶೈವ ಅಥವಾ ವೀರಶೈವ ಮತವನ್ನು ಸೂಚಿಸುವ ಪಂಚಾಚಾರ್ಯರ

---

೫೪. ಶ್ರೀಪತಿ ಪಂಡಿತನು (1120) ವೀರಶೈವಮತದ ತತ್ವಗಳನ್ನು ಪ್ರತಿಪಾದಿಸುತ್ತಾ ಹೀಗೆ ಬರೆದಿದ್ದಾನೆ.

ನಿಗಮಾಗಮೋಭಯ ವೇದಾಂತ ಪ್ರತಿಪಾದಿತ
ಭಕ್ತಿ, ಕ್ರಿಯಾ, ಜ್ಞಾನಕಾಂಡತ್ರಯ ವಿಹಿತ
ಸ್ಥೂಲಸೂಕ್ಷ್ಮ ಚಿದಚಿತ್ ಪ್ರಪಂಚ ಪ್ರಕಾಶ
ಷಟ್ ಸ್ಥಲ ಪರಶಿವ ಸಾಕ್ಷಾತ್ಕಾರ ಕಾರಣ
ಬಹುಜನ್ಮಕೃತ ಯಜನ ಯಾಜನ ತಪೋಧ್ಯಾನಾದ್ಯನೇಕ
ಪುಣ್ಯ ಪೂರ್ವ ಫಲಕ,
ಶರೀರ ತ್ರಯ ಮಲವಿ ವಿಧ್ವಂಸಕ
ಕಾರುಣ್ಯ, ಕಲ್ಯಾಣ, ಕೈವಲ್ಯ ವಿಭೂತಿತ್ರಯ ಪ್ರದಾಯಕ
ಅಷ್ಟಾವರಣ, ಪಂಚಾಚಾರ್ಯ ಸದ್ಗುರು ಕರುಣಾಕಟಾಕ್ಷ ಲಬ್ಧ
ಶಕ್ತಿಪಾತಾದ್ಯವಚ್ಛಿನ್ನ
ಪರಶಿವೇಷ್ಟಲಿಂಗಧಾರಣಾತ್ಮಕ ಪಾಶುಪತದೀಕ್ಷಾ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಭಾವಕ್ಕಾಗಲಿ, ಅಷ್ಟಾವರಣಕ್ಕಾಗಲೀ, ಷಟ್‌ಸ್ಥಲಸಿದ್ಧಾಂತಕ್ಕಾಗಲೀ, ಇಷ್ಟಲಿಂಗಧಾರಣಕ್ಕಾಗಲೀ ಅವಕಾಶವಿಲ್ಲವೆನ್ನುವುದು ಸುಸ್ಪಷ್ಟ. ಶೃಂಗೇರಿಗೆ ಮಾರ್ಗದರ್ಶನಕ್ಕಾಗಿ ಹೋದ ವೈಷ್ಣವರು, ಶ್ರೇಷ್ಠ ವೈಷ್ಣವರಾಗಿಯೂ, ಶೈವರು, ಶ್ರೇಷ್ಠ ಶೈವರಾಗಿಯೂ, ಶಾಕ್ತರು, ಶ್ರೇಷ್ಠ ಶಾಕ್ತರಾಗಿಯೂ, ಅದ್ವೈತಿಯು ಶ್ರೇಷ್ಠ ಅದ್ವೈತಿಯಾಗಿಯೂ ಮಾರ್ಪಡಬಹುದೇ ವಿನಾ ಶೈವಮತಾನುಯಾಯಿಗಳಾಗಿ ಮಾರ್ಪಡಲಾರರು. 'ಏಕಂ ಸತ್ ವಿಪ್ರಾ ಬಹುಧಾವದಂತಿ' ಎಂಬ ಶ್ರೇಷ್ಠತಮ ವೈದಿಕ ತತ್ತ್ವವನ್ನು ತ್ರಿಕರಣಪೂರ್ವಕವಾಗಿ ನಂಬಿರುವ ಆಚಾರ್ಯರು ಅದಕ್ಕೆ ವಿರುದ್ಧವಾಗಿ ಎಂದಾದರೂ ವರ್ತಿಸುವುದುಂಟೆ ? ಶ್ರೀ ಶಾಂಕರ ಸಂಪ್ರದಾಯದ ಸ್ಮಾರ್ತರೂ - ಶೃತಿ ಸ್ಮೃತಿಗಳನ್ನು ಅನುಸರಿಸುವವರೂ ಸ್ಮಾರ್ತರೂ ಶೈವರೂ ಮತ್ತು ವೀರಶೈವರೂ ಭಸ್ಮಲೇಪನ, ರುದ್ರಾಕ್ಷಧಾರಣ ಇವುಗಳನ್ನು ಸಮಾನವಾಗಿ ಅಂಗೀಕರಿಸಿರುವುದರಿಂದ ಅನೇಕರು ವಾಸ್ತವತೆಯನ್ನು ಅರಿಯದೇ ಶೃಂಗೇರೀ ಮಠವು ಶೈವರ ಮಠವೆಂದೂ, ರೇವಣಸಿದ್ಧ ಸಂಪ್ರದಾಯಕ್ಕೆ ಸೇರಿದ್ದೆಂದೂ ಭ್ರಮಿಸಿರುವರು.

೧೨ ಶ್ರೀ ಶಂಕರರ ಸಂಪ್ರದಾಯ

ಶ್ರೀ ಶಂಕರಾಚಾರ್ಯರಾಗಲೀ ಅಥವಾ ಶೃಂಗೇರಿಯ ಅವರ ಶಿಷ್ಯಪರಂಪರೆಯಾಗಲೀ, ಯಾರೂ ರೇವಣಸಿದ್ಧರ ಸಂಪ್ರದಾಯಕ್ಕೆ ಸೇರಿದವರಲ್ಲವೆಂಬುದನ್ನು ಸ್ಪಷ್ಟಪಡಿಸಿದೆವು. ಹಾಗಾದರೆ ಶ್ರೀ ಶಂಕರರ ಸಂಪ್ರದಾಯವು ಯಾವುದು ? ಈ ಸಂದರ್ಭದಲ್ಲಿ ಅದನ್ನು ಸ್ವಲ್ಪ ಮಟ್ಟಿಗೆ ವಿವೇಚನೆ ಮಾಡುವುದು ವಿಹಿತ.

ಶ್ರೀ ಶಂಕರರ ಕಾಲದಲ್ಲಿ, ಈ ದೇಶದಲ್ಲಿ ಧಾರ್ಮಿಕ ಕ್ಷೋಭೆಯುಂಟಾಗಿತ್ತು. ಆಗಮಗಳ ಮತ್ತು ಪುರಾಣಗಳ ಪ್ರಬಲ ಆಧಾರವನ್ನು ಹೊಂದಿದ್ದ ಪಾಂಚರಾತ್ರ, ಪಾಶುಪತ, ಶಾಕ್ತ (ವೈಷ್ಣವ, ಶೈವ, ದೇವೀ) ಮತಗಳೂ, ತಾಂತ್ರಿಕ ಮತಗಳೂ ಪ್ರಬಲವಾಗಿದ್ದವು. ಶಿವನನ್ನು ಭಜಿಸದವರು ಭವಿಗಳು, ವಿಷ್ಣುವೇ ಸರ್ವೋತ್ತಮ, ಆತನ ಪೂಜೆ ಮಾಡದವರಿಗೆ ಮುಕ್ತಿಯಿಲ್ಲ, ದೇವಿಯು ಎಲ್ಲ ದೇವರಿಗಿಂತ ದೊಡ್ಡ

Sri Vidyabharathi Book Centre, Sringeri

 CC-O. In Public Domain. Digitized by eGangotri

ವಳು, ಆಕೆಯು ಭುಕ್ತಿ, ಮುಕ್ತಿ, ಪ್ರದಾತೆ. ಆಕೆಯ ಉಪಾಸನೆ ಮಾಡಿದವರಿಗೆ ಮಾತ್ರ ಭವಬಂಧನದಿಂದ ಬಿಡುಗಡೆ ಎಂದು ಮುಂತಾಗಿ ತಮ್ಮ ತಮ್ಮ ಮತಗಳ ಆಗ್ಗಳಿಕೆಯನ್ನು ಪ್ರಚಾರಮಾಡುತ್ತಾ, ಆಯಾ ಮತಗಳ ವರಿಷ್ಠರು ತಮ್ಮ ಮತವೇ ಶ್ರೇಷ್ಠವೆಂದೂ, ಇತರ ಮತಗಳು ಕಡಿಮೆ ದರ್ಜೆಯವೆಂದೂ, ಪ್ರಚಾರಮಾಡುತ್ತ ಮತ ಮತಗಳಲ್ಲಿ ಭೇದ ಭಾವವನ್ನು ಬಿತ್ತುತ್ತಿದ್ದರು.

ತಾಂತ್ರಿಕರ ಪ್ರಭಾವವಂತೂ ಈ ಎಲ್ಲ ಮತ ಪಂಥಗಳ ಮೇಲೆಯೂ ಬಿದ್ದಿತ್ತು. ಶಂಖ, ಚಕ್ರ, ಶೂಲ, ಡಮರುಗ ಇತ್ಯಾದಿ ವೈಷ್ಣವ, ಶೈವ ಲಾಂಛನಗಳನ್ನು ಬೆಂಕಿಯಲ್ಲಿ ಕಾಯಿಸಿ ಮುದ್ರಾಧಾರಣೆ ಮಾಡಿ ಕೊಳ್ಳುವುದು, ರಕ್ತ ಗಂಧಾನುಲೇಪನ, ಉಗ್ರರೀತಿಯ ಪೂಜಾವಿಧಾನ, ಇವೆಲ್ಲವೂ ಧಾರ್ಮಿಕ ವಿಧಿಗಳಲ್ಲಿ ಹಾಸುಹೊಕ್ಕಾಗಿದ್ದವು. ಶೈವರಲ್ಲಿ ಕಾಪಾಲಿಕರಂತೂ, ಮನುಷ್ಯರ ಮೂಳೆಗಳ ಸರವನ್ನು ಧರಿಸಿ, ಸ್ಮಶಾನದ ಭಸ್ಮವನ್ನು ಬಳಿದುಕೊಂಡು, ನರಕಪಾಲಗಳಲ್ಲಿ ಭೋಜನ ಮಾಡು ತ್ತಿದ್ದರು. ವಾಮ ಮಾರ್ಗದ ತಾಂತ್ರಿಕರು, ಸಾಧನೆಗೆ ಅತ್ಯಗತ್ಯವಾದ ನೈಷ್ಠಿಕ ಬ್ರಹ್ಮಚರ್ಯವನ್ನು ಬಲಿಗೊಟ್ಟು, ಮದ್ಯ, ಮಾಂಸ, ಮೀನು, ಮುದ್ರಾ, ಮೈಥುನಗಳೆಂಬ ಪಂಚವಿಧ ಪೂಜಾವಿಧಾನವನ್ನು ಅನುಸರಿಸಿ ನೈತಿಕ ಅವನತಿಯಲ್ಲಿ ಬಿದ್ದಿದ್ದರು. ಅಂದಿನ ಶ್ರೀಸಾಮಾನ್ಯರು ಇಂಥವರ ಆದರ್ಶವನ್ನು ಅನುಸರಿಸಬೇಕಾದ ದುಃಸ್ಥಿತಿ ಬಂದೊದಗಿತ್ತು.

ದೇಶವು ರಾಜಕೀಯವಾಗಿ ಛಿದ್ರವಾಗಿ ಹೋಗಿತ್ತು. ಧಾರ್ಮಿಕವಾಗಿ ಕ್ಷತ ವಿಕ್ಷತವಾಗಿತ್ತು. ನೈತಿಕ ನಿಯಮಗಳ ಅನುಷ್ಠಾನವು ತಪ್ಪಿಹೋಗಿ, ಸಮಾಜ ಜೀವನದಲ್ಲಿ ಅನಾಚಾರ ದುರಾಚಾರಗಳೇ ತುಂಬಿಹೋಗಿದ್ದವು. ಇಂತಹ ಜನಾಂಗವನ್ನು ಕಂಡ ಶ್ರೀ ಶಂಕರರು ಅವರ ಉದ್ಧಾರದ ಸಂಕಲ್ಪ ಕೈಗೊಂಡರು. ಅವರು ಹಳೆಯದಾವುದನ್ನೂ ನಾಶಗೊಳಿಸುವ ಕೆಲಸಕ್ಕೆ ತೊಡಗಲಿಲ್ಲ. ನೂತನವಾದ ಮತವನ್ನು ಸ್ಥಾಪಿಸುವ ಅನವಶ್ಯಕ ಸಾಹ-ಸಕ್ಕೂ ಕೈಹಾಕಲಿಲ್ಲ. ಇರುವ ಮತ ತತ್ವಗಳಲ್ಲಿಯೇ ಸುಧಾರಣೆಯನ್ನು ಮಾಡಿ ಮತ್ತು ಆಯಾ ಮತಗಳಲ್ಲಿ ಇದ್ದ, ನಿಷಿದ್ಧವಾದ ಆಚಾರಗಳನ್ನು ಸಮರ್ಥಶಸ್ತ್ರ ಚಿಕಿತ್ಸಕನಂತೆ ತೆಗೆದುಹಾಕಿದರು. ಆಯಾ ಮತದವರು,

Sri Vidyabharathi Book Centre, Sringeri

CC-O. In Public Domain. Digitized by eGangotri

ಆಯಾ ಮತದಲ್ಲಿಯೇ ಇದ್ದು, ಶಾಸ್ತ್ರವಿಹಿತವಾದ ಜೀವನವನ್ನು ನಡೆಸಲು ಧರ್ಮಮಾರ್ಗ ತೋರಿಸಿಕೊಟ್ಟರು. ಅವರು ಶೈವ, ವೈಷ್ಣವ, ಶಾಕ್ತ, ಸೌರ, ಗಾಣಾಪತ್ಯ ಮತ್ತು ಕಾಪಾಲಿಕ ಮತಗಳನ್ನು ಅವೈದಿಕ ಪ್ರಭಾವ ದಿಂದ ಮುಕ್ತಗೊಳಿಸಿ, ಪುನಃ ವೈದಿಕಧರ್ಮದ ಆಧಾರದ ಮೇಲೆ ಅವು ಗಳನ್ನು ಸ್ಥಾಪಿಸಿದರು. ಈ ಸುಧಾರಣೆಗಳನ್ನು ಅವರು ಶ್ರುತಿ ಸ್ಮೃತಿಗಳ ಆಧಾರದ ಮೇಲೆ ಮಾಡಿದರು.*

ಎಲ್ಲರಿಗೂ ನಿರ್ಗುಣ ಬ್ರಹ್ಮೋಪಾಸನೆ ಸಾಧ್ಯವಿಲ್ಲ. ಮಾನವ ರಲ್ಲಿ ವಿವಿಧ ರೀತಿಯ ಮನಃ ಪರಿಪಾಕ, ಬುದ್ಧಿಶಕ್ತಿ, ಗ್ರಹಣಶಕ್ತಿ ಯಿರುತ್ತದೆ. ಎಲ್ಲರಿಗೂ ಒಂದೇವಿಧವಾದ ಉಪಾಸನೆ, ಸಾಧನೆ, ಅನುಷ್ಠಾನವನ್ನು ವಿಧಿಸುವುದು ಪ್ರಯೋಜನಕಾರಿಯಾಗಲಾರದು. ಅದು ಸಾಧ್ಯವೂ ಆಗಲಾರದು. ಅಂಥವರಿಗಾಗಿ ಶ್ರೀ ಶಂಕರರು ಸಗುಣೋ ಪಾಸನೆಯನ್ನು ಉಪದೇಶಿಸಿದರು. ಅದರಲ್ಲಿ ಶ್ರೀಚಕ್ರಪೂಜೆ, ಪಂಚಾ ಯತನ ಪೂಜಾಪದ್ಧತಿಯನ್ನು ರೂಢಿಗೆ ತಂದರು. ಶಿವ, ವಿಷ್ಣು, ದೇವಿ, ಸೂರ್ಯ, ಗಣಪತಿ ಮುಂತಾದ ದೇವತೆಗಳನ್ನು ಶ್ರದ್ಧಾ ಭಕ್ತಿಯಿಂದ, ಪೂಜಿಸಿ ಮನಃಶುದ್ಧಿಯನ್ನು ಪಡೆದುಕೊಂಡು ಅನಂತರ ವೇದಾಂತದ ಗಹನ ತತ್ತ್ವಗಳನ್ನು ಅರಿಯಬಹುದೆಂದು ಬೋಧಿಸಿದರು. ಈ ದೇವತಾ ಮೂರ್ತಿಗಳಲ್ಲಿ ಒಂದು ಹೆಚ್ಚು, ಒಂದು ಕಡಿಮೆ ಎಂಬ ತಾರತಮ್ಯವಿಲ್ಲ. ಎಲ್ಲವೂ ಸರ್ವ ವ್ಯಾಪಿಯಾದ, ನಿತ್ಯಚೈತನ್ಯಸ್ವರೂಪಿ ಯಾದ ಪರಬ್ರಹ್ಮ ತತ್ತ್ವದ ಪ್ರತೀಕ ಎಂಬುದನ್ನು ಶ್ರುತಪಡಿಸಿದರು.

---

*ಈ ಕಾರಣದಿಂದಲೇ ಶ್ರೀಶಂಕರರ ಅನುಯಾಯಿಗಳು 'ಸ್ಮಾರ್ತ' ಎಂಬ ಅಭಿದಾನವನ್ನು ಪಡೆದುದು. ಉಳಿದ ವೈಷ್ಣವ, ಶಾಕ್ತರಲ್ಲಿ, ಶೈವರಲ್ಲಿ, ಆಗಮಗಳ ಪ್ರಭಾವ ಹೆಚ್ಚಾಗಿದ್ದು ಶಂಕರರ ಅನುಯಾಯಿ ಗಳ ಆಚಾರ ಸಂಪ್ರದಾಯಗಳೆಲ್ಲವೂ ಶ್ರುತಿ, ಸ್ಮೃತಿಯನ್ನೇ ಅವ ಲಂಬಿಸಿವೆ. ಆಚಾರ್ಯರ ಶಿಷ್ಯರು ಶಿವ, ವಿಷ್ಣು, ದೇವಿಯರಲ್ಲಿ ಭೇದ ವೆಣಿಸುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆವರವರಿಗೆ ಪ್ರಿಯವಾದ ಇಷ್ಟದೇವತೆಯನ್ನು ಪೂಜಿಸಬಹುದು. ಮುಮುಕ್ಷುವು ತನ್ನ ಇಷ್ಟದೈವದಲ್ಲಿಯೇ ಎಲ್ಲ ದೇವರನ್ನು ಕಾಣಬೇಕು, ಎಂಬುದನ್ನು ಬೋಧಿಸಿದರು. ಈ ದಿಸೆಯಲ್ಲಿ ಆಚಾರ್ಯರು ರಚಿಸಿರುವ ಅನೇಕ ಸ್ತೋತ್ರಗಳು, ಭಕ್ತರ ಹೃನ್ಮನಗಳನ್ನು ಶುದ್ಧಗೊಳಿಸಿ, ಬುದ್ಧಿಗೆ ಬೆಳಕನ್ನು ನೀಡುತ್ತವೆ.

ತಮ್ಮ ಅನುಯಾಯಿಗಳಿಗೆ ಆಚಾರ್ಯರು ಹಾಕಿಕೊಟ್ಟಿರುವ ಈ ಸಂಪ್ರದಾಯ ವೇದಶಾಸ್ತ್ರಪ್ರಣೀತವಾದದು. 'ಏಕಂ ಸತ್ ವಿಪ್ರಾ ಬಹುಧಾವದಂತಿ' ಎಂಬ ಋಗ್ವೇದವಾಣಿಯ ವ್ಯಾಪ್ತಿಯಲ್ಲಿ ಆಚಾರ್ಯರು ಮುಂದಿನ ಜನಾಂಗಕ್ಕೆ ಭವ್ಯವೂ, ದಿವ್ಯವೂ, ಅನುಷ್ಠಾನ ಸುಲಭವೂ ಆದಂತಹ ಸಂಪ್ರದಾಯವನ್ನು ಹಾಕಿಕೊಟ್ಟರು. ಈ ಸರ್ವಮತ ಸಹಿಷ್ಣುತೆಯ ಸಂಪ್ರದಾಯವನ್ನು ಆಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳ ಯತಿ ಪರಂಪರೆಯವರೂ, ಇತರ ಉಪಮಠಗಳ ಸನ್ಯಾಸಿಗಳೂ, ಅವರ ಶಿಷ್ಯಪರಂಪರೆಯವರೂ ಅನುಸರಿಸಿಕೊಂಡು ಬರುತ್ತಿದ್ದಾರೆ.

ಶೃಂಗೇರಿಯ ಪೀಠಾಧಿಪತಿಗಳು, ಈ ಶ್ರುತಿ, ಸ್ಮೃತಿ ಸಮ್ಮತವಾದ ಸಂಪ್ರದಾಯವನ್ನು ಪಾಲಿಸುತ್ತ, ತಮ್ಮ ಶಿಷ್ಯವೃಂದಕ್ಕೂ ಈ ಸಂಪ್ರದಾಯವನ್ನೇ ಉಪದೇಶಿಸುತ್ತಿದ್ದಾರೆ. ಈ ಕಾರಣದಿಂದಲೇ ಕೆಳದಿಯರಸರು ವೀರಶೈವರಾದರೂ ಶೃಂಗೇರಿಯ ಪೀಠಕ್ಕೆ ಭಕ್ತಿ ಗೌರವದಿಂದ ನಡೆದುಕೊಳ್ಳುತ್ತಿದ್ದುದು, ಶೃಂಗೇರಿಯ ಆಚಾರ್ಯರು ಪಂಚಾಯತನ ಪೂಜೆಯನ್ನು ಮಾಡುತ್ತಾರೆ. ಶ್ರೀ ರಾಮನವಮಿ, ಶ್ರೀನೃಸಿಂಹ ಜಯಂತಿ, ಶ್ರೀ ಕೃಷ್ಣಜನ್ಮಾಷ್ಟಮಿಗಳನ್ನು ಆಚರಿಸುತ್ತಾರೆ. ಶಿವರಾತ್ರಿಯ ನಾಲ್ಕು ಯಾಮಗಳೂ ಶ್ರೀ ಚಂದ್ರಮೌಳೀಶ್ವರನಿಗೆ ಅಭಿಷೇಕ ಮಾಡುವಂತೆಯೇ, ಶ್ರೀ ವಾಮನ ಜಯಂತಿಯಂದೂ, ರಾತ್ರಿ ನಾಲ್ಕು ಯಾಮಗಳಲ್ಲಿಯೂ, ಪೂಜೆಯನ್ನು ನೆರವೇರಿಸುತ್ತಾರೆ. ನವರಾತ್ರಿಯಲ್ಲಿ ಅವರು ವಿಶೇಷವಾಗಿ ದೇವಿಯ ಆರಾಧನೆಯನ್ನು ನಡೆಸುತ್ತಾರೆ. ಶೃಂಗೇರಿಯ ಆಚಾರ್ಯರು ಶಿವ, ವಿಷ್ಣು, ದೇವಿಯರಲ್ಲಿ ಭೇದವನ್ನಾಗಲೀ, ತಾರತಮ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನಾಗಲೀ ಇಟ್ಟಿಲ್ಲ. ಯಾತ್ರಾಕಾಲದಲ್ಲಿ ಅವರು, ಎಲ್ಲ ದೇವಾಲಯ ಗಳಿಗೂ ಸಂದರ್ಶನವಿತ್ತು, ಶೈವ ವೈಷ್ಣವ ದೇವತಾ ಮೂರ್ತಿಗಳನ್ನು ದರ್ಶನಮಾಡುತ್ತಾರೆ. ಅನೇಕ ಆಲಯಗಳಲ್ಲಿ ಸ್ವತಃ ಅವರೇ ಪೂಜಾದಿ ಗಳನ್ನು ನಡೆಸುತ್ತಾರೆ.

ಮಳೆಗಾಲದಲ್ಲಿ ಬರುವ ಆಷಾಢ ಶುದ್ಧ ಪೂರ್ಣಿಮೆಯಂದು ಚಾತು ರ್ಮಾಸ್ಯ ಸಂಕಲ್ಪವನ್ನು ಕೈಗೊಂಡು ಶ್ರೀ ವ್ಯಾಸಮಹರ್ಷಿಗಳಿಂದ ಆರಂಭಿಸಿ ತಮ್ಮ ಗುರುಗಳವರಿಗೆ ಬಂದಿರುವ ಗುರು ಪರಂಪರೆಯನ್ನೆಲ್ಲಾ* ಭಕ್ತಿ ಶ್ರದ್ಧೆಯಿಂದ ವಂದಿಸುತ್ತಾರೆ.

ಬ್ರಹ್ಮವೊಂದೇ ಸತ್ಯ, ಜಗತ್ತು ಮಿಥ್ಯ, ಎಂದರೆ ತೋರಿಕೆ, ಜೀವನು ಬ್ರಹ್ಮನೇ ವಿನಾ ಬ್ರಹ್ಮನಿಂದ ಬೇರೆಯಲ್ಲ, ಎಂಬ ಅದ್ವೈತ ಸಿದ್ಧಾಂತವನ್ನು ದೃಢವಾಗಿ ನಂಬಿ ಅದರಂತೆ ನಡೆಯುತ್ತಾರೆ. ಇದು ಸಂಗ್ರಹವಾಗಿ ಶಾಂಕರ ಸಂಪ್ರದಾಯ, ಸರ್ವಜನಸಮ್ಮತವಾದ ಸಂಪ್ರದಾಯ.

ಚತುರಾಮ್ನಾಯ ಪೀಠಗಳ ತಮ್ಮ ಸನ್ಯಾಸೀ ಶಿಷ್ಯಪರಂಪರೆಯವರು ಹೇಗೆ ನಡೆದುಕೊಳ್ಳಬೇಕು, ಅವರ ಆಚಾರ ವಿಚಾರ ಹೇಗಿರಬೇಕು ಎಂಬುದನ್ನು ಶ್ರೀ ಶಂಕರಾಚಾರ್ಯರೇ ಸ್ಪಷ್ಟವಾಗಿ ನಿರೂಪಿಸಿ, ಮಹಾನು ಶಾಸನವನ್ನು ‡ ಬರೆದಿಟ್ಟಿದ್ದಾರೆ. ಆದಿ ಪೀಠವಾದ ಶೃಂಗೇರಿ ಯಲ್ಲಾಗಲೀ, ಇತರ ಮೂರು ಪೀಠಗಳಲ್ಲಾಗಲೀ, ನಡೆದು ಬರುತ್ತಿ ರುವ ಸಂಪ್ರದಾಯವು ಈ ಮಹಾನುಶಾಸನಕ್ಕೆ ಅನುಗುಣವಾಗಿದೆ.

೧೩ ಕೆಳದಿಯರಸರು ಮತ್ತು ಶೃಂಗೇರಿ

ಇನ್ನು ವೀರಶೈವರಾದ ಕೆಳದಿಯ ನಾಯಕರು ಶೃಂಗೇರಿ ಮಠಕ್ಕೆ ಶಿಷ್ಯರಾಗಿ ನಡೆದುಕೊಳ್ಳುತ್ತಿದ್ದ ವಿಚಾರ.

---

*ಇದರಲ್ಲಿ ರೇಣುಕ ಅಥವಾ ರೇವಣರು ಬರುವುದಿಲ್ಲ!
ಒಂದನೇ ಅನುಬಂಧವನ್ನು ನೋಡಿ

‡ಮಹಾನುಶಾಸನವನ್ನು ಎರಡನೇ ಅನುಬಂಧದಲ್ಲಿ ಕೊಟ್ಟಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿದ್ಯಾತೀರ್ಥರ ಮತ್ತು ಶ್ರೀ ಭಾರತೀಕೃಷ್ಣತೀರ್ಥರ ತಪಃ ಪ್ರಭಾವದಿಂದಲೂ ಶ್ರೀ ವಿದ್ಯಾರಣ್ಯರ ಅಲೌಕಿಕ ಶಕ್ತಿ ಸಾಮರ್ಥ್ಯಗಳಿಂದಲೂ, ಭಾರತೀಯರ ಪೂರ್ವಪುಣ್ಯಪ್ರಭಾವದಿಂದಲೂ ವಿಜಯನಗರ ಸಾಮ್ರಾಜ್ಯವು ರೂಪಗೊಂಡಿತು. ಅವಕ್ಕೆ ಮೂಲ ಪ್ರೇರಕರಾದ ಈ ತ್ರಿಮೂರ್ತಿಗಳನ್ನು ವಿಜಯನಗರದ ಚಕ್ರವರ್ತಿಗಳು ಅನನ್ಯ ಭಕ್ತಿ ಶ್ರದ್ಧೆಯಿಂದ ಗೌರವಿಸಿದರು. ಅವರ ಕಾಲದಲ್ಲಿ ಮಠಕ್ಕೆ ಅನೇಕ ವಿಧವಾದ ದತ್ತಿಗಳೂ ಸೌಲಭ್ಯಗಳೂ ಲಭಿಸಿದವು. ಅಲ್ಲಿಯವರೆಗೆ ಗುರುಕುಲದಂತೆ ಋಷ್ಯಾಶ್ರಮದಂತೆ ಇದ್ದ ಶೃಂಗೇರಿ ಮಠವು ವಿದ್ಯಾತೀರ್ಥ-ಭಾರತೀತೀರ್ಥ-ವಿದ್ಯಾರಣ್ಯರ ಕಾಲದಲ್ಲಿ ಸಂಸ್ಥಾನವಾಗಿ ಮಾರ್ಪಟ್ಟಿತು. ಈ ತ್ರಿಮೂರ್ತಿಗಳ ಉಪದೇಶ ಬೋಧನೆಗಳಿಂದ ಮತ್ತು ಸ್ವಂತ ಆಚರಣೆಯಿಂದ ದೇಶದಲ್ಲಿದ್ದ ವಿವಿಧ ಮತಗಳಲ್ಲಿ ಪರಸ್ಪರ ಸೌಹಾರ್ದವೂ, ಅನ್ಯಮತ ಸಹಿಷ್ಣುತೆಯೂ ಮೂಡಿದವು. ※※ ಶೃಂಗೇರಿ ಗುರುಗಳ ಸೂಚನೆಯಂತೆ ವಿಜಯನಗರದ ಚಕ್ರವರ್ತಿಗಳು ಎಲ್ಲ ಮತಗಳ ಮಠ ದೇವಸ್ಥಾನಗಳಿಗೂ ದಾನದತ್ತಿಗಳನ್ನು ಕೊಟ್ಟರು.

ವಿಜಯನಗರದ ಚಕ್ರವರ್ತಿಗಳನ್ನು ಅನುಸರಿಸಿಯೇ ಅವರ ಸಾಮಂತರೂ, ಇತರ ರಾಜರೂ, ಪಾಳೆಯಗಾರರೂ ಶೃಂಗೇರಿ ಆಚಾರ್ಯರನ್ನು ತಮ್ಮ ಗುರುಗಳೆಂದು ಗೌರವಿಸುತ್ತಿದ್ದರು. ವಿಜಯನಗರ ಸಾಮ್ರಾಜ್ಯದ ಪತನಾನಂತರ ಪ್ರಬಲರಾದ ಕೆಳದಿಯ ರಾಜರು ಅವರ ಆದರ್ಶವನ್ನೇ! ಅನ್ಯಮತ ಸಹಿಷ್ಣುತೆ, ಗೌರವ, ಆದರ ಭಾವಗಳಲ್ಲಿ ವಿಜಯನಗರದ ದೊರೆಗಳನ್ನೇ ಅನುಸರಿಸಿ ಇತರ ರಾಜರಿಗೂ ಮೇಲ್ಪಂಕ್ತಿಯಾದರು.

ಕೆಳದಿಯ ರಾಜರು ವೀರಶೈವರಾದರೂ ಎಲ್ಲ ಮತಗಳಲ್ಲಿಯೂ ಸಮತ್ವ ಭಾವವನ್ನು ಹೊಂದಿದ್ದ ಆದರ್ಶ ದೊರೆಗಳಾಗಿದ್ದರು, ಶೃಂಗೇರಿ ಪೀಠವು ಸನಾತನ ಧರ್ಮದ ಆಧಾರಸ್ತಂಭವೆಂಬುದನ್ನು ಸ್ಪಷ್ಟವಾಗಿ ಅರಿ

※※ ಶಕ ೧೨೯೦ ರಲ್ಲಿ (ಇಸವಿ ೧೩೬೮) ಶ್ರವಣಬೆಳಗೊಳದಲ್ಲಿ ಜೈನರಿಗೂ ಶ್ರೀ ವೈಷ್ಣವರಿಗೂ ಸ್ನೇಹಸೌಹಾರ್ದದ ಒಪ್ಪಂದವನ್ನು ಮಾಡಿಸಿದ ಚಕ್ರವರ್ತಿ ಬುಕ್ಕರಾಯನ ಶಾಸನ ಇದಕ್ಕೊಂದು ಶ್ರೇಷ್ಠ ನಿದರ್ಶನ-EC. Vol. II (Revised, 1973) No. 475

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಿದ್ದ ಕೆಳದಿಯನಾಯಕರು ಆ ಮಠದ ರಕ್ಷಣೆಗೆ, ಪೋಷಣೆ, ಅಭ್ಯುದಯಗಳಿಗೆ ಎಲ್ಲ ರೀತಿಯಲ್ಲಿಯೂ ನೆರವಾಗಿದ್ದರು. ಶೃಂಗೇರಿ ಆಚಾರ್ಯರ ಆಚಾರ, ತಪಸ್ಸು, ಜ್ಞಾನ, ವೈರಾಗ್ಯ ಇವುಗಳಿಂದ ಆಕರ್ಷಿತರಾದ ಅರಸರು ಎಲ್ಲ ಮತೀಯರಲ್ಲಿಯೂ ಆ ಆಚಾರ್ಯರು ತೋರುತ್ತಿದ್ದ ಸಮತ್ವ ಭಾವವನ್ನೇ ತಾವು ಅನುಸರಿಸುತ್ತಿದ್ದರು.

ಆ ಅರಸರಲ್ಲಿ ಅದ್ವೈತ ಸಿದ್ಧಾಂತದಲ್ಲಿ ಒಲವಿದ್ದವರೇ ಹೆಚ್ಚು ಜನ. ಆದ್ದರಿಂದ ಇವರೆಲ್ಲರೂ ಸ್ವತಃ ವೀರಶೈವರಾಗಿದ್ದರೂ ಅದ್ವೈತ ವೇದಾಂತಾಚಾರ್ಯರಲ್ಲಿ ತುಂಬಾ ಭಕ್ತಿ ಶ್ರದ್ಧೆಯನ್ನು ಹೊಂದಿದ್ದರು. ಶೃಂಗೇರಿಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು (೧೬೨೩-೧೬೬೩) ಕೆಳದಿಯ ಅರಸ ಮೊದಲನೆಯ ವೆಂಕಟಪ್ಪನಾಯಕನಿಗೆ (೧೫೮೬-೧೬೨೯) 'ವೈದಿಕ ಅದ್ವೈತ ಸಿದ್ಧಾಂತ ಪ್ರತಿಷ್ಠಾಪಕ' ಎಂಬ ಬಿರುದನ್ನು ಇತ್ತು ಆಶೀರ್ವದಿಸಿದ್ದರು. ೫೬. ವೆಂಕಟಪ್ಪನಾಯಕನೂ ಆತನ ಅನಂತರ ಬಂದಂತಹ ಇತರ ದೊರೆಗಳೂ ಈ ಬಿರುದನ್ನು ತಮ್ಮ ಬಿರುದಾವಳಿಯಲ್ಲಿ ಹೆಮ್ಮೆಯಿಂದ ಧರಿಸುತ್ತಿದ್ದರು. ಕೆಳದಿಯ ಅರಸರ ಅನೇಕ ಶಾಸನಗಳಲ್ಲಿ ಇದನ್ನು ಕಾಣಬಹುದು.

ಶೃಂಗೇರಿ ಆಚಾರ್ಯರ ಉಪದೇಶದಿಂದ ತುಂಬಾ ಪ್ರಭಾವಿತರಾಗಿದ್ದ ಆ ದೊರೆಗಳು ಅದ್ವೈತ ವೇದಾಂತವನ್ನು ಅಂಗೀಕರಿಸಿ ಅದರಲ್ಲಿ ಶ್ರದ್ಧಾವಂತರಾಗಿದ್ದರು. ರಾಣಿಚೆನ್ನಮ್ಮಾಜಿಯು (೧೬೭೧-೧೬೭೯) ತನ್ನ ಸ್ವೀಕೃತ ಪುತ್ರ ಬಸವಪ್ಪ ನಾಯಕನಿಗೆ (೧೬೯೬-೧೭೧೪) ಕೊಟ್ಟಂತಹ ಅಮೂಲ್ಯ ಉಪದೇಶವೇ ಕೆಳದಿಯ ದೊರೆಗಳು ಶೃಂಗೇರಿ ಗುರುಗಳ ಉಪದೇಶದಲ್ಲಿ ಇಟ್ಟಿದ್ದ ಅನುಪಮ ಅಭಿಮಾನಕ್ಕೆ ಶ್ರೇಷ್ಠ ಉದಾಹರಣೆಯಾಗಿದೆ.೫೭. "ದುರ್ಮಾರ್ಗದಲ್ಲಿ ಪ್ರವೃತ್ತನಾಗಬೇಡ, ಪಾಪಕರ್ಮಗಳಿಂದ ತಪ್ಪಿಸಿಕೋ ಸತ್ಕರ್ಮಗಳನ್ನು ಆಚರಿಸು, ಭಗವಂತನ

---

೫೬ Throne of Transedental Wisdom–P. 48 Author : K. R. Venkataraman. ಗುರುವಂಶಕಾವ್ಯ ಹತ್ತನೆಯ ಸರ್ಗ ಶ್ಲೋಕ ೧೬.

೫೭ T. T. W.–P. 56.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾದವನ್ನು ಧ್ಯಾನಿಸು, ಕರುಣಾಳುವಾಗಿರು, ಆಶ್ರಯಿಸಿ ಬಂದವರನ್ನು ರಕ್ಷಿಸು, ಇತರರನ್ನು ದೂಷಿಸಬೇಡ, ಸಂಯಮವನ್ನು ಅಭ್ಯಸಿಸು, ಹುಟ್ಟು ಸಾವುಗಳೆಂಬ ಚಕ್ರಭ್ರಮಣಕ್ಕೆ ಕಾರಣವಾದ ಆಸೆಗೆ ಪರವಶನಾಗಬೇಡ. ಧರ್ಮದ ಮೂಲತತ್ವಗಳನ್ನು ಚಿಂತನೆಮಾಡು, ಅದ್ವೈತತತ್ವವನ್ನು ಸಾಕ್ಷಾತ್ಕಾರ ಮಾಡಿಕೋ. ವೇದಶಾಸ್ತ್ರ ಪಾರಂಗತರನ್ನು ಗೌರವಿಸು. ಜೀವನವನ್ನು ಸ್ವಪ್ನವೆಂದು ಎಣಿಸಿ "ನಾನಾರು" ಎಂಬುದನ್ನು ಕುರಿತು ಆಲೋಚಿಸು, ಪರಮಾನಂದವನ್ನು ಪಡೆಯಲು ಶಿವನನ್ನು ಧ್ಯಾನಿಸು." ಈ ಬುದ್ಧಿವಾದದ ಮಾತಿನಿಂದ ಕೆಳದಿಯ ರಾಜರು ಶೃಂಗೇರಿಯ ಅದ್ವೈತ ಪೀಠದ ಆಚಾರ್ಯರಿಂದ ಯಾವ ರೀತಿಯಲ್ಲಿ ಪ್ರಭಾವಿತರಾಗಿದ್ದರೆಂಬುದನ್ನು ಮನಗಾಣಬಹುದು.

ಇಮ್ಮಡಿ ಸೋಮಶೇಖರನಾಯಕನ ಕಾಲದಲ್ಲಿ (೧೭೧೪–೧೭೩೯) ಅವನ ಮಂತ್ರಿಯೊಬ್ಬನು ಶೃಂಗೇರಿಯಲ್ಲಿ ವೀರಶೈವ ಮಠವೊಂದನ್ನು ಕಟ್ಟಿಸಿದನು. ಶೃಂಗೇರಿಯಲ್ಲಿ ವೀರಶೈವ ಮಠವೊಂದು ನಿರ್ಮಾಣವಾಯಿತೆಂಬ ವರ್ತಮಾನವು ಪೇಶ್ವೆ ಬಾಜಿರಾಯನಿಗೆ ತಿಳಿಯಲು ಆತನು ಸೋಮಶೇಖರನಾಯಕನಿಗೆ ಪತ್ರ ಬರೆದು ಗುರುಗಳಿಗೆ ಸಂಕೋಚವುಂಟು ಮಾಡುವಂತಹ ಕೆಲಸಮಾಡಬಾರದೆಂದೂ ವೀರಶೈವ ಮಠವನ್ನು ಶೃಂಗೇರಿಯಿಂದ ತೆಗೆಸಬೇಕೆಂದೂ ಕೇಳಿದನು. ಆತನ ಮಾತಿನಂತೆ ಸೋಮಶೇಖರ ನಾಯಕನು ವೀರಶೈವ ಮಠವನ್ನು ಶೃಂಗೇರಿಯಿಂದ ತೆಗೆಸಿದನು. ೫೮

ಕೆಳದಿಯ ಸದಾಶಿವನಾಯಕನಿಂದ ಆರಂಭಿಸಿ, ಕೊನೆಯ ರಾಣಿ ಚೆನ್ನಮ್ಮಾಜಿಯವರೆಗೆ ಎಲ್ಲರೂ ಆಚಾರ್ಯರಲ್ಲಿ ಭಕ್ತಿಶ್ರದ್ಧೆಯಿಂದ ನಡೆದುಕೊಳ್ಳುತ್ತಿದ್ದುದಕ್ಕೆ ಕಾರಣ, ಆ ಆಚಾರ್ಯರ ಅನುಷ್ಠಾನ, ತಪಸ್ಸು, ಜ್ಞಾನ, ವೈರಾಗ್ಯಗಳು ಸರ್ವಮತೀಯರಲ್ಲಿಯೂ ಅವರು ಇಟ್ಟಿದ್ದ ಸಮದೃಷ್ಟಿ ಮತ್ತು ದೊರೆಗಳಿಗಿದ್ದ ಅದ್ವೈತದಲ್ಲಿನ ಒಲವೂ ಕಾರಣವೇ ವಿನಾ ಶೃಂಗೇರಿ ಗುರುಗಳು ಶೈವರಾಗಿದ್ದರೆಂಬ ತಪ್ಪುಗ್ರಹಿಕೆಯಿಂದಲ್ಲ.

Sri Vidyabharathi Book Centre, Sringeri

೫೮. ಗುರುವಂಶ ಕಾವ್ಯ ೧೭ನೇ ಸರ್ಗ ಶ್ಲೋಕ ೩೮, ೪೫, ೪೮,

CC-0. In Public Domain. Digitized by eGangotri

ಈ ಆಚಾರ್ಯರ ಪ್ರಭಾವವು ಕೆಳದಿಯ ಅರಸರಲ್ಲಿ ಎಷ್ಟಿತ್ತೆಂದರೆ ಆ ಅರಸರು ವಿಜಯನಗರದ ಚಕ್ರವರ್ತಿಗಳಂತೆಯೇ ಶೃಂಗೇರಿ ಮಠಕ್ಕಲ್ಲದೆ ಇತರ ಬ್ರಾಹ್ಮಣ ಮಠಗಳಿಗೂ ಶೈವಮಠಗಳಿಗೂ ಹೇರಳವಾದ ದತ್ತಿ ಗಳನ್ನು ಕೊಡುತ್ತಿದ್ದರು. ಇವುಗಳಲ್ಲಿ ಮಹಂತಿನ ಮಠವು (ವೀರಶೈವ ಮಠ) ಅತ್ಯಂತ ಹೆಚ್ಚಿನ ಪ್ರಯೋಜನ ಪಡೆದಿತ್ತು, ತೀರ್ಥಮತ್ತೂರು ಮಠ, ಮುಳಬಾಗಿಲುಮಠ (ಸ್ಮಾರ್ತ ಮಠ) ಮತ್ತು ಪುತ್ತಿಗೆ ಮಠಗಳೂ (ಮಾಧ್ವಮಠ) ಸಹಾಯವನ್ನು ಪಡೆದಿದ್ದವು. ಇಕ್ಕೇರಿಯರಸರು ಮುಸಲ್ಮಾನರಿಗೂ ಮಸೀದಿಗಳನ್ನು ನಿರ್ಮಾಣಮಾಡಿಕೊಳ್ಳಲು ದಾನ ಗಳನ್ನು ಕೊಟ್ಟಿದ್ದರು. ೫೯

ಈ ಎಲ್ಲ ನಿದರ್ಶನಗಳಿಂದ ಇಕ್ಕೇರಿಯ ಅರಸರು ತಮ್ಮ ಚಕ್ರವರ್ತಿ ಗಳಾಗಿದ್ದ ವಿಜಯನಗರದ ಅಧಿಪತಿಗಳ ಆದರ್ಶದಿಂದಲೂ ಶೃಂಗೇರಿ ಆಚಾರ್ಯರ ಉಪದೇಶದಿಂದಲೂ ಪ್ರಭಾವಿತರಾಗಿದ್ದರೆಂದು ಹೇಳಬಹುದೇ ವಿನಾ ಅವರು ಶೃಂಗೇರಿ ಮಠಕ್ಕೆ ಮಾಡಿದ ಸೇವೆಯು ಶೃಂಗೇರಿ ಮಠವು ಶೈವ ಮಠವೆಂದಲ್ಲ ಎಂಬುದು ಸುಸ್ಪಷ್ಟವಾಗುತ್ತದೆ.

೧೪ ರೇಣುಕ, ರೇವಣ ಇತ್ಯಾದಿ ಹೆಸರುಗಳು.

ಈಗ ರೇವಣ ಎಂಬ ಹೆಸರನ್ನು ಕುರಿತು ಸ್ವಲ್ಪ ವಿಚಾರಮಾಡ ಬೇಕು. ರೇವಣ ಶಬ್ದವು ಕಾಶ್ಮೀರಿ ಶಬ್ದವೂ ಅಥವಾ ಶುದ್ಧ ಕನ್ನಡ ಶಬ್ದವೂ ಆಗಿರಬಹುದೆಂದು ಹಲವರು ಊಹಿಸಿರುತ್ತಾರೆ. ಕಲ್ಹಣ, ಬಿಲ್ಹಣ ಶಬ್ದಗಳಂತೆಯೇ ರೇವಣ ಶಬ್ದ ಕಾಶ್ಮೀರೀ ಭಾಷೆಯದಿರಬಹುದು. ಅಥವಾ ಸಾಯಣ, ಮಾಯಣ, ಕಂಪಣ ಶಬ್ದಗಳಂತೆ ಕನ್ನಡ ಮೂಲ ವಾಗಿಯೂ ಇರಬಹುದು. ಸಂಸ್ಕೃತದ ರೇವ್ (ಕ್ರಿಯಾಪದ ರೇವತೆ ತಿರುಗಾಡುತ್ತಾನೆ) ಶಬ್ದವು ಶಿಲಾರ್ಥದಲ್ಲಿ ರೇವಣ ಎಂದಾಗಿರಬಹುದು. ರೇಣುಕನು ಸಿದ್ಧನಾದುದರಿಂದ ಸದಾ ಸುತ್ತುತ್ತಿದ್ದುದರಿಂದ ಪರಿವ್ರಾಜಕ ನಾದುದರಿಂದ 'ರೇವಣ' ಎಂದಾಗಿರಬಹುದು.

---

೫೯. E. C- Vol VII 108 Sa ಮತ್ತು Tl 38-39

Sri Vidyabharathi Book Centre, Sringeri

CC-O. In Public Domain. Digitized by eGangotri

ರೇಣುಕ, ರೇವಣ ಎಂಬ ಹೆಸರು ಹನ್ನೆರಡನೆಯ ಶತಮಾನದಲ್ಲಿ ಮತ್ತು ಅದರ ಅನಂತರದಲ್ಲಿ (ರೇವಣಸಿದ್ಧರ ಕಾಲಾನಂತರದಲ್ಲಿ) ಹೆಚ್ಚು ಹೆಚ್ಚು ಪ್ರಚಾರದಲ್ಲಿ ಬಂದಿದ್ದರೂ, ಅದಕ್ಕೂ ಹಿಂದೆಯೇ ಅಸ್ತಿತ್ವದಲ್ಲಿ ಇತ್ತು ಎಂಬುದನ್ನು ಗಮನಿಸಬೇಕು. (ರೇವ, ರೇವತ, ರೇಣುಕಾಂಬ ಇತ್ಯಾದಿ ಹೆಸರುಗಳು ಪ್ರಸಿದ್ಧವಾಗಿವೆ) ಅದು ಕೇವಲ ವೀರಶೈವ ಮತಕ್ಕಾಗಲಿ, ಶುದ್ಧ ಶೈವಮತಕ್ಕಾಗಲಿ ಸೀಮಿತವಾಗಿರದೆ ಸ್ಮಾರ್ತ ಬ್ರಾಹ್ಮಣರೂ ಇತರರೂ ಆ ಹೆಸರನ್ನು ಧರಿಸುತ್ತಿದ್ದರು. ಅದಕ್ಕೆ ಹಲವಾರು ನಿದರ್ಶನಗಳನ್ನು ಕೊಡಬಹುದು.

ಏಕಾದಶ ರುದ್ರರಲ್ಲಿ ರೇವತ ಎಂಬ ಹೆಸರು ಪ್ರಸಿದ್ಧವಾಗಿದೆ.

ಮಂತ್ರದ್ರಷ್ಟಾರರಾದ ವೇದದ ಋಷಿಗಳಲ್ಲಿ ಮಹರ್ಷಿಗಳು, ಋಷಿಗಳು, ಋಷೀಕರನಂತರ ಭೃಗುಕುಲ, ಅಂಗಿರಾಕುಲ, ಕಾಶ್ಯಪರು, ಅತ್ರೇಯರು ಮತ್ತು ವಾಸಿಷ್ಠರು ಬರುತ್ತಾರೆ. ಅವರ ನಂತರ ಕೌಶಿಕರು ಬರುತ್ತಾರೆ. ಅವರಲ್ಲಿ ವಿಶ್ವಾಮಿತ್ರ, ದೇವರಾತ, ಉದ್ಗಲ (ಅಥವ ಬಲ) ಮಧುಚ್ಛಂದ, ಅಘಮರ್ಷಣ, ಅಷ್ಮಕ, ಲೋಹಿತ, ಕತಕೀಲ, ದೇವಶ್ರವ, ರೇಣು, ಪೂರಣ ಮತ್ತು ಧನಂಜಯರೆಂಬ ಹದಿಮೂರು ಜನ ಬರುತ್ತಾರೆ. ಅವರಲ್ಲಿ ವಿಶ್ವಾಮಿತ್ರ ಪುತ್ರನಾದ ರೇಣುವು ಋಗ್ವೇದದ ಒಂಬತ್ತನೆಯ ಮಂಡಲದ ಎಪ್ಪತ್ತನೆಯ ಸೂಕ್ತ ಮತ್ತು ಹತ್ತನೆಯ ಮಂಡಲದ ಎಂಬತ್ತೊಂಬತ್ತನೆಯ ಸೂಕ್ತಗಳಿಗೆ (ಒಟ್ಟು ಇಪ್ಪತ್ತೆಂಟು ಋಕ್ಕುಗಳಿಗೆ) ದ್ರಷ್ಟಾರನಾಗಿದ್ದಾನೆ.

ವೇದ ಪ್ರಾಮಾಣ್ಯವನ್ನೂ ಅಂಗೀಕರಿಸಿ ವೇದೋಕ್ತ ಕರ್ಮಾನುಷ್ಠಾನಗಳನ್ನು ಮಾಡುತ್ತಾ ಸಿದ್ಧಪುರುಷರಾಗಿದ್ದ ವೈದಿಕ ಗೋತ್ರ ಪ್ರವರ್ತಕರಾಗಿದ್ದ, ವೈದಿಕ 'ರೇವಣ' ಎಂಬ ಹೆಸರಿನ ಋಷಿವರ್ಯರೂ ಒಬ್ಬರಿದ್ದಾರೆ. ಅವರು ವೈದಿಕ ಮಾರ್ಗ ಪ್ರವರ್ತಕರು. ಭಗವದ್ಬೋಧಾಯನರೂ ಈ ರೇವಣರನ್ನು ತಮ್ಮ ಶ್ರೌತ ಸೂತ್ರದಲ್ಲಿ ಹೆಸರಿಸಿರುತ್ತಾರೆ.*

---

* ಶ್ರೀ ಚಂದ್ರಮೌಳೀಶ್ವರ ಲಿಂಗ ಮತ್ತು ರೇವಣರು– ಲೇಖಕ ಶ್ರೀ ಭಾರದ್ವಾಜ - ಶ್ರೀ ಶಂಕರ ಕೃಪಾ ಸಂಪುಟ 9 ಸಂಚಿಕೆ 7. ಅನುಬಂಧವನ್ನು ನೋಡಿ.

Sri Vidyabharathi Book Centre, Sringeri

CC-0. In Public Domain. Digitized by eGangotri

ಜಮದಗ್ನಿ ಮಹರ್ಷಿಯ ಪತ್ನಿಯಾದ ರೇಣುಕೆಯ ಕತೆ ಸುಪ್ರಸಿದ್ಧ ವಾದುದು. ರೇಣುಕೆಯ ತಂದೆಯ ಹೆಸರು 'ರೇಣು' ಅಥವಾ ಪ್ರಸೇನ-ಜಿತ್. ಈತನು ಇಕ್ಷ್ವಾಕು ವಂಶಕ್ಕೆ ಸೇರಿದ ದೊರೆ. ಪರಶುರಾಮನ ಜನನಿಯಾದ ಈ ರೇಣುಕಾಂಬೆಯನ್ನು ಉತ್ತರಕರ್ಣಾಟಕದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಅನೇಕ ಜನ ಸ್ಮಾರ್ತ - ವೈಷ್ಣವ ಸಂಪ್ರದಾಯದ ಬ್ರಾಹ್ಮಣರು ತಮ್ಮ ಮನೆದೇವರಾಗಿಯೂ ಇಷ್ಟದೇವರಾಗಿಯೂ ಪೂಜಿಸುತ್ತಾರೆ. ಇಂದಿಗೂ ಅನೇಕ ಜನ ಬ್ರಾಹ್ಮಣರು ತಮ್ಮ ಕುಲದೈವವಾದ ರೇಣುಕೆಯ ಹೆಸರನ್ನು ತಮ್ಮ ಹೆಣ್ಣು ಮಕ್ಕಳಿಗೆ ಇಡುವ ಸಂಪ್ರದಾಯವಿದೆ. ಈ ರೇಣುಕೆ ಮತ್ತು ಜಮದಗ್ನಿ ಪುತ್ರನಾದ ಪರಶುರಾಮನು ವಿಷ್ಣುವಿನ ಪ್ರಧಾನವಾದ ಹತ್ತು ಅವತಾರಗಳಲ್ಲಿ ಆರನೆಯ ಅವತಾರ.

ಶ್ರೀ ಕೃಷ್ಣನ ಲೀಲಾಸ್ಥಾನವಾದ ದ್ವಾರಕಾನಗರವನ್ನು ಕಟ್ಟಿದಾತನ ಹೆಸರು 'ರೇವತ' ಎಂದು. ಆ ನಗರದ ಹೆಸರು ಕುಶಸ್ಥಲ ಎಂದಿದ್ದು ಅನಂತರ "ದ್ವಾರಕಾ" ಎಂದಾಯಿತು.

ಭರತಖಂಡದ ಸಪ್ತತೀರ್ಥಗಳಲ್ಲಿ ಒಂದಾದ ನರ್ಮದಾ ನದಿಗೆ ರೇವಾ ಎಂಬ ಹೆಸರು ಪ್ರಸಿದ್ಧವಾಗಿದೆ. ಸ್ಕಾಂದ ಪುರಾಣದಲ್ಲಿ ರೇವಾಖಂಡ ಎಂಬ ಪ್ರತ್ಯೇಕಭಾಗವೇ ಈ ನದಿಯ ಮಹಾತ್ಮೆಯನ್ನು ವಿವರಿಸುವ ಸಲುವಾಗಿ ಬಂದಿದೆ.

ರೇಣುಕಾ ತೀರ್ಥವೆಂಬ ಸ್ಥಳ ಪಂಜಾಬಿನ ವಹಾನ್ ಎಂಬ ಸ್ಥಳಕ್ಕೆ ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿದೆ.

ರೇವಾ ಎಂಬ ದೇಶೀಯ ಸಂಸ್ಥಾನವಿದ್ದು ಅದು ರಾಜ್ಯ ಪುನರ್ವಿಂಗಡನೆಯ ಕಾಲದಲ್ಲಿ ಮಧ್ಯಪ್ರದೇಶದಲ್ಲಿ ವಿಲೀನವಾಯಿತು.

ರೇಣುಮತಿ ಎಂಬುವಳು ಶಿಶುಪಾಲನ ಮಗಳು. ಪಾಂಡುಮಹಾರಾಜನ ಪುತ್ರ ನಕುಲನನ್ನು ಮದುವೆಯಾಗಿ ನಿರಮಿತ್ರ ಎಂಬ ಮಗನನ್ನು ಪಡೆದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ರೇವತಿ ಎಂಬುವಳು ಕೃಷ್ಣನ ಅಣ್ಣನಾದ ಬಲರಾಮನ ಹೆಂಡತಿ. ಇನ್ನೊಬ್ಬ ರೇವತಿ ಚಂದ್ರನ ಇಪ್ಪತ್ತೇಳು ಜನ ಪತ್ನಿಯರಲ್ಲಿ ಒಬ್ಬಳು. ದಕ್ಷಬ್ರಹ್ಮನ ಮಗಳು.

ಇಪ್ಪತ್ತೇಳು ಪ್ರಧಾನ ನಕ್ಷತ್ರಗಳಲ್ಲಿ ರೇವತಿ ಎಂಬುದು ಒಂದು.

ಋತವಾಕ್ ಎಂಬ ಋಷಿ ತನ್ನ ವೃದ್ಧಾಪ್ಯದಲ್ಲಿ ಈ ರೇವತೀ ನಕ್ಷತ್ರದ ನಾಲ್ಕನೇ ಪಾದದ ಅರಿಷ್ಟಾಂಶದಲ್ಲಿ ಮಗನೊಬ್ಬನನ್ನು ಪಡೆದನು ಅವನಿಗೆ ಸಕಾಲದಲ್ಲಿ ಜಾತಕರ್ಮ ನಾಮಕರಣ ಉಪನಯನಾದಿ ಸಂಸ್ಕಾರಗಳೇನೋ ನಡೆದವು. ಅವನ ನಡೆನುಡಿಗಳೂ ಆಚಾರ ವ್ಯವಹಾರಗಳೂ ಸಜ್ಜನಸಹಜವಾಗಿರದೆ ತಂದೆ ತಾಯಿಯ ದುಃಖಕ್ಕೆ ಕಾರಣವಾಗಿದ್ದವು. ಅಷ್ಟೇ ಅಲ್ಲದೇ ಮಗ ಹುಟ್ಟಿದಾಗಿನಿಂದಲೂ ತಾಯಿಗೆ ಕಾಯಿಲೆ, ತಂದೆಗೆ ಕುಷ್ಠರೋಗ. ಈ ಋಷಿ ಪುತ್ರನು ಒಬ್ಬ ಋಷಿಪತ್ನಿಯನ್ನು ಅಪಹರಿಸಿ "ದುಃಶೀಲ" ನೆಂದು ಕುಖ್ಯಾತನಾಗಿದ್ದನು.

ಈ ಮಗನ ಕೆಟ್ಟ ಚಾಳಿಯಿಂದ ಮನೋರೋಗಕ್ಕೆ ತುತ್ತಾದ ತಂದೆ ಗರ್ಗ ಮುನಿಯ ಬಳಿಗೆ ಹೋಗಿ ತನ್ನ ಗೋಳನ್ನು ತೋಡಿಕೊಂಡ. ಆ ಋಷಿ ಅದು ಅವನ ಮಗನ ತಪ್ಪಲ್ಲವೆಂದೂ ಅವನು ಹುಟ್ಟಿದ ನಕ್ಷತ್ರ ದೋಷವೆಂದೂ ತಿಳಿಸಿದ. ಅದನ್ನು ಕೇಳಿದ ವೃದ್ಧ ಋತವಾಕ್ ತನ್ನ ಸಂಸಾರದ ದುಃಸ್ಥಿತಿಗೆ ರೇವತೀ ನಕ್ಷತ್ರವೇ ಕಾರಣವೆಂದು ಬಗೆದು ಆ ನಕ್ಷತ್ರವು ನಭೋಮಂಡಲದಿಂದ ಕೆಳಕ್ಕುರುಳುವಂತೆ ಶಾಪವಿತ್ತ.

ರೇವತೀ ನಕ್ಷತ್ರ ಕೆಳಕ್ಕುರುಳಿತು. ಅದು ಕುಮುದ ಪರ್ವತದಲ್ಲಿ ಬಿದ್ದು ಕಮಲ ಸರೋವರವಾಯಿತು. ಅಂದಿನಿಂದ ಕುಮುದ ಪರ್ವತಕ್ಕೆ 'ರೈವತಕ' ಪರ್ವತವೆಂದು ಹೆಸರಾಯಿತು. ಆ ಸರಸ್ಸಿನಿಂದ ದಿವ್ಯ ಸುಂದರಿಯಾದ ಬಾಲಕಿಯೊಬ್ಬಳು ಹೊರಬಂದಳು. ಆ ಪರ್ವತದಲ್ಲಿಯೇ ತಪಸ್ಸು ಮಾಡುತ್ತಿದ್ದ ಪ್ರಮುಚಮುನಿ ಆ ಬಾಲಕಿಗೆ 'ರೇವತಿ' ಎಂಬ ಹೆಸರಿಟ್ಟು ಅಕ್ಕರೆಯಿಂದ ಸಾಕಿದನು.

ಪುತ್ರಿ ರೇವತಿಯು ವಿವಾಹ ವಯಸ್ಕಳಾಗಲು ಅವಳಿಗೆ ಯೋಗ್ಯ ವರನಾರೆಂದು ಚಿಂತಿಸಿ ಪ್ರಮುಚಮುನಿಯು ಅಗ್ನಿದೇವರನ್ನು ಕುರಿತು ಪ್ರಾರ್ಥಿಸಿದ. ಅಗ್ನಿದೇವನ ಅಪ್ಪಣೆಯಂತೆ ಪ್ರಿಯವ್ರತವಂಶದ ವಿಕ್ರಮ

Sri Vidyabharathi Book Centre, Sringeri

CC-0. In Public Domain. Digitized by eGangotri

ಶೀಲನಿಗೆ (ಇವನಿಗೆ ದುರ್ದಮ ಮತ್ತು ದುರ್ಗಮ ಎಂಬ ಹೆಸರೂ ಉಂಟು. ಇವನ ಕಾಳಿಂದಿಯ ಮಗ) ಕೊಟ್ಟು ವಿವಾಹ ನಡೆಸಲು ನಿರ್ಧರಿಸಿದನು.

ಮಗಳು ರೇವತಿ ತನಗೆ ರೇವತೀ ನಕ್ಷತ್ರದಲ್ಲಿಯೇ ವಿವಾಹವಾಗ ಬೇಕೆಂದು ತಂದೆಯಲ್ಲಿ ಕೇಳಿಕೊಂಡಳು. ಶಾಪಗ್ರಸ್ತ ರೇವತೀ ನಕ್ಷತ್ರವು ಧರೆಗೆ ಉರುಳಿದುದನ್ನು ತಂದೆಯು ಮಗಳಿಗೆ ಜ್ಞಾಪಿಸಿದನು. ಆಗ ಮಗಳು 'ತಂದೆಯೇ ಋತ್‌ವಾಕ್ ಮಾತ್ರ ತಪಸ್ವಿಯೇ ? ನೀನು ತಪಸ್ವಿ ಯಲ್ಲವೇ? ಅವನ ಶಾಪದಿಂದ ಧರೆಗುರುಳಿದ ನಕ್ಷತ್ರ ನಿನ್ನ ತಪೋ ಮಹಿಮೆ ಯಿಂದ, ಅನುಗ್ರಹದಿಂದ ಮತ್ತೆ ನಭೋಮಂಡಲಕ್ಕೆ ಹೋಗಲಾರದೇ?' ಎಂದು ಕೇಳಿದಳು. ಮಗಳ ಮಾತನ್ನು ಕೇಳಿ ಹರ್ಷಿತನಾದ ಮುನಿ ತನ್ನ ತಪಶ್ಶಕ್ತಿಯಿಂದ ರೇವತೀ ನಕ್ಷತ್ರಕ್ಕೆ ಸ್ವಸ್ಥಾನವನ್ನು ಕೊಡಿಸಿ ಆ ನಕ್ಷತ್ರದಲ್ಲಿಯೇ ಮಗಳ ಮದುವೆಯನ್ನು ಮಾಡಿಕೊಟ್ಟನು.

ಅನಂತರ ಋಷಿಯು ಮಗಳನ್ನು ಕಳುಹಿಸಿಕೊಡುವಾಗ ಅಳಿಯನಿಗೆ ಏನು ಬಳುವಳಿಯು ಬೇಕೆಂದು ಕೇಳಲು, ರಾಜನಾದ ದುರ್ಗಮನು "ಮಹ ರ್ಷಿಯೇ ನಾನು ಸ್ವಾಯಂಭುವ ಮನುವಂಶದಲ್ಲಿ ಜನಿಸಿದ್ದೇನೆ. ನಿನ್ನ ಪರಮಾನುಗ್ರಹದಿಂದ ಮನ್ವಂತರಾಧಿಪತಿಯಾಗತಕ್ಕ ಮಗನು ಜನಿಸು ವಂತೆ ಬೇಡುತ್ತೇನೆ." ಎಂದು ಕೇಳಿಕೊಂಡನು. ಪ್ರಮುಚಮುನಿಯು ಪ್ರಸನ್ನನಾಗಿ 'ತಥಾಸ್ತು' ಎಂದು ಹೇಳಿ ಹರಸಿದನು.

ಈ ದುರ್ಗಮರಾಜ ಮತ್ತು ರೇವತೀದೇವಿಯರಿಗೆ ಪ್ರಮುಚ ಮುನಿಯ ಆಶೀರ್ವಾದದಿಂದ ಜನಿಸಿದ ಮಗನೇ ರೈವತಮನು. ಮುಂದೆ ಮನ್ವಂತರಕ್ಕೆ ಅಧಿಪತಿಯಾದ ಮಹಾಭಾಗ್ಯಶಾಲಿ.

ಶ್ರೀ ಶಂಕರಭಗವತ್ಪಾದರ ದೀಕ್ಷಾಗುರುಗಳಾದ ಭಗವಾನ್ ಶ್ರೀ ಗೋವಿಂದ ಭಗವತ್ಪಾದರು ರೇವಾ ಎಂಬ ಹೆಸರುಳ್ಳ ನರ್ಮದಾತೀರದಲ್ಲಿ ತಪಸ್ಸು ಮಾಡುತ್ತಿದ್ದ ಸಿದ್ಧಪುರುಷರಾದುದರಿಂದ ಅವರೂ ಸಹ ರೇವಣ ಸಿದ್ಧರೇ ಆಗಿರಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಥ ಸಂಪ್ರದಾಯದಲ್ಲಿ ಪ್ರಸಿದ್ಧರಾದ ಒಂಬತ್ತು ಜನ ನಾಥರಲ್ಲಿ ೫೯ ರೇವಣನಾಥರೆಂಬುವರೂ ಒಬ್ಬರು. ಮೊದಲು ಇವರ ಹೆಸರು ರೇವಣಸಿದ್ಧರೆಂದಿದ್ದು ಅನಂತರ ರೇವಣನಾಥ ಎಂದಾಯಿತು. ಇವರು ಮತ್ಸ್ಯೇಂದ್ರನಾಥರಿಂದ ಉಪದಿಷ್ಟರಾಗಿ ದತ್ತಾತ್ರೇಯರನ್ನು ಸಾಕ್ಷಾತ್ಕಾರ ಮಾಡಿಕೊಂಡರೆಂದೂ ಅವರಲ್ಲಿ ಭಕ್ತಿ ಶ್ರದ್ಧೆಯನ್ನು ಬೆಳೆಸಿದರೆಂದೂ ನಾಥ ಸಂಪ್ರದಾಯದವರಿಂದ ತಿಳಿದುಬರುತ್ತದೆ.

ಈ ರೇವಣಸಿದ್ಧರೂ ರೇಣುಕರೂ ಒಬ್ಬರೇ ಎಂದು ಡಾ|| ಆರ್. ಡಿ. ರ್ಯಾನಡೆಯವರು ಅಭಿಪ್ರಾಯ ಪಡುತ್ತಾರೆ. ರೇವಣರ 'ಬಹು ದೊಡ್ಡದೀ ಜನ್ಮ' ಎಂಬ ಕನ್ನಡ ಹಾಡನ್ನು ವಿಮರ್ಶಿಸಿರುವ, ರಾನಡೆಯವರು, ಧ್ಯಾನಸ್ಥನಾದ ಯೋಗಿಯು ಪಡೆಯುವ ಅನುಭವಗಳನ್ನು ವಿವರಿಸಿರುತ್ತಾರೆ. "ಬಯಲಿಗೆ ಬಯಲು ನಿರ್ಬಯಲು ಅದು ಮೂಲಬ್ರಹ್ಮ ತಿಳಿಯಬೇಕೋ ತಮ್ಮ" ಎಂಬ ಭಾಗವನ್ನು ಹೃದಯಂಗಮವಾಗಿ ವ್ಯಾಖ್ಯಾನಿಸಿ ರೇವಣರು ಶ್ರೇಷ್ಠ ಅದ್ವೈತಿ, ಅನುಭವಿ ಎಂಬುದನ್ನು ಶ್ರುತಿಪಡಿಸಿದ್ದಾರೆ.

ಹೊಯ್ಸಳ ವೀರ ಬಲ್ಲಾಳನು ದ್ವಾರಸಮುದ್ರದಲ್ಲಿ ಆಳುತ್ತಿದ್ದಾಗ ಅವನ ಭಂಡಾರದ ಅಧಿಪತಿಗಳಲ್ಲೊಬ್ಬನಾಗಿ ಅತ್ರಿಗೋತ್ರಕ್ಕೆ ಸೇರಿದ ರೇವಣನೆಂಬ ಬ್ರಾಹ್ಮಣನಿದ್ದನು. ಅವನ ತಂದೆಯ ಹೆಸರು ಹರಿಹರದೇವ, ತಾಯಿ ಬಾಗವ್ವೆ, ಅವನ ತಮ್ಮಂದಿರು ನಾಗದೇವ ಮತ್ತು ಕೇಶವಾರ್ಯ. ಇವನ ತಂದೆ ಹರಿಹರನು ಅರಸೀಕೆರೆಯಲ್ಲಿ ಲಕ್ಷ್ಮೀದೇವಸ್ಥಾನವನ್ನು ಕಟ್ಟಿಸಿದನು-(೧೧೭೩). ೬೦

---

೫೯ ಗೋರಕ್ಷ ಜಾಲಂಧರ ಚರ್ಪಟಾಶ್ಚ
ಅಡಭಂಗ ಕಾನೀಫಮಛಿಂದರಾಧ್ಯಾಃ
ಚೌರಂಗ ರೇವಣ ಚ ಭರ್ತೃ ಸಂಜ್ಞಾಃ
ಭೂಮ್ಯಾಂ ಬಭೂವುಃ ನವನಾಥಸಿದ್ಧಾಃ ||

Path way to god in kannada literature by prof R. D. Ranade page 15

೬೦ E.C Vol. V ಅರಸೀಕೆರೆ 71, ಕ್ರಿ. ಶ. 1173

Sri Vidyabharathi Book Centre, Sringeri

CC-0. In Public Domain. Digitized by eGangotri

ರೇವರಾಜ ಅಥವಾ ರೇವಣದೇವನೆಂಬೊಬ್ಬಾತನು ಸುಮಾರು ೧೩೦೦ ರಲ್ಲಿ ವಿಷ್ಣು ದೇವಾಲಯವನ್ನು ನಿರ್ಮಿಸಿದನೆಂದು ಅರಸೀಕೆರೆ ೧೩೦ ನೆಯ ಶಾಸನ ಹೇಳುತ್ತಿದೆ. ಅವನಿಗೆ ಚಂದ್ರ, ಚಟ್ಟಿರಾಜ, ಆದಿತ್ಯ, ಅಚ್ಯುತ ಮತ್ತು ಮಧುವರೆಂಬ ಮಕ್ಕಳಿದ್ದು ಅವರು ತಂದೆಯು ಕಟ್ಟಿಸಿದ ದೇವಾಲಯವನ್ನು ವಿಸ್ತರಿಸಿ ಬ್ರಾಹ್ಮಣರಿಗೆ ಅಗ್ರಹಾರ ನಿರ್ಮಿಸಿ ಕೊಟ್ಟು ದೇವಾಲಯಕ್ಕೆ ದಾನಶಾಸನವನ್ನು ಬರೆದರು. ೬೧

ಹರಿಭದ್ರಸೂರಿಯ ಷಡ್ದರ್ಶನ ಸಮುಚ್ಚಯವೆಂಬ ಗ್ರಂಥಕ್ಕೆ ಗುಣರತ್ನನೆಂಬ ಜೈನಲೇಖಕನು ವ್ಯಾಖ್ಯಾನವನ್ನು ಬರೆದಿದ್ದಾನೆ.(೧೪೦೯) ಅವನು ಮೀಮಾಂಸಾ ಶಾಸ್ತ್ರದ ವಿವಿಧ ಮತಗಳನ್ನು ಉಲ್ಲೇಖ ಮಾಡುತ್ತಾ, ಉಂಬೇಕನು ಕಾರಿಕೆಗಳನ್ನು ಚೆನ್ನಾಗಿ ತಿಳಿದಿದ್ದಾನೆ, ಪ್ರಭಾಕರನು ತಂತ್ರವನ್ನು ತಿಳಿದಿದ್ದಾನೆ, ವಾಮನನು (ಮಂಡನ ಮಿಶ್ರ)

---

೬೧ E. C. Vol. Arasikere -130

ಈ ರೇವಣ ಪ್ರಶಸ್ತಿಯೂ ಗಮನಾರ್ಹವಾದುದು.

ವರವಾಸಿಷ್ಠ ಪವಿತ್ರ ಗೋತ್ರ ಜಲಧಿಪ್ರೋದ್ಭೂತ ಚಂದ್ರಗಂ ಉರ್
ವರೆಗತ್ಯುಮೆಯಪ್ಪ ರೇಖಲೆಗಂ ಅತ್ಯಾನಂದದಿಂ ಪುಟಿದಂ
ಸ್ಥಿರಚಿತ್ತಂ ದೃಢವಾಕ್ಯಂ ಊರ್ಜಿತಯಶಂ ಶ್ರೀ ರೇವರಾಜಂ ಧರಾ
ಧರಧೈರಂ ದ್ವಿಜವಂಶಭೂಷಣಂ ಇಳಾಲೋಕೈಕ ಕಲ್ಪದ್ರುಮಂ॥

ಪರಹಿತದೊಳ್ ಚಲವಂತಾ
ಸುರಗೃಹಮಂ ಮಾಡಿಕೀರ್ತಿವಡೆಯಲ್ ಚಲಮುರ್
ವರೆಯೊಳ್ ಬುಧರಂ ದ್ವಿಜರಂ
ಪೊರೆವೆಡೆಯೊಳ್ ರೇವಣಂಗೆ ಚಲನೆಸದಿಕ್ಕುಂ ॥

ವನನಿಧಿ ಪರಿವೃತ ವಿಶ್ವಾ
ವನಿತಳದೊಳಗಿದು ವಿಚಿತ್ರಮೆಂಬಂದದೆ ಸ
ಜ್ಜನ ವಿನುತ ರೇವಣಂ ಮನು
ಚ್ಚರಿತನವನ್ ವಿಷ್ಣು ಭವನಮಂ ಮಾಡಿಸಿದಂ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡು ವಿಷಯಗಳಲ್ಲಿಯೂ ನಿಷ್ಣಾತನಾಗಿದ್ದಾನೆ. ರೇವಣನಿಗೆ ಏನೂ ಗೊತ್ತಿಲ್ಲ" ಎಂದು ಬರೆದಿದ್ದಾನೆ ೬೨.

ಪ್ರಸಿದ್ಧ ಮೀಮಾಂಸಕರಾದ ಉಂಬೇಕ (ಭವಭೂತಿ) ಪ್ರಭಾಕರ, ಮಂಡನಮಿಶ್ರರ ಸಮಕಾಲೀನನಾಗಿ ರೇವಣನೆಂಬೊಬ್ಬ ಸಾಧಾರಣನಾದ ಪಂಡಿತನಿದ್ದನೆಂದೂ ಅವನೂ ಮೀಮಾಂಸಕನಾಗಿದ್ದನೆಂದೂ ಇದರಿಂದ ವ್ಯಕ್ತಪಡುವುದು.

ಈ ಮೇಲಿನ ನಿದರ್ಶನಗಳಿಂದ ರೇಣುಕ ಅಥವಾ ರೇವಣ ಎಂಬ ಹೆಸರು ಪ್ರಾಚೀನಕಾಲದಿಂದಲೂ ರೂಢಿಯಲ್ಲಿದ್ದು ಪ್ರಸಿದ್ಧವಾಗಿದ್ದಿತೆಂದೂ ಅದು ಕೇವಲ ವೀರಶೈವ ಮತಕ್ಕಷ್ಟೇ ಸೀಮಿತವಲ್ಲವೆಂದೂ ಸ್ಪಷ್ಟಪಡುವುದು. ಬ್ರಾಹ್ಮಣರಲ್ಲೂ ಆ ಹೆಸರು ಬಳಕೆಯಲ್ಲಿದ್ದು ಪ್ರಸಿದ್ಧ ವೀರಶೈವ ಮತಾಚಾರ್ಯರಾದ ರೇಣುಕಾಚಾರ್ಯರ ನಂತರ ಅದು ವೀರಶೈವ ಮತಕ್ಕೆ ಮಾತ್ರವೇ ಸೇರಿದ ಹೆಸರೆಂಬ ಭಾವನೆ ಜನರಲ್ಲಿ ಮೂಡಿತ್ತೆಂದು ಹೇಳಬಹುದು. ಹೆಸರುಗಳಿಂದ ಮತವನ್ನು ಹೇಳಲಾಗದು. ವಿದ್ಯಾರಣ್ಯಪುರ ಅಗ್ರಹಾರದ ದಾನಶಾಸನದಲ್ಲಿ ಬರುವ ಅನೇಕ ಹೆಸರುಗಳು, ಶೈವ, ವೀರಶೈವ ಮತೀಯರ ಹೆಸರುಗಳಂತೆಯೇ ಇವೆ. ಆದರೆ, ಆ ಹೆಸರು ಪಡೆದ ವಿದ್ವಾಂಸರೆಲ್ಲರೂ ವೈದಿಕ ಮತೀಯರು, ಅವರ ವಂಶಸ್ಥರು, ಇಂದಿಗೂ ವಿದ್ಯಾರಣ್ಯಪುರ, ಶೃಂಗೇರಿ ಮತ್ತು ಆಸುಪಾಸಿನ ಸ್ಥಳಗಳಲ್ಲಿ ಇದ್ದಾರೆ. ಇವರಾರೂ ಶೈವ ಅಥವಾ ವೀರಶೈವರಲ್ಲ. ಸ್ಮಾರ್ತ ಸಂಪ್ರದಾಯದ ಬ್ರಾಹ್ಮಣರು.‡

---

೬೨ ಉಂಬೇಕಃ ಕಾರಿಕಾಂ ವೇತ್ತಿ ತಂತ್ರಂವೇತ್ತಿ ಪ್ರಭಾಕರಃ
ವಾಮನಸ್ತೂಭಯಂವೇತ್ತಿ ನ ಕಿಂಚಿದಪಿ ರೇವಣಃ ॥

‡ ಇದರಲ್ಲಿ ಬರುವ ಕೆಲವು ಹೆಸರುಗಳು
ಶ್ರೀ ವತ್ಸ ಗೋತ್ರದ ಹೊನ್ನಪಂಗಳು
ಆತ್ರೇಯಗೋತ್ರದ ವಿರೂಪಂಣಗಳು
ಭಾರದ್ವಾಜಗೋತ್ರದ ಚನ್ನಪ್ಪಂಗಳು
ಶ್ರೀ ವತ್ಸಗೋತ್ರದ [illegible]ಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

೧೪. ಉಪಸಂಹಾರ

ಶ್ರೀ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶೃಂಗೇರೀ ಮಠದಲ್ಲಿ ಬಹುಕಾಲದಿಂದಲೂ ಶ್ರೀ ಚಂದ್ರಮೌಳೀಶ್ವರ ಲಿಂಗವಿದೆ. ಈ ಲಿಂಗವು ಶಿವರಹಸ್ಯದಲ್ಲಿರುವಂತೆ ಶಂಕರಾಚಾರ್ಯರಿಗೆ ಸಾಕ್ಷಾತ್ ಪರಶಿವನಿಂದಲೇ ಕೊಡಲ್ಪಟ್ಟಿತು, ಅಥವಾ ಚಿದ್ವಿಲಾಸೀಯದಲ್ಲಿರುವಂತೆ ಗುರುಪರಂಪರೆಯಲ್ಲಿ ಕ್ರಮವಾಗಿ ಪರಶಿವನಿಂದ ಗೋವಿಂದ ಭಗವತ್ಪಾದರಿಗೂ, ಅವರಿಂದ ಶ್ರೀ ಶಂಕರರಿಗೂ ಕೊಡಲ್ಪಟ್ಟಿತು. ರೇವಾತೀರದಲ್ಲಿ ತಪಸ್ಸು ಮಾಡುತ್ತ ಲೋಕೋತ್ತರನಾದ ಸರ್ವಜ್ಞ, ಶಿಷ್ಯರಿಗಾಗಿ ಕಾಯುತ್ತಿದ್ದ ಮಹಾಯೋಗಿ ಗೋವಿಂದ ಭಗವತ್ಪಾದರಿಂದ ಶಂಕರಾಚಾರ್ಯರಿಗೆ

ಕಾಶ್ಯಪಗೋತ್ರದ ಚೌಡಂಣ
ಭಾರದ್ವಾಜಗೋತ್ರದ ಮಲ್ಲಣ್ಣ
ಕಾಶ್ಯಪಗೋತ್ರದ ಬಾಚಂಣ
ಮೌನಭಾರ್ಗವಗೋತ್ರದ ಬುಸಂಣ
ಹರಿತಗೋತ್ರದ ಲಿಂಗಣ್ಣ
ಶ್ರೀವತ್ಸಗೋತ್ರದ ಲಕ್ಕಂಣ
ಕೌಂಡಿನ್ಯಗೋತ್ರದ ಮಲ್ಲಯ್ಯ–ಮಲ್ಲಪ್ಪ
ವಸಿಷ್ಠಗೋತ್ರದ ಗಂಗಂಣ
ಕಾಶ್ಯಪಗೋತ್ರದ ಅಲ್ಲಾಳಭಟ್ಟರ ಚೌಡಪ್ಪ
ಭಾರದ್ವಾಜಗೋತ್ರದ ಮುರುವದೇವ
ಕೌಂಡಿನ್ಯಗೋತ್ರದ ಅರಸಣ್ಣ
ಕೌಶಿಕಗೋತ್ರದ ಮಲ್ಲಪ್ಪಂಗಳ ಮಕ್ಕಳು ರಾಮಣ್ಣ
ಕಾಶ್ಯಪಗೋತ್ರದ ಅಣ್ಣಮದೇವ
ಶ್ರೀವತ್ಸಗೋತ್ರದ ಸಿದ್ದಪ್ಪ
ಶ್ರೀವತ್ಸಗೋತ್ರದ ಚಾಮುಂಡರಾಯ
ಗೌತಮಗೋತ್ರದ ಪದ್ಮಣ್ಣ
ವಸಿಷ್ಠಗೋತ್ರದ ವಗ್ಗಂಣ, ಕಾವಂಣ ಇತ್ಯಾದಿ.

ಶೃಂಗೇರೀ ಶಾಸನ ೫೫

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಗ್ರಹಪೂರ್ವಕವಾಗಿ ಕೊಡಲ್ಪಟ್ಟಿತು. ಪೂರ್ವಾಚಾರ್ಯರ ತಪಃಫಲವೇ ಶಂಕರಾಚಾರ್ಯರಿಗೆ ಧಾರೆಯೆರಿಯಲ್ಪಟ್ಟಿತೋ ಎಂಬಂತೆ ಶ್ರೀ ಚಂದ್ರಮೌಳೀಶ್ವರ ಲಿಂಗವು ಸದಾ ಶೃಂಗೇರಿಜಗದ್ಗುರುಗಳ ಬಳಿಯಲ್ಲಿಯೇ ಇರುತ್ತದೆ. ಸ್ವತಃ ಅವರೇ ಅದರ ಪೂಜಾಭಿಷೇಕಗಳನ್ನು ನಡೆಸುತ್ತಾರೆ.

ಹಲವು ಶತಮಾನಗಳನಂತರ ಶ್ರೀ ವಿದ್ಯಾರಣ್ಯಮಹಾಮುನಿಗಳ ಕಾಲದಲ್ಲಿ ಆಂಧ್ರದೇಶದ ರೇವಣನೆಂಬ ಶೈವ ಬ್ರಾಹ್ಮಣನು (ಈತ ಆಯುರ್ವೇದ ಪಂಡಿತ) ಶೃಂಗೇರಿಗೆ ಬಂದು ಜಗದ್ಗುರುಗಳ ದರ್ಶನ ಮಾಡಿ ಅವರಿಂದ ಉಪದೇಶ ಪಡೆದು ಕೃತಾರ್ಥನಾಗಿ ಗುರುದಕ್ಷಿಣೆಯಾಗಿ ಪಚ್ಚೆಲಿಂಗವನ್ನು ಅರ್ಪಿಸಿದನು. ಅದು ಶೃಂಗೇರಿಯ ಶ್ರೀಶಂಕರಾಚಾರ್ಯ ಸನ್ನಿಧಿಯಲ್ಲಿ ಪೂಜೆಗೊಳ್ಳುತ್ತಿದೆ. ಅದೂ ಸಹ ಶ್ರೀ ಚಂದ್ರಮೌಳೀಶ್ವರ ಎಂಬ ಹೆಸರನ್ನೇ ಹೊಂದಿದೆ.

ಅದಾದ ಮೂರು ಶತಮಾನಗಳನಂತರ ಇಕ್ಕೇರಿಯ ದೊರೆ ಮೊದಲನೆಯ ಸೋಮಶೇಖರನಾಯಕನ ಕಾಲದಲ್ಲಿ (೧೬೬೪–೧೬೭೫). ಆತನ ಅಪ್ಪಣೆಯಂತೆ ಬಾಳೆಹಳ್ಳಿ ಮಠದಲ್ಲಿದ್ದ ಶ್ರೀ ಚಂದ್ರಮೌಳೀಶ್ವರ ಎಂಬ ಲಿಂಗವು ಶೃಂಗೇರಿ ಮಠಕ್ಕೆ ಕಳುಹಲ್ಪಟ್ಟಿತು. ಆಗ ಶೃಂಗೇರಿಯಲ್ಲಿ (೧೬೬೩–೧೬೭೫) ಐದನೆಯ ಶ್ರೀ ನೃಸಿಂಹಭಾರತೀಸ್ವಾಮಿಗಳು ವಿರಾಜಮಾನರಾಗಿದ್ದರು. ಈ ಸಮಯದಲ್ಲಿಯೇ ದೊರೆ ಸೋಮಶೇಖರ ನಾಯಕನು ಚಂದ್ರಮೌಳೀಶ್ವರ ಪೂಜೆಗಾಗಿ ೩೦೦ ಪಗೋಡಗಳು ಬೆಲೆ ಬಾಳುವ ಭೂಮಿಯನ್ನು ಶೃಂಗೇರಿ ಮಠಕ್ಕೆ ದಾನಮಾಡಿದನು.

ಈ ಲಿಂಗವಲ್ಲದೆ ಮತ್ತೊಂದು ಲಿಂಗವೂ ಇಕ್ಕೇರಿ ಅರಸರ ಮೂಲಕ ಬಂದಿತ್ತು. ರಾಣಿ ವೀರಮ್ಮಾಜಿಯು (೧೭೫೭–೧೭೬೩) ಶೃಂಗೇರಿ ಜಗದ್ಗುರುಗಳನ್ನು (ಶ್ರೀ ಅಭಿನವ ಸಚ್ಚಿದಾನಂದಭಾರತೀ ಸ್ವಾಮಿಗಳು ೧೭೪೧–೧೭೬೩) ಬರಮಾಡಿಕೊಂಡು ಸತ್ಕರಿಸಿ, ತನ್ನ ಗುರುಭಕ್ತಿಯ ದ್ಯೋತಕವಾಗಿ ಚಂದ್ರಮೌಳೀಶ್ವರ ನಾಮಕವಾದ ಲಿಂಗವನ್ನೂ, ಗೋಪಾಲಕೃಷ್ಣಮೂರ್ತಿಯ ನವರತ್ನ ಖಚಿತವಾದ ವಿಗ್ರಹವನ್ನೂ ಅರ್ಪಿಸಿದಳು, ಈ ಲಿಂಗಕ್ಕೂ ಶೃಂಗೇರಿಯಲ್ಲಿ ನಿತ್ಯವೂ ಪೂಜಾದಿ ಕೈಂಕರ್ಯಗಳು ನಡೆಯುತ್ತಿವೆ.

Sri Vidyabharathi Book Centre, Sringeri

CC0. In Public Domain. Digitized by eGangotri

ಹೀಗೆ ಶೃಂಗೇರಿಯಲ್ಲಿ ಚಂದ್ರಮೌಳೀಶ್ವರ ಎಂಬ ಹೆಸರಿನ, ಸ್ಪಷ್ಟವಾಗಿ ಗುರುತಿಸಲ್ಪಡಬಹುದಾದ ಲಿಂಗಗಳು ನಾಲ್ಕು ಇವೆ. ಅವುಗಳಲ್ಲಿ ಮೂರು ಸ್ಫಟಿಕ ಲಿಂಗಗಳು. ಒಂದು ಪಚ್ಚೆಯ ಲಿಂಗ. ಇವಲ್ಲದೆ ಟಿಪ್ಪು ಸುಲ್ತಾನನು ಶ್ರೀ ತೃತೀಯ ಸಚ್ಚಿದಾನಂದಭಾರತೀ ಸ್ವಾಮಿಗಳಿಗೆ (೧೭೭೦-೧೮೧೪) ಖಿಲ್ಲತ್ತುಗಳ ಸಮೇತ ಒಂದು ಸ್ಫಟಿಕಲಿಂಗವನ್ನು ಸಮರ್ಪಿಸಿದನೆಂದು ಪ್ರಾಕ್ತಲೇಖನವೊಂದರಿಂದ ಸ್ಪಷ್ಟಪಡುತ್ತದೆ. ೬೩

ಶ್ರೀ ರೇಣುಕಾಚಾರ್ಯ ಅಥವಾ ರೇವಣಸಿದ್ಧರೆಂಬ ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರೂ, ಬಾಳೆಹಳ್ಳಿಮಠದ ಸ್ಥಾಪಕರಾದ ಸಿದ್ಧ ಪುರುಷರು ಶ್ರೀ ಚಂದ್ರಮೌಳೀಶ್ವರ ಲಿಂಗವನ್ನು ಶ್ರೀ ಶಂಕರಾಚಾರ್ಯರಿಗೆ ಕೊಟ್ಟರು ಎನ್ನುವುದು ಮೇಲಿನ ಎಲ್ಲಾ ಘಟನೆಗಳನ್ನೂ ಪರಿಶೀಲಿಸಿದರೆ ಭ್ರಾಮಕ ಕಲ್ಪನೆ ಎಂದು ಸ್ಪಷ್ಟಪಡುವುದು. ರೇವಣ ಎಂಬ ಹೆಸರಿನಿಂದ ಆದ ಗೊಂದಲ ಈ ತಪ್ಪು ಕಲ್ಪನೆಗೆ ಕಾರಣವಾಯಿತು.

ಶ್ರೀ ರೇಣುಕಾಚಾರ್ಯ ಅಥವಾ ರೇವಣಸಿದ್ಧರೆಂಬುವರು ಶ್ರೀ ಶಂಕರಾಚಾರ್ಯರಿಗಿಂತಲೂ ಇತ್ತೀಚಿನವರು ಅವರ ಅತ್ಯಂತ ಪ್ರಾಚೀನ ಕಾಲವೆಂದರೆ ೧೦೬೦. ಶ್ರೀ ಶಂಕರರ ಅತ್ಯಂತ ಇತ್ತೀಚಿನ ಕಾಲವೆಂದರೆ ೭೮೦. ಇವರಿಬ್ಬರಿಗೂ ಸುಮಾರು ಮುನ್ನೂರು ವರ್ಷಗಳ ಅಂತರವಿದ್ದು ಅವರು ಶ್ರೀ ಶಂಕರರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಕೊಡುವುದು ತೀರ ಅಸಂಭವ. ಪಾಶುಪತಮತವನ್ನು ವೇದಬಾಹ್ಯವಾದ ಈಶ್ವರ ಕಲ್ಪನೆಯೆಂದು ನಿರಾಕರಿಸಿರುವ ಶಂಕರಾಚಾರ್ಯರಿಗೆ ಆ ಮತದ ಆಚಾರ್ಯರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರೆಂದು ಹೇಳುವುದು ತೀರಾ ಅವಾಸ್ತವವೂ, ಸ್ವಮತ ವಿರೋಧಮಾಡಿದವರನ್ನು ಪುರಸ್ಕರಿಸುವುದು ಅಸಹಜವೂ ಆಗುತ್ತದೆ. ಹಾಗೆ ಇಷ್ಟಲಿಂಗಧಾರಣೆ ಮಾಡಿಸದೆ ಪೂಜೆಗಾಗಿ ಚರಲಿಂಗವನ್ನು ಕೊಡುವುದು ವೀರಶೈವಾಗಮ ಶಾಸ್ತ್ರಕ್ಕೆ ವಿರೋಧವೂ ಆಗುತ್ತದೆ. ಅದ್ದರಿಂದ ಶಂಕರರಿಗೂ ರೇವಣಸಿದ್ಧರಿಗೂ ಯಾವ

---

೬೩ ಶ್ರೀ [illegible] ಲೇಖನ ಮಾಲಾ - ಪು 78

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಬಂಧವೂ ಇಲ್ಲ. ಹಾಗೆಯೇ ಶೃಂಗೇರಿಯ ಚಂದ್ರಮೌಳೀಶ್ವರ ಲಿಂಗಕ್ಕೂ, ರೇವಣಸಿದ್ಧರಿಗೂ ಯಾವ ಸಂಬಂಧವೂ ಇಲ್ಲ.

ವಿದ್ಯಾರಣ್ಯರ ಕಾಲಕ್ಕೆ ಮೂರು ಶತಮಾನಗಳ ಮುಂಚೆಯೇ ಆಗಿ ಹೋಗಿದ್ದ ವೀರಶೈವಾಚಾರ್ಯ ರೇವಣರು ವಿದ್ಯಾರಣ್ಯರಿಗೆ ಲಿಂಗವನ್ನು ಕೊಟ್ಟರೆನ್ನುವುದೂ ಅಷ್ಟೇ ಅಸಂಭವವಾದುದು.

ಶೃಂಗೇರಿ ಮಠದಲ್ಲಿ ನಡೆಯುತ್ತಿರುವ ಆಚಾರವ್ಯವಹಾರಗಳ ಒಲವು ಶೈವಮತದತ್ತ ವಾಲಿದೆ ಎನ್ನುವುದೂ ಒಪ್ಪತಕ್ಕದ್ದಲ್ಲ. ಅಲ್ಲಿ ಚಂದ್ರಮೌಳೀಶ್ವರ ಲಿಂಗದ ಪೂಜೆಯೊಡನೆ ಶ್ರೀ ನೃಸಿಂಹೋಪಾಸನೆಯೂ, ಶ್ರೀ ಸುದರ್ಶನ ಚಕ್ರಪೂಜೆಯೂ, ಶ್ರೀ ಚಕ್ರಾರ್ಚನೆಯೂ ನಡೆಯುತ್ತಿವೆ. ಅಲ್ಲಿಯ ಪೂಜಾಪದ್ಧತಿ ಶ್ರೀ ಶಂಕರರು ಹಾಕಿಕೊಟ್ಟ ಶುದ್ಧ ವೈದಿಕ ಪೂಜಾ ಪದ್ಧತಿ. ದೇವರ ಎಲ್ಲ ರೂಪಗಳಿಗೂ ಅಲ್ಲಿ ಪೂಜೆ ಸಲ್ಲುತ್ತದೆ. ಪಂಚಾಯತನ ಪೂಜೆಗೆ ಅಲ್ಲಿ ಪ್ರಧಾನ್ಯ ಉಂಟು. ಶೃಂಗೇರಿಯಲ್ಲಿ ಶ್ರೀ ವಿದ್ಯಾಶಂಕರ ದೇವಾಲಯದೊಡನೆ, ಶ್ರೀ ಜನಾರ್ದನಗುಡಿ, ಶ್ರೀ ಶಾರದಾ ದೇವಾಲಯವೂ ಇವೆ. ಶೃಂಗೇರಿಯಲ್ಲಿಯೇ ಶ್ರೀ ಹರಿಹರ ದೇವಾಲಯ, ಶ್ರೀ ವೆಂಕಟರಮಣ ದೇವಾಲಯಗಳೂ ಇದ್ದು ಮಠದಿಂದ ಅವುಗಳಿಗೆ ದಾನದತ್ತಿಗಳೂ ಕೊಡಲ್ಪಟ್ಟಿವೆ. ಪ್ರಾಚೀನವಾದ ಜೈನ ಬಸದಿಯೂ ಇದೆ.

ಶೈವ ಅಥವಾ ವೀರಶೈವ ಮತದಲ್ಲಿರುವಂತಹ ಪೂಜಾಕ್ರಮ ಅಲ್ಲಿ ಯಾವ ದೇವಾಲಯದಲ್ಲಿಯೂ ಇಲ್ಲ. ಶೈವ ಮತದ ಅಷ್ಟಾವರಣ, ಷಟ್‌ಸ್ಥಲ ಸಿದ್ಧಾಂತ, ಇಷ್ಟಲಿಂಗಧಾರಣೆ ಮುಂತಾದ ಯಾವುವೂ ಶೃಂಗೇರಿಯಲ್ಲಿ ಆಚರಣೆಯಲ್ಲಿ ಇಲ್ಲ.

ಶ್ರೀ ಶಂಕರರು ತಮ್ಮ ಕಾಲದಲ್ಲಿ ಭರತಖಂಡದಲ್ಲೆಲ್ಲ ಸಂಚರಿಸಿ ಭಾವನಾತ್ಮಕ ಮತಗಳಾದ ಶೈವ, ವೈಷ್ಣವ, ಶಾಕ್ತ, ಸೌರ, ಕಾಪಾಲಿಕ, ಗಾಣಪತ್ಯ ಮುಂತಾದ ಮತಗಳನ್ನು ಸಂಸ್ಕರಿಸಿ ಪುನಃ ಅವೆಲ್ಲವನ್ನೂ ವೈದಿಕ ಧರ್ಮದ ಆಯಕಟ್ಟಿನೊಳಕ್ಕೇ ತಂದರು. ಅವರ ಶಿವಪರವಾದ ಸ್ತೋತ್ರಗಳನ್ನು ಮಾತ್ರವೇ ಓದಿದವರು ಶಂಕರರನ್ನು ಶೈವರೆಂದೇ ಭ್ರಮಿಸುವರು. ಹಾಗೆಯೇ ಅವರ ವಿಷ್ಣುಪರವಾದ ಸ್ತೋತ್ರಗಳನ್ನು

Sri Vidyabharathi Book Centre, Sringeri

 Public Domain, Digitized by eGangotri

ಓದುವವರು ಅವರನ್ನು ಶುದ್ಧ ವೈಷ್ಣವರೆಂದೇ ಭ್ರಮಿಸುವರು. ಅವರ ಸೌಂದರ್ಯ ಲಹರಿಯೇ ಮುಂತಾದ ದೇವೀಸ್ತುತಿಗಳನ್ನು ಓದುವವರು ಅವರನ್ನು ಶಾಕ್ತರೆಂದೇ ಭ್ರಮಿಸುತ್ತಾರೆ. ಅವರು ಕೇವಲ ಶೈವರೂ ಅಲ್ಲ ಶಾಕ್ತರೂ ಅಲ್ಲ. ಇವೆಲ್ಲವನ್ನೂ ಅಳವಡಿಸಿಕೊಂಡು ಆಯಾ ಪಂಥದಲ್ಲಿಯೇ ಸಾಧನೆ ನಡೆಸುತ್ತ ಸಾಗುತ್ತಿರುವವರಿಗೆ ಮಾರ್ಗದರ್ಶನ ನೀಡಬಲ್ಲಂತಹ, ಇಡೀ ಮಾನವ ಜನಾಂಗಕ್ಕೆ ಸೇರಿದಂತಹ ಏಕೈಕ ಮಹಾಶಕ್ತಿ ಎಲ್ಲರನ್ನೂ ಸತ್ಪಥದತ್ತ ಕೊಂಡೊಯ್ಯುವಂತಹ ಜ್ಯೋತಿ ಸ್ವರೂಪರು ಜಗತ್ತಿಗೇ ಗುರು.

ಶ್ರೀ ಶಂಕರರ ಸಂಪ್ರದಾಯವು ಶೈವವೂ ಅಲ್ಲ, ವೈಷ್ಣವವೂ ಅಲ್ಲ, ಶಾಕ್ತವೂ ಅಲ್ಲ, ಶ್ರುತಿ ಸ್ಮೃತಿಸಮ್ಮತವಾದ ಸರ್ವಾದರಣೀಯವಾದ ಷಣ್ಮತ ಸಮನ್ವಯವಾದ. ಸಂಪ್ರದಾಯ ಮಂತ್ರದ್ರಷ್ಟಾರರಾದ ಋಷಿಗಳೂ, ಭಗವಾನ್ ವೇದವ್ಯಾಸರೂ, ಗೀತಾಚಾರ್ಯ ಶ್ರೀ ಕೃಷ್ಣನೂ ತೋರಿದ ಮಹಾಮಾರ್ಗವೇ ಶ್ರೀ ಶಂಕರರು ಅನುಸರಿಸಿದ ದಿವ್ಯ ಮಾರ್ಗ. ಅದು ಜಾತಿ, ಮತ, ಪಂಥಗಳೆಲ್ಲವನ್ನೂ ಮೀರಿದ ಶುದ್ಧ ಅದ್ವೈತಮಾರ್ಗ. ಇದೇ ಶೃಂಗೇರಿಯ ಆಚಾರ್ಯರು ಅನುಸರಿಸಿದ ಹಾಗೂ ಅನುಸರಿಸುತ್ತಿರುವ ಬೋಧಿಸಿದ ಹಾಗೂ ಬೋಧಿಸುತ್ತಿರುವ ಏಕೈಕ ಭವ್ಯಮಾರ್ಗ.

ಶೃಂಗೇರಿಯ ಆಚಾರ್ಯರುಗಳು ತಾವು ಇಂದಿಗೂ ಅನುಸರಿಸುತ್ತಿರುವುದು, ಶ್ರೀ ಶಂಕರರು ಹಾಕಿಕೊಟ್ಟ ಮೇಲ್ಪಙ್ಕ್ತಿಯಾದ ಮಹಾನುಶಾಸನವನ್ನು ಶೃಂಗೇರಿಯ ಆಚಾರ್ಯರುಗಳೂ ಮತ್ತು ಶಾಂಕರ ಸಂಪ್ರದಾಯದ ಇತರ ಮಠಗಳವರೂ ಅದನ್ನು ಅನುಸರಿಸುತ್ತಾರೆ. ಶೃಂಗೇರಿಯ ಮತ್ತು ಇತರ ಸ್ಮಾರ್ತ ಸಂಪ್ರದಾಯದ ಯತಿಗಳೆಲ್ಲರೂ ತಮ್ಮ ಯತಿನಾಮದ ಕೊನೆಯಲ್ಲಿ ಬರುವ ಭಾರತೀ, ತೀರ್ಥ, ಪುರಿ, ಗಿರಿ, ಸರಸ್ವತೀ, ಅರಣ್ಯ, ವನ, ಇಂದ್ರ ಇತ್ಯಾದಿ ಸಂಕೇತಗಳನ್ನು ಮಠಾಮ್ನಾಯ ಶಾಸನದಂತೆ ಧರಿಸುತ್ತಾರೆ. * ಇಂತಹ ಸಂಪ್ರದಾಯ ವೀರಶೈವ, ಶೈವರಲ್ಲಿ ಇದ್ದಂತೆ ಕಂಡು ಬರದು. ಭರತಖಂಡದ ಆದ್ಯಂತವಾಗಿ ಹಬ್ಬಿ ಹರಡಿರುವ ದಶನಾಮೀ ಸಂಪ್ರದಾಯದ ಲಕ್ಷೋಪಲಕ್ಷ ಮಂದಿ ಸನ್ಯಾಸಿಗಳು, ದಶನಾಮೀ ಸಂಪ್ರದಾಯದ ಪ್ರವರ್ತಕರಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯರ ಚತುರಾಮ್ನಾಯ ಪೀಠಗಳ ಶಿಷ್ಯರೇ ಆಗಿದ್ದು, ಇಂದಿಗೂ ಅವುಗಳ ಮಾರ್ಗದರ್ಶನವನ್ನು ಪಡೆಯುತ್ತಿದ್ದಾರೆ. ಈ ಚತುರಾಮ್ನಾಯ ಪೀಠಗಳ ಅಗ್ರಸ್ಥಾನ ಇಂದಿಗೂ ಶೃಂಗೇರಿಯ ಪೀಠದ್ದೇ ಆಗಿದ್ದು, ಅಲ್ಲಿ ಶ್ರೀ ಶಂಕರರೂ ಶ್ರೀ ಸುರೇಶ್ವರರೂ ಪ್ರಥಮ ಪಿಠಾಧಿಪತಿಗಳಾಗಿದ್ದುದೂ ಅದಕ್ಕೆ ಕಾರಣವಾಗಿದೆ.

* ಅನುಬಂಧವನ್ನು ನೋಡಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಬಂಧಗಳು

೧ ಚಾತುರ್ಮಾಸ್ಯದ ವ್ರತ

ಶೃಂಗೇರಿಯ ಆಚಾರ್ಯರು ಆಷಾಢಮಾಸದ ಹುಣ್ಣಿಮೆಯಂದು ಚಾತುರ್ಮಾಸ್ಯ ಸಂಕಲ್ಪವನ್ನು ಕೈಗೊಳ್ಳುತ್ತಾರೆ. ಆಗ ಬ್ರಹ್ಮವಿದ್ಯಾ ಬೋಧಕರಾದ ಚಾರ್ಯರಿಗೆ ಪೂಜೆಯನ್ನು ಸಲ್ಲಿಸುತ್ತಾರೆ.

ಈ ಬ್ರಹ್ಮವಿದ್ಯಾ ಆಚಾರ್ಯರುಗಳ ಆರಾಧನೆಯ ಸಮಯದಲ್ಲಿ ಐವರು ಆಚಾರ್ಯರುಗಳ (6) ಷಟ್‌ಪಂಚಕಗಳಿಗೆ ಪೂಜೆಸಲ್ಲಿಸಲಾಗುತ್ತದೆ.

1 ಶ್ರೀ ಕೃಷ್ಣ ಪಂಚಕ : ಇದು ಶ್ರೀಕೃಷ್ಣ ಹಾಗೂ ವಾಸುದೇವ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಆತನ ನಾಲ್ಕು ವ್ಯೂಹಗಳನ್ನು ಒಳಗೊಂಡಿದೆ.

ಇದರಲ್ಲಿ ಶ್ರೀಕೃಷ್ಣ ಮಧ್ಯದಲ್ಲಿದ್ದು ಉಳಿದವು ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರಗಳಲ್ಲಿರುತ್ತವೆ.

2 ಶ್ರೀ ಸನಕಾದಿ ಪಂಚಕ :– ಇದರಲ್ಲಿ ಸನಕ, ಸನಂದನ, ಸನತ್ಸುಜಾತ, ಸನಾತನ ಮತ್ತು ಸನತ್ಕುಮಾರರಿರುತ್ತಾರೆ. ಸನಕ ಕೇಂದ್ರದಲ್ಲಿದ್ದು ಉಳಿದವರು ಪೂರ್ವೋಕ್ತ ಪ್ರಕಾರದಲ್ಲಿರುತ್ತಾರೆ.

3 ಶ್ರೀ ವ್ಯಾಸ ಪಂಚಕ :– ಶ್ರೀ ವೇದವ್ಯಾಸರು ಮಧ್ಯದಲ್ಲಿರುವ ಈ ಪಂಚಕದಲ್ಲಿ ಪೈಲ (ಋಗ್ವೇದ) ವೈಶಂಪಾಯನ (ಯಜುರ್ವೇದ) ಜೈಮಿನಿ (ಸಾಮವೇದ) ಸುಮಂತ (ಅಥರ್ವಣ) ರಿರುತ್ತಾರೆ.

4 ಶ್ರೀ ಶಂಕರಾಚಾರ್ಯ ಪಂಚಕ :– ಇದರಲ್ಲಿ ಶ್ರೀ ಶಂಕರ ಭಗವತ್ಪಾದರು, ಶ್ರೀ ಹಸ್ತಾಮಲಕಆಚಾರ್ಯ ಶ್ರೀ ಸುರೇಶ್ವರಾಚಾರ್ಯ ಶ್ರೀ ಪದ್ಮಪಾದಾಚಾರ್ಯ. ಮತ್ತು ಶ್ರೀ ತೋಟಕಾಚಾರ್ಯರಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

5 ಶ್ರೀ ದ್ರವಿಡಾಚಾರ್ಯ ಪಂಚಕ :- ಈ ಪಂಚಕದಲ್ಲಿ ಶ್ರೀ ದ್ರವಿಡಾಚಾರ್ಯ, ಶ್ರೀ ಗೌಡಪಾದಾಚಾರ್ಯ, ಶ್ರೀಗೋವಿಂದ ಭಗವತ್ಪಾದಾಚಾರ್ಯ, ಸಂಕ್ಷೇಪ ಶಾರೀರಕಾಚಾರ್ಯ (ಶ್ರೀ ಸರ್ವಜ್ಞಾತ್ಮರು) ಮತ್ತು ವಿವರಣಾಚಾರ್ಯ (ಶ್ರೀ ಚಿತ್ಸುಖರು) ರಿರುತ್ತಾರೆ ದ್ರವಿಡಾಚಾರ್ಯರು ಕೇಂದ್ರದಲ್ಲಿರುತ್ತಾರೆ.

6 ಶ್ರೀ ಗುರು ಪಂಚಕ : - ಇದು ಗುರು (ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು), ಪರಮ ಗುರು (ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳು), ಪರಮೇಷ್ಠಿ ಗುರು (ವೃದ್ಧ ಶ್ರೀನೃಸಿಂಹ ಭಾರತೀ ಸ್ವಾಮಿಗಳು), ಪರಾಪರ ಗುರು (ಅಭಿನವ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು) ಮತ್ತಿತರ ಬ್ರಹ್ಮವಿದ್ಯಾಚಾರ್ಯರನ್ನೊಳಗೊಂಡಿದೆ.

ಪ್ರತಿ ಪಂಚಕದ ಪೂಜಾನಂತರ ಸ್ವಾಮಿಗಳವರು ವೇದಮಂತ್ರಗಳೊಡನೆ ಮಹಾಮಂಗಳಾರತಿಯನ್ನು ನೆರವೇರಿಸುವರು. ವೈದಿಕ ವಿದ್ವಾಂಸರು ತೈತ್ತಿರಿಯೋಪನಿಷದ್ (ಶಿಕ್ಷಾವಲ್ಲಿ, ಆನಂದವಲ್ಲಿ ಮತ್ತು ಭೃಗುವಲ್ಲಿ) ಹಾಗೂ ಮಹಾನಾರಾಯಣೋಪನಿಷತ್ತುಗಳ ವಾಚನ ಮಾಡುವರು.

ಅನಂತರ ಸ್ವಾಮಿಗಳವರು ಚಾತುರ್ಮಾಸ್ಯ ಸಂಕಲ್ಪ ಕೈಗೊಳ್ಳುವರು. "ನಾವು ಮಳೆಗಾಲದಲ್ಲಿ ನಾಲ್ಕು ತಿಂಗಳಕಾಲ ನಿಮ್ಮ ಗ್ರಾಮದಲ್ಲಿ ವಸತಿಮಾಡುವೆವು. ನಮ್ಮಿಂದ ಯಾರಿಗೂ ತೊಂದರೆಯಾಗದಿದ್ದಲ್ಲಿ, ನೀವು ನಮಗೆ ಇಲ್ಲಿರಲು ಅನುಮತಿಕೊಡಬಹುದು" ಎಂದು ಶಿಷ್ಯ ಸಂಕುಲಕ್ಕೆ ನುಡಿಯುವರು.

ಪ್ರಾಯೇಣ ಪ್ರಾವೃಷಿ ಪ್ರಾಣಿಸಂಕುಲಂ ವರ್ತ್ಮ ದೃಶ್ಯತೇ ।
ಅತಸ್ತೇಷಾಂ ಅಹಿಂಸಾರ್ಥಂ ಪಕ್ಷಾ ವೈ ಶ್ರುತಿಚೋದನಾತ್ ।
ಸ್ಥಾಸ್ಯಾಮಶ್ಚತುರೋ ಮಾಸಾನತ್ರೈವಾಸತಿ ಬಾಧಕೇ ॥

ಮಳೆಗಾಲದಲ್ಲಿ ಸಂನ್ಯಾಸಿಗಳು ನಾಲ್ಕು ತಿಂಗಳುಗಳ ಕಾಲ ಒಂದೇ ಸ್ಥಳದಲ್ಲಿರುತ್ತಾರೆ. ಅದರೆ "ಪಕ್ಷಾ ವೈ ಮಾಸಾಃ" ಎಂದು ವೇದೋಕ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೆ. ಪಕ್ಷ ಎಂದರೆ ಒಂದು ತಿಂಗಳು. ಅವರು ವ್ರತವನ್ನು ೨ ತಿಂಗಳ ಕಾಲ ಆಚರಿಸುತ್ತಾರೆ ಈ ಅವಧಿಯನ್ನು ಚಾತುರ್ಮಾಸ್ಯ ಎನ್ನುತ್ತಾರೆ.

ಏಕರಾತ್ರಂ ವಸೇತ್ ಗ್ರಾಮೇ ನಗರೇ ಪಂಚರಾತ್ರಕಂ |
ವರ್ಷಾಸ್ವೇಕತ್ರ ತಿಷ್ಠೇತ ಸ್ಥಾನೇ ಪುಣ್ಯಜಲಾವೃತೇ ||

ಎಂಬುದು ಆಶ್ವಲಾಯನ ಋಷಿಗಳ ವಚನ- ಸಂನ್ಯಾಸಿಗಳು ಹಳ್ಳಿಯಲ್ಲಿ ಒಂದು ರಾತ್ರಿ, ನಗರದಲ್ಲಿ ಐದು ರಾತ್ರಿ ನೆಲೆಸಬೇಕು. ಆದರೆ ಮಳೆಗಾಲದಲ್ಲಿ ಮಾತ್ರ ಪರಬ್ರಹ್ಮನನ್ನು ಧ್ಯಾನಿಸುತ್ತಾ ಒಂದೇ ಸ್ಥಳದಲ್ಲಿ ನೆಲಸಬಹುದು. ಸಾಮಾನ್ಯವಾಗಿ ಮಳೆಗಾಲದಲ್ಲಿ ಭೂಮಿಯ ಮೇಲೆ ಕಂಡುಬರುವ ಕ್ರಿಮಿಕೀಟಗಳಿಗೆ ಪರಿವ್ರಾಜಕರಿಂದ ಹಿಂಸೆಯಾಗದಿರಲೆಂದು ಈ ನಿಯಮವನ್ನು ಪಾಲಿಸಲಾಗುತ್ತದೆ.

ಸಂನ್ಯಾಸಿಗಳು ಅಹಿಂಸಾವ್ರತವನ್ನು ಕೈಗೊಂಡಿರುವುದರಿಂದ ಅವರು ಈ ಅವಧಿಯಲ್ಲಿ ಸಂಚಾರವನ್ನು ನಿಲ್ಲಿಸಿ, ಒಂದೇ ಸ್ಥಳದಲ್ಲಿರುತ್ತಾ ಬ್ರಹ್ಮ ವಿಚಾರ ತತ್ಪರರಾಗಿ, ಉಪನಿಷದ್ರಹಸ್ಯಗಳ ಬಗ್ಗೆ ಚಿಂತನೆ ನಡೆಸುವರು. ಇದಕ್ಕೆ ಪೂರ್ವಭಾವಿಯಾಗಿ ಆಷಾಢಮಾಸದ ಹುಣ್ಣಿಮೆಯ ದಿನ ವ್ಯಾಸ ಪೂಜೆಯನ್ನು ನೇರವೇರಿಸುವರು. ಆ ದಿನವನ್ನು ಗುರುಹುಣ್ಣಿಮೆ ಎನ್ನು ವರು.

ಶ್ರೀ ಸ್ವಾಮಿಗಳು ಸಂಕಲ್ಪಗೈದನಂತರ ಉತ್ತರವಾಗಿ ಶಿಷ್ಯರು,

ನಿವಸಂತು ಸುಖೇನಾತ್ರ ಗಮಿಷ್ಯಾಮೋ ಕೃತಾರ್ಥತಾಮ್ |
ಯಥಾಶಕ್ತಿಂ ಚ ಶುಶ್ರೂಷಾಂ ಕರಿಷ್ಯಾಮೋ ವಯಂ ಮುದಾ ||

ಗುರುಗಳವರಿಗೆ "ತಾವು ಸಂತೋಷದಿಂದ ಇಲ್ಲಿ ನೆಲೆಸಿ. ನಾವು ಯಥಾ ಶಕ್ತಿ ತಮ್ಮ ಸೇವೆಸಲ್ಲಿಸುತ್ತೇವೆ" ಎಂದು ಹೇಳುವರು.

ಅನಂತರ ಶೃಂಗೇರಿ ಶ್ರೀ ಜಗದ್ಗುರು ಪರಂಪರಾ ಸ್ತೋತ್ರ ಪಠಣಮಾಡಿ ಸ್ವಾಮಿಗಳು ಗುರುಪರಂಪರೆಯ ಆಚಾರ್ಯರುಗಳಿಗೆ ಪುಷ್ಪಾರ್ಚನೆ ಮಾಡುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾನುಶಾಸನ

ಶ್ರೀ ಶಂಕರಾಚಾರ್ಯರು ಉಪದೇಶಮಾಡಿದ 'ಮಹಾನುಶಾಸನ', ಅವರ ಧರ್ಮಸ್ಥಾಪನೆಯ ಅಭಿಪ್ರಾಯವನ್ನು ತಿಳಿಯಲು ಅತ್ಯಂತ ಉಪಾದೇಯವಾಗಿದೆ. ಆದರೆ, ಈ ಮಹಾನುಶಾಸನದ ಸಂಸ್ಕೃತ ಮೂಲವು ಸಾಧಾರಣವಾಗಿ ಅಪೂರ್ಣವಾಗಿ ಸಿಗುವುದೆಂಬುದು ವಿಷಾದದ ಸಂಗತಿ. ಅನೇಕ ಹಸ್ತಲಿಖಿತ ಪ್ರತಿಗಳನ್ನು ಸಂಶೋಧಿಸಿ, ಇಲ್ಲಿ ಅದರ ಮೂಲ ರೂಪವನ್ನು ಪೂರ್ಣವಾಗಿ ಕೊಟ್ಟಿದ್ದೇವೆ. ಆದುದರಿಂದ, ಜಿಜ್ಞಾಸುಗಳ ಅನುಕೂಲಕ್ಕಾಗಿ ಈ ಮಹಾನುಶಾಸನವನ್ನು ಇಲ್ಲಿ ಕೊಡಲಾಗಿದೆ.—

ಆಮ್ನಾಯಾಃ ಕಥಿತಾ ಹ್ಯೇತೇ ಯತೀನಾಂ ಚ ಪೃಥಕ್ ಪೃಥಕ್ ।
ತೇ ಸರ್ವೇ ಚತುರಾಚಾರ್ಯಾಃ ನಿಯೋಗೇನ ಯಥಾಕ್ರಮಮ್ ॥ ೧ ॥

ಪ್ರಯೋಕ್ತವ್ಯಾಃ ಸ್ವಧರ್ಮೇಷು ಶಾಸನೀಯಾಸ್ತತೋಽನ್ಯಥಾ ।
ಕುರ್ವಂತು ಏವ ಸತತಮಟನಂ ಧರಣೀತಲೇ ॥ ೨ ॥

ವಿರುದ್ಧಾಚಾರಣ ಪ್ರಾಪ್ತಾವಾಚಾರ್ಯಾಣಾಂ ಸಮಾಜ್ಞಯಾ ।
ಲೋಕಾನ್ ಸಂಶೀಲಯಂತ್ಯೇವ ಸ್ವಧರ್ಮಪ್ರತಿರೋಧಿತಃ ॥ ೩ ॥

ಸ್ವರಾಷ್ಟ್ರಪ್ರತಿಷ್ಠಿತ್ಯೈ ಸಂಚಾರಃ ಸುವಿಧೀಯತಾಮ್ ।
ಮಠೇ ತು ನಿಯತೋ ವಾಸಃ ಆಚಾರ್ಯಸ್ಯ ನಯುಜ್ಯತೇ ॥ ೪ ॥

ವರ್ಣಾಶ್ರಮ ಸದಾಚಾರಾ ಅಸ್ಮಾಭಿರ್ಯೇ ಪ್ರಸಾಧಿತಾಃ ।
ರಕ್ಷಣೀಯಾಸ್ತು ಏವೈತೇ ಸ್ವೇ ಸ್ವೇ ಭಾಗೇ ಯಥಾ ವಿಧಿ ॥ ೫ ॥

ಯತೋ ವಿನಷ್ಟಿರ್ಮಹತೀ ಧರ್ಮಸ್ಯಾತ್ರಪ್ರಜಾಯತೇ ।
ಮಾಂದ್ಯಂ ಸಂತ್ಯಾಜ್ಯಮೇವಾತ್ರ ದಾಕ್ಷ್ಯಮೇವಾತ್ರ ಸಮಾಶ್ರಯೇತ್
॥ ೬ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಸ್ಪರ ವಿಭಾಗೇತು ಪ್ರವೇಶೋ ನ ಕದಾಚನ ।
ಪರಸ್ಪರೇಣ ಕರ್ತವ್ಯಾ ಆಚಾರ್ಯೇಣ ವ್ಯವಸ್ಥಿತಃ ॥ ೭ ॥

ಮರ್ಯಾದಾಯಾ ವಿನಾಶೇನ ಲುಪ್ತ್ಯೇರನ್ನಿಯಮಾಃ ಶುಭಾಃ ।
ಕಲಹಾಂಗಾರ ಸಂಪತ್ತಿರತಸ್ತಾಂ ಪರಿವರ್ಜಯೇತ್ ॥ ೮ ॥

ಪರಿವ್ರಾಡಾಚಾರ್ಯ ಮರ್ಯಾದಾಂ ಮಾಮಕೀನಂ ಯಥಾವಿಧಿ ।
ಚತುಃ ಪೀಠಾಧಿಗಾಂ ಸತ್ತಾಂ ಪ್ರಯುಂಜ್ಯಾಚ್ಚ ಪೃಥಕ್
ಪೃಥಕ್ ॥ ೯ ॥

ಶುಚಿರ್ಜಿತೇಂದ್ರಿಯೋ ವೇದ ವೇದಾಂಗಾದಿ ವಿಶಾರದಃ ।
ಯೋಗಜ್ಞಃ ಸರ್ವಶಾಸ್ತ್ರಾಣಾಂ, ಸಮುದಾಸ್ಥಾನ-
ಮಾಪ್ನುಯಾತ್ ॥ ೧೦ ॥

ಉತ್ತಲಕ್ಷಣ ಸಂಪನ್ನಃ ಸ್ಯಾಚ್ಚೇನ್ಮತ್ಪೀಠ ಭಾಗ್ಭವೇತ್ ।
ಅನ್ಯಥಾರೂಢಪೀಠೋಽಪಿ ನಿಗ್ರಹಾರ್ಹೋ ಮನೀಷಿಣಾಂ ॥ ೧೧ ॥

ನಾಜಾತು ಮಠಮುಚ್ಛಿಂದ್ಯಾದಧಿಕಾರಿಣ್ಯುಪಸ್ಥಿತೇ ।
ವಿಘ್ನಾನಾಮಪಿ ಬಾಹುಲ್ಯಾದೇಷ ಧರ್ಮಃ ಸನಾತನಃ ॥ ೧೨ ॥

ಅಸ್ಮತ್ಪೀಠ ಸಮಾರೂಢಃ ಪರಿವ್ರಾಡುಕ್ತಲಕ್ಷಣಃ ।
ಅಹಮೇವೇತಿ ವಿಜ್ಞೇಯೋ ಯಸ್ಯದೇವ ಇತಿ ಶ್ರುತೇಃ ॥ ೧೩ ॥

ಏಕ ಏವಾಭಿಷೇಚ್ಯಃ ಸ್ಯಾದಂತೇ ಲಕ್ಷಣ ಸಮ್ಮತಃ ।
ತತ್ಪೀಠೇ ಕ್ರಮೇಣೈವ ನ ಬಹು ಯುಜ್ಯತೇ ಕ್ವಚಿತ್ ॥ ೧೪ ॥

ಸುಧನ್ವನಃ ಸಮೌತ್ಸುಕ್ಯ ನಿವೃತ್ತ್ಯೈ ಧರ್ಮ ಹೇತವೇ ।
ದೇವರಾಜೋಪಚಾರಾಂಶ್ಚ ಯಥಾವದನುಪಾಲಯೇತ್ ॥ ೧೫ ॥

ಕೇವಲಂ ಧರ್ಮಮುದ್ದಿಶ್ಯ ವಿಭವೋ ಬ್ರಾಹ್ಮಚೇತಸಾಂ ।
ವಿಹಿತಶ್ಚೋಪಕಾರಾಯ ಪದ್ಮಪತ್ರ ನಯಂ ವ್ರಜೇತ್ ॥ ೧೬ ॥

ಸುಧನ್ವಾಹಿ ಮಹಾರಾಜಸ್ತದನ್ಯೇ ಚ ನರೇಶ್ವರಾಃ ।
ಧರ್ಮ ಪಾರಂಪರೀಮೇತಾಂ ಪಾಲಯಂತು ನಿರಂತರಮ್ ॥ ೧೭ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚಾತುರ್ವರ್ಣ್ಯ ಯಥಾಯೋಗ್ಯಂ ವಾಙ್ಮನಃ ಕಾಯ ಕರ್ಮಭಿಃ |
ಗುರೋಃ ಪೀತಂ ಸಮರ್ಜೇತ ವಿಭಾಗಾನುಕ್ರಮೇಣ ವೈ || ೧೮ ||

ಧರ್ಮಮಾಲಂಬ್ಯ ರಾಜಾನಃ ಪ್ರಜಾಭ್ಯಃ ಕರಭಾಗಿನಃ |
ಕೃತಾಧಿಕಾರಾಃ ಆಚಾರ್ಯಾ ಧರ್ಮತಸ್ತದ್ವದೇವ ಹಿ || ೧೯ ||

ಧರ್ಮೋ ಮೂಲಂ ಮನುಷ್ಯಾಣಾಂ ಸ ಆಚಾರ್ಯಾವಲಂಬಿನಃ |
ತಸ್ಮಾದಾಚಾರ್ಯ ಸುಮಣೇಃ ಶಾಸನಂ ಸರ್ವತೋಽಧಿಕಃ || ೨೦ ||

ತಸ್ಮಾತ್ಸರ್ವ ಪ್ರಯತ್ನೇನ ಶಾಸನಂ ಸರ್ವ ಸಂಮತಂ |
ಆಚಾರ್ಯಸ್ಯ ವಿಶೇಷೇಣ ಹ್ಯೌದಾರ್ಯ ಭರ ಭಾಗಿನಃ || ೨೧ ||

ಆಚಾರ್ಯಾಕ್ಷಿಪ್ತ ದಂಡಾಸ್ತು ಕೃತ್ವಾ ಪಾಪಾನಿ ಮಾನವಾಃ |
ನಿರ್ಮಲಾ ಸ್ವರ್ಗಮಾಯಾಂತಿ ಸಂತಃ ಸುಕೃತಿನೋ ಯಥಾ || ೨೨ ||

ಇತ್ಯೇವಂ ಮನುರಪ್ಯಾಹ ಗೌತಮೋಽಪಿ ವಿಶೇಷತಃ |
ವಿಶಿಷ್ಟ ಶಿಷ್ಟಾಚಾರೋಽಪಿ ಮೂಲಾದೇವ ಪ್ರಸಿದ್ಧ್ಯತಿ || ೨೩ ||

ತಾನಾಚಾರ್ಯೋಪದೇಶಾಂಶ್ಚ ರಾಜದಂಡಾಂಶ್ಚ ಪಾಲಯೇತ್ |
ತಸ್ಮಾದಾಚಾರ್ಯ ರಾಜಾನಾವನವದ್ಯೌ ನ ನಿಂದಯೇತ್ || ೨೪ ||

ಧರ್ಮಸ್ಯ ಪದ್ಧತಿರ್ಹ್ಯೇಷ ಜಗತಃ ಸಿದ್ಧಿಹೇತವೇ |
ಸರ್ವಂ ವರ್ಣಾಶ್ರಮಾಣಾಂ ಹಿ ಯಥಾ ಶಾಸ್ತ್ರಂ ವಿಧೀಯತೇ || ೨೫ ||

ಕೃತೇ ವಿಶ್ವಗುರುಃಬ್ರಹ್ಮಾ ತ್ರೇತಾಯಾಮೃಷಿಸತ್ತಮಃ |
ದ್ವಾಪರೇ ವ್ಯಾಸ ಏವ ಸ್ಯಾತ್ ಕಲಾವತ್ರ ಭವಾಮ್ಯಹಂ || ೨೬ ||

|| ಇತಿ ಮಹಾನುಶಾಸನಮ್ ||

ಶ್ರೀ ಬ[illegible] ಗ್ರಂಥದಿಂದ ಸಂಗ್ರಹಿಸಿದುದು

Sri Vidyabharathi Book Centre Sringeri

CC-O. In Public Domain. Digitized by eGangotri

೩. ಶ್ರೀ ಚಂದ್ರಮೌಳೀಶ್ವರ ಮತ್ತು ರೇವಣಾರ್ಯ

ಶೃಂಗೇರಿಯ ಆಮ್ನಾಯ ಪೀಠದಲ್ಲಿ ಪಟ್ಟಭದ್ರರಾದ ಆಚಾರ್ಯರುಗಳಿಂದ ಅನೇಕ ಶತಮಾನಗಳಿಂದ ಪೂಜಿಸಲ್ಪಡುತ್ತಿರುವ ರತ್ನಗರ್ಭಗಣಪತಿ ಸಹಿತ ಚಂದ್ರಮೌಳೀಶ್ವರ ಲಿಂಗವು ಶ್ರೀಮದಾದ್ಯಶಂಕರ ಭಗವತ್ಪಾದಾಚಾರ್ಯರಿಗೆ ಸಿದ್ಧರಿಂದ ಕೊಡಲ್ಪಟ್ಟಿದ್ದಾಗಿ 'ಗುರುವಂಶ'ವೆಂಬ ಕಾವ್ಯವು ತಿಳಿಸುತ್ತದೆ. ಈ ಕಾವ್ಯವು ಕಾಶೀ ಲಕ್ಷ್ಮಣಶಾಸ್ತ್ರಿಗಳವರಿಂದ ಶೃಂಗೇರಿಯ ಆಚಾರ್ಯಪರಂಪರೆಯಲ್ಲಿ ಜಗದ್ಗುರುಗಳಾದ ಶ್ರೀ ಸಚ್ಚಿದಾನಂದಭಾರತೀ ಮಹಾಸ್ವಾಮಿಗಳವರ ಆಜ್ಞೆಯ ಮೂಲಕ ಬರೆಯಲ್ಪಟ್ಟಿತು. ಸುಮಾರು ೨೫೫ ಸಂವತ್ಸರಗಳ ಹಿಂದೆ ಬರೆದದ್ದು. ಅದರಲ್ಲಿ ಮೂರನೇ ಸರ್ಗದ ಮೂವತ್ತಮೂರನೇ ಶ್ಲೋಕವು ಶ್ರೀ ಚಂದ್ರಮೌಳೀಶ್ವರ ಲಿಂಗಮಸ್ಮೈ ಸದ್ರತ್ನಗರ್ಭಂ ಗಣನಾಯಕಂಚ | ಸವಿಶ್ವರೂಪಾಯ ಸುಸಿದ್ಧದತ್ತಂ - ದತ್ತಾತ್ವನ್ಯಗಾದೀಚ್ಛಿರಮರ್ಚಯೇತಿ || ಎಂಬುದಾಗಿದೆ. ಈ ಕಾವ್ಯಕ್ಕೆ ಮೂಲಕಾರನೇ ವ್ಯಾಖ್ಯಾನವನ್ನು ಬರೆದಿರುವನು. ಈ ಶ್ಲೋಕ ವ್ಯಾಖ್ಯಾನದಲ್ಲಿ 'ಸಂಸಿದ್ಧದತ್ತಂ ಸಂಸಿದ್ಧೇನ ರೇವಣಸಿದ್ಧಮಹಾಯೋಗಿನಾದತ್ತಂ' ಎಂದು ವಿವರಣಮಾಡಿರುವುದು ಅನೇಕ ವಿಧವಾದ ಊಹಾಪೋಹಗಳಿಗೆ ಅವಕಾಶವಿತ್ತಿರುವುದು. ಶ್ರೀರಂಗದ ವಾಣೀವಿಲಾಸ ಮುದ್ರಣಾಲಯದಲ್ಲಿ ಅಚ್ಚಾದ ಪುಸ್ತಕದಲ್ಲಿ (ಪು. ೧೧೦) 'ರೇವಣಾ' ಎಂದು ಣಕಾರೋತ್ತರ ದೀರ್ಘಾಕಾರವು ಅಶುದ್ಧ. ಇದೇ ಕಾವ್ಯದಲ್ಲಿ ೫ ನೇ ಸರ್ಗದ ೫೯ ನೇ ಶ್ಲೋಕದ ೪ನೇ ಪಾದದಲ್ಲಿ ಭದ್ರಂರೇವಣಸಿದ್ಧಯೋಗ್ಯಧಿಗಮಸ್ವಪ್ನಂ' ಎಂದು ಹ್ರಸ್ವಾಕಾರಾಂತ ರೇವಣ ಪದ ಪ್ರಯುಕ್ತವಾಗಿರುವುದು. ಇದೇ ಕಾವ್ಯದ ೬ನೇ ಸರ್ಗ ೩ ನೇ ಶ್ಲೋಕದ ೩ ನೇಪಾದದಲ್ಲಿ "ಉಕ್ತ್ವಾತ್ವಸ್ವಪ್ನೇ ಹರಿಹರನೃಪಂ ರೇವಣಸಿದ್ಧಯೋಗೀಟ್" ಎಂದೂ ಪ್ರಯೋಗವಿದೆ. ಅಲ್ಲಿ "ರೇವಣಃಸಿದ್ಧಯೋಗೀಟ್" ಎಂದು ವ್ಯಾಖ್ಯಾನವೂ ಇದಕ್ಕನುಗುಣವಾಗಿರುವುದೂ ಉಚಿತವಲ್ಲದೆ ಪುಂವಾಚಕವಾದ್ದರಿಂದ ಅಕಾರಾಂತ ರೇವಣಪದವು ಸಮಂಜಸವೆನಿಸುತ್ತವೆ.

ರೇವಣಸಿದ್ಧರು ವೀರಶೈವ ಸಂಪ್ರದಾಯದಲ್ಲಿ ಪ್ರಸಿದ್ಧರಾದವರು. ಇವರು ಶಂಕರಭಗವತ್ಪಾದರ ನಂತರ ೨ ಶತಮಾನಗಳು ಕಳೆದಮೇಲೆ ಜನ್ಮತಾಳಿದರೆಂಬುದು ಚರಿತ್ರನಿರ್ಣೀತವಾಗಿದೆ. ಇವರು ತನಗಿಂತ ಎರಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಶತಮಾನಗಳ ಪೂರ್ವಜರಾದ ಶಂಕರರಿಗೆ ಚಂದ್ರಮೌಳೀಶ್ವರಲಿಂಗವನ್ನಿತ್ತರೆಂಬುದು ಸಂಗತವಾಗಲಾರದು. ಆದರೂ ಕೆಲವರು ಇದರ ಔಚಿತ್ಯಕ್ಕೆ ಪ್ರಯತ್ನ ಮಾಡುತ್ತಲಿರುವರು.

ಈ ವಿಷಯದಲ್ಲಿ ನನ್ನ ಅಭಿಪ್ರಾಯವು ಹೀಗಿರುವುದು. ವೇದ ಪ್ರಾಮಾಣ್ಯವನ್ನಂಗೀಕರಿಸಿ ವೇದೋಕ್ತ ಕರ್ಮಾನುಷ್ಠಾನಗಳನ್ನು ಮಾಡುತ್ತ ಸಿದ್ಧಪುರುಷರಾಗಿ ಗೋತ್ರ ಪ್ರವರ್ತಕರಾದ ಋಷಿಗಳಲ್ಲಿ 'ರೇವಣಃ' ಎಂಬ ನಾಮಧೇಯವುಳ್ಳ ಋಷಿಯಿರುವನು. ಬೋಧಾಯನರು ತಮ್ಮ ಶ್ರೌತ ಸೂತ್ರದಲ್ಲಿ 'ವಿಶ್ವಾಮಿತ್ರಾವ್ಯಾಖ್ಯಾಸ್ಯಾಮಃ' ಎಂದು ಉಪಕ್ರಮಿಸಿ ರೌಕ್ಷಕಾಃ ಸೋಹಲಾ ರೇವಣಾಶ್ಚ ತೇಷಾಂ ತ್ರ್ಯಾರ್ಷೇಯಃ ಪ್ರವರೋ ಭವತಿ. ವೈಶ್ವಾಮಿತ್ರ ರೌಷರೈವಣೇತಿ ಹೋತಾ । ರೇವಣವದ್ವಿಶ್ವಾಮಿತ್ರವದಿತ್ಯಧ್ವರ್ಯುಃ ಎಂದು ರೇವಣರಿಗೆ ಪ್ರವರವನ್ನು ತಿಳಿಸಿರುವರು. ಪ್ರವರ ದರ್ಪಣವೆಂಬ ಗ್ರಂಥದಲ್ಲಿ ರೌಕ್ಷೈಃ ಸೌದ್ಧಹಲಃ ಕ್ರಥಕಃ ವೈತರಾಯಣಃ, ರೇವಣಃ. ತೇಷಾಂವೈಶ್ವಾಮಿತ್ರ ರೌಕ್ಷವಣೇತಿ ಬೋಧಾಯನಃ, ವೈಶ್ವಾಮಿತ್ರ ಗಾಧಿನರೇವಣೇತಿ ವೇತಿ ತಾಗಾಕ್ಷಿಃ ಎಂದು ರೇವಣ ಗೋತ್ರದವರನ್ನು ನಿರ್ದೇಶಿಸಿರುತ್ತಾರೆ. ಲೋಗಾಕ್ಷಿ ಪ್ರಣೀತಪ್ರವರಕಾಂತದಲ್ಲಿ ತ್ರೀಣಿರೈವಣಕುಲಾನಿಭವತಿಂ ತೇಷಾಂ ತ್ರ್ಯಾರ್ಷೇಯಃ ಪ್ರವರಃ ವೈಶ್ವಾಮಿತ್ರಗಾಥಿನ ರೈವಣೇತಿ ರೇವಣವದ್ಗಾಥಿನವದ್ವಿಶ್ವಾಮಿತ್ರವತ್ ಎಂದು ರೇವಣರನ್ನು ವಿಶ್ವಾಮಿತ್ರಕಾಂಡದಲ್ಲಿ ಸ್ಪಷ್ಟವಾಗಿ ನಿರ್ದೇಶಿಸಿರುವರು. ಮೇಲಿನ ಋಷಿವಚನಗಳಿಂದ 'ರೇವಣ' ರೆಂಬ ಗೋತ್ರ ಪ್ರವರ್ತಕ ಋಷಿಗಳು ವೈದಿಕಮಾರ್ಗ ಪ್ರವರ್ತಕರಾಗಿ ಪ್ರಸಿದ್ಧರಾಗಿರುವರು. ಬೋಧಾಯನಾದಿ ಶ್ರೌತಸೂತ್ರಪ್ರವರ್ತಕರು ವೀರಶೈವಮತ ಪ್ರಸಿದ್ಧರಾದ 'ರೇವಣಸಿದ್ಧ' ರನ್ನು ತಮ್ಮ ಸೂತ್ರದಲ್ಲಿ ಗೋತ್ರಪ್ರವರ್ತಕರಾಗಿ ನಿರ್ದೇಶಿಸಿರುವರೆಂಬುದು ಹೃದ್ಯವಲ್ಲ.

ಆದ್ಯ ಶಂಕರಭಗವತ್ಪಾದಾಚಾರ್ಯರಿಗೆ ಲಿಂಗವನ್ನಿತ್ತುದಾಗಿ 'ಗುರು ವಂಶ' ಕಾವ್ಯದಲ್ಲಿ ತಿಳಿಸಿರುವ ರೇವಣಸಿದ್ಧರು ವೈದಿಕಸಂಪ್ರದಾಯ ಸಿದ್ಧರಾದ ರೇವಣರೇ ವಿನಾ ವೀರಶೈವಮತಾಂತರ ಪ್ರಸಿದ್ಧ ರೇವಣರಲ್ಲವೆಂದು ನಿರ್ಣಯಿಸಬಹುದಾಗಿದೆ. ಇದರಿಂದ ಪ್ರಬಲ ಪ್ರಮಾಣ ರಹಿತವಾದ ವಾದಗಳೂ ಪರಿಹೃತವಾಗುವುವು. *ಭಾರದ್ವಾಜ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂತ್ರಾಮ್ನಾಯ

1.

ತ್ರಿವೇಣೀ ಸಂಗಮೇ ತೀರ್ಥೇ ತತ್ತ್ವಮಸ್ಯಾದಿ ಲಕ್ಷಣೇ ।
ಸ್ನಾಯಾತ್ ತತ್ತ್ವಾರ್ಥ ಭಾವೇನ ತೀರ್ಥ ನಾಮಾ ಸ ಉಚ್ಯತೇ ॥

ಆಶ್ರಮ ಗ್ರಹಣೇ ಪ್ರೌಢಃ ಆಶಾಪಾಶ ವಿವರ್ಜಿತಃ ।
ಯಾತಾಯಾತ ವಿನಿರ್ಮುಕ್ತಃ ಏತದಾಶ್ರಮ ಲಕ್ಷಣಃ ॥

ಸುರಮ್ಯ ನಿರ್ಜನೇದೇಶೇ ವಾಸಂ ನಿತ್ಯಂ ಕರೋತಿ ಯಃ ।
ಆಶಾಪಾಶ ವಿನಿರ್ಮುಕ್ತೋ ವನ ನಾಮ ಸ ಉಚ್ಯತೇ ॥

ಅರಣ್ಯೇ ಸಂಸ್ಥಿತೋ ನಿತ್ಯಂ ಆನಂದಂ ನಂದನೇ ವನೇ ।
ತ್ಯಕ್ತ್ವಾ ಸರ್ವಮಿದಂ ವಿಶ್ವಂ ಅರಣ್ಯಂ ಲಕ್ಷಣಂ ಕಿಲ ॥

ವಾಸೋ ಗಿರಿವರೇ ನಿತ್ಯಂ ಗೀತಾಭ್ಯಾಸೇ ಹಿ ತತ್ಪರಃ ।
ಗಂಭೀರಾಚಲ ಬುದ್ಧಿಶ್ಚ ಗಿರಿ ನಾಮ ಸ ಉಚ್ಯತೇ ॥

ವಸೇತ್ಪರ್ವತ ಮೂಲೇಷು ಪ್ರೌಢೋ ಯೋ ಧ್ಯಾನತತ್ಪರಃ ।
ಸಾರಾಸಾರಂ ವಿಜಾನಾತಿ ಪರ್ವತಃ ಪರಿಕೀರ್ತಿತಃ ॥

ವಸೇತ್ಸಾಗರ ಗಂಭೀರೇ ಘನ ರತ್ನ ಪರಿಗ್ರಹಃ ।
ಮರ್ಯಾದಾಶ್ಚಾನ ಲಂಘ್ಯೇತ ಸ ಸಾಗರಃ ಪರಿಕೀರ್ತಿತಃ ॥

ಸ್ವರ ಜ್ಞಾನ ವಶೋ ನಿತ್ಯಂ ಸ್ವರವಾದೀ ಕವೀಶ್ವರಃ ।
ಸಂಸಾರ ಸಾಗರೇ ಸಾರಾಭಿಜ್ಞೋ ಯಃ ಸಃ ಸರಸ್ವತೀ ॥

ವಿದ್ಯಾಭಾರೇಣ ಸಂಪೂರ್ಣಃ ಸರ್ವಭಾರಂ ಪರಿತ್ಯಜೇತ್ ।
ದುಃಖ ಭಾರಂ ನ ಜಾನಾತಿ ಭಾರತೀ ಪರಿಕೀರ್ತಿತಃ ॥

ಜ್ಞಾನ ತತ್ತ್ವೇನ ಸಂಪೂರ್ಣಃ ಪೂರ್ಣತತ್ತ್ವೇ ಪದೇ ಸ್ಥಿತಃ ।
ಪರ ಬ್ರಹ್ಮರತೋ ನಿತ್ಯಂ ಪುರೀ ನಾಮ ಸ ಉಚ್ಯತೇ ॥

Sri Vidyabharathi Book Centre, Sringeri

CC-O. In Public Domain. Digitized by eGangotri

೫ ಶೃಂಗೇರಿ—ಶ್ರೀ ಗುರುಪರಂಪರೆ

	ಪರಂಪರೆ	ಸನ್ಯಾಸ, ಕ್ರಿ.ಶ,	ಮುಕ್ತಿ. ಕ್ರಿ,ಶ,	ಪೀಠಾಧಿಪತ್ಯ, ಕಾಲ
೧.	*ಶ್ರೀ ಶಂಕರಭಗವತ್ಪಾದರು	೬೯೨	೭೧೬	....
೨.	ಶ್ರೀ ಸುರೇಶ್ವರಾಚಾರ್ಯರು	೭೦೧	೭೭೩	೭೨
೩	ಶ್ರೀ ನಿತ್ಯಬೋಧಘನಾಚಾರ್ಯರು	೭೫೭	೮೪೮	೭೫
೪.	ಶ್ರೀ ಜ್ಞಾನಘನಾಚಾರ್ಯರು	೮೪೬	೯೧೦	೬೨
೫.	ಶ್ರೀ ಜ್ಞಾನೋತ್ತಮಾಚಾರ್ಯರು	೯೦೫	೯೫೩	೪೩
೬.	ಶ್ರೀ ಜ್ಞಾನಗಿರಿಆಚಾರ್ಯರು	೯೪೯	೧೦೩೮	೮೫
೭.	ಶ್ರೀ ಸಿಂಹಗಿರಿಆಚಾರ್ಯರು	೧೦೩೬	೧೦೯೮	೬೦
೮.	ಶ್ರೀ ಈಶ್ವರತೀರ್ಥರು	೧೦೯೭	೧೧೪೬	೪೮
೯.	ಶ್ರೀ ನೃಸಿಂಹತೀರ್ಥರು	೧೧೪೬	೧೨೨೮	೮೨
೧೦.	ಶ್ರೀ ವಿದ್ಯಾಶಂಕರತೀರ್ಥರು	೧೨೨೮	೧೩೩೩	೧೦೫
೧೧.	ಶ್ರೀ ಭಾರತೀಕೃಷ್ಣತೀರ್ಥರು	೧೩೨೮	೧೩೮೦	೫೭
೧೨.	ಶ್ರೀ ವಿದ್ಯಾರಣ್ಯರು	೧೩೩೧	೧೩೮೬	೬
೧೩.	ಶ್ರೀ ಚಂದ್ರಶೇಖರಭಾರತಿಗಳವರು I	೧೩೬೮	೧೩೮೯	೩
೧೪.	ಶ್ರೀ ನೃಸಿಂಹಭಾರತಿಗಳವರು I	೧೩೮೭	೧೪೦೮	೧೯
೧೫.	ಶ್ರೀ ಪುರುಷೋತ್ತಮಭಾರತಿಗಳವರು I	೧೪೦೬	೧೪೪೮	೪೦
೧೬.	ಶ್ರೀ ಶಂಕರಾನಂದಭಾರತಿಗಳವರು	೧೪೨೮	೧೪೫೪	೬
೧೭.	ಶ್ರೀ ಚಂದ್ರಶೇಖರಭಾರತಿಗಳವರು II	೧೪೪೪	೧೪೬೪	೧೦
೧೮.	ಶ್ರೀ ನೃಸಿಂಹಭಾರತಿಗಳವರು II	೧೪೬೪	೧೪೭೯	೧೫

*ಜನನ—೬೮೪

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಂಪರೆ	ಸನ್ಯಾಸ, ಕ್ರಿ.ಶ.	ಮುಕ್ತಿ, ಕ್ರಿ.ಶ.	ಪೀಠಾಧಿಪತ್ಯ, ಕಾಲ
೧೯. ಶ್ರೀ ಪುರುಷೋತ್ತಮಭಾರತಿಗಳವರು II	೧೪೭೨	೧೫೧೭	೩೮
೨೦. ಶ್ರೀ ರಾಮಚಂದ್ರಭಾರತಿಗಳವರು	೧೫೦೮	೧೫೬೦	೪೩
೨೧. ಶ್ರೀ ನೃಸಿಂಹಭಾರತಿಗಳವರು III	೧೫೫೭	೧೫೭೩	೧೩
೨೨. ಶ್ರೀ ನೃಸಿಂಹಭಾರತಿಗಳವರು IV	೧೫೭೩	೧೫೭೬	೩
೨೩. ಶ್ರೀ ನೃಸಿಂಹಭಾರತಿಗಳವರು V	೧೫೭೬	೧೫೯೯	೨೩
೨೪. ಶ್ರೀಮದಭಿನವನೃಸಿಂಹಭಾರತಿಗಳವರು I....	೧೫೯೯	೧೬೨೨	೨೩
೨೫. ಶ್ರೀ ಸಚ್ಚಿದಾನಂದಭಾರತಿಗಳವರು I	೧೬೨೨	೧೬೬೩	೪೧
೨೬. ಶ್ರೀ ನೃಸಿಂಹಭಾರತಿಗಳವರು IV	೧೬೬೩	೧೭೦೫	೪೨
೨೭. ಶ್ರೀ ಸಚ್ಚಿದಾನಂದಭಾರತಿಗಳವರು II	೧೭೦೫	೧೭೪೧	೩೬
೨೮. ಶ್ರೀಮದಭಿನವಸಚ್ಚಿದಾನಂದಭಾರತಿಗಳವರು I	೧೭೪೧	೧೭೬೭	೨೬
೨೯. ಶ್ರೀ ನೃಸಿಂಹಭಾರತಿಗಳವರು VII	೧೭೬೭	೧೭೭೦	೩
೩೦. ಶ್ರೀ ಸಚ್ಚಿದಾನಂದಭಾರತಿಗಳವರು III	೧೭೭೦	೧೮೧೪	೪೪
೩೧. ಶ್ರೀಮದಭಿನವಸಚ್ಚಿದಾನಂದ ಭಾರತಿಗಳವರು II	೧೮೧೪	೧೮೧೭	೩
೩೨. ಶ್ರೀ ನೃಸಿಂಹಭಾರತಿಗಳವರು VIII	೧೮೧೭	೧೮೭೯	೬೨
೩೩. ಶ್ರೀ ಸಚ್ಚಿದಾನಂದಶಿವಾಭಿನವನೃಸಿಂಹ ಭಾರತಿಗಳವರು	೧೮೬೬	೧೯೧೨	೩೩
೩೪ ಶ್ರೀ ಚಂದ್ರಶೇಖರಭಾರತಿಗಳವರು III	೧೯೧೨	೧೯೫೪	೪೨
೩೫. *ಶ್ರೀಮದಭಿನವವಿದ್ಯಾತೀರ್ಥರು	೧೯೩೧	—	—
೩೬. ಶ್ರೀ ಭಾರತೀತೀರ್ಥರು	೧೯೭೪	—	—

*ಪಟ್ಟಾಭಿಷೇಕ—೧೯೫೪

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಲೇಖಕರಿಂದ ಬರಲಿರುವ ಮತ್ತೊಂದು
ಸಂಶೋಧನ ಕೃತಿ :

“ವಿದ್ಯಾ ಶಂಕರ”

ಶ್ರೀ ವಿದ್ಯಾರಣ್ಯರ ಗುರುಗಳಾದ
ಶ್ರೀ ವಿದ್ಯಾತೀರ್ಥ (೧೨೨೮-೧೩೩೩) ರನ್ನು
ಕುರಿತ ಅಧ್ಯಯನ

ವಿವರಗಳಿಗೆ

ವಿದ್ಯಾ ಶಂಕರ ಪ್ರಕಾಶನ
30, ದೇವೀರಮ್ಮಣ್ಣೀ ಅಗ್ರಹಾರ
ಮೈಸೂರು – 570 004

Sri Vidyabharathi Book Centre, Sringeri